# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಗುರುವಾರ 2023

ಸಂಪುಟ: 44 | ಸಂಚಿಕೆ: 244 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಕೊರೊನಾ ರೂಪಾಂತರಿಗೆ ರಾಜ್ಯದಲ್ಲಿ ಇಬ್ಬರು ಬಲಿ

● ಬಹು ಅಂಗಾಂಗ ವೈಫಲ್ಯದಿಂದ ಓರ್ವ, ಉಸಿರಾಟದ ತೊಂದರೆ ಇದ್ದ ಮತ್ತೋರ್ವ ಸೋಂಕಿನಿಂದ ಸಾವು ● ಎಚ್ಚೆತ್ತ ರಾಜ್ಯ ಸರ್ಕಾರ; ಇಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಉನ್ನತ ಸಭೆ ● ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವಿಯ ವೀಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಸಮಗ್ರ ಮಾಹಿತಿ ಸಂಗ್ರಹ ● ಸೋಂಕು ಪತ್ತೆಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ಹೆಚ್ಚಿಸಲು ಸೂಚನೆ




ಬುಧವಾರ ನವದೆಹಲಿಯಲ್ಲಿ ಕೇಂದ್ರ ಆರೋಗ್ಯ ಸಚಿವ ಮನಸುಖ್ ಮಾಂಡವಿಯ ಅವರು ವೀಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಗಳ ಆರೋಗ್ಯ ಸಚಿವರು, ಅಧಿಕಾರಿಗಳೊಂದಿಗೆ ಕೋವಿಡ್ ರೂಪಾಂತರ ಸೋಂಕು ನಿಯಂತ್ರಣ ಸಂಬಂಧ ವಿಚಾರ ವಿನಿಮಯ ನಡೆಸಿದರು.

**ಬೆಂಗಳೂರು, ಡಿ.20(ಕೆಎಂಶಿ)–** ಕೊರೊನಾ ರೂಪಾಂತರಿ ಸೋಂಕಿಗೆ ರಾಜ್ಯದಲ್ಲಿ ಇಬ್ಬರು ಬಲಿಯಾಗಿದ್ದಾರೆ. ಅದು ರಾಜಧಾನಿ ಬೆಂಗಳೂರಿನಲ್ಲೇ. ಇದರಿಂದ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಗುರುವಾರ) ಮಧ್ಯಾಹ್ನ ಒಂದು ಗಂಟೆಗೆ ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಸಭೆ ಕರೆದಿದ್ದಾರೆ.



ಇದರ ಮಧ್ಯೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ವಿಡಿಯೊ ಕಾನ್ಫರೆನ್ಸ್ ಮೂಲಕ ಕರ್ನಾಟಕದ ಆರೋಗ್ಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ, ರಾಜ್ಯದಲ್ಲಿನ ಕೊರೊನಾ ಸೋಂಕಿನ ಸ್ಥಿತಿಗತಿ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಎರಡನೇ ಬಾರಿಗೆ ಕೋವಿಡ್ ಲಸಿಕೆ ತೆಗೆದುಕೊಂಡ ನಂತರವೂ ಕರ್ನಾಟಕದಲ್ಲಿ ಸೋಂಕು ಹರಡುತ್ತಿರುವ ಬಗ್ಗೆ ಮಾಹಿತಿ ನೀಡಿ. ಸೋಂಕು ಪತ್ತೆಯ ಆರ್‌ಟಿ–ಪಿಸಿಆರ್ ಪರೀಕ್ಷೆ ಹೆಚ್ಚು ಮಾಡಿ, ಸೋಂಕಿಗೆ ಒಳಗಾದವರನ್ನು ಪ್ರತ್ಯೇಕಗೊಳಿಸಿ ಚಿಕಿತ್ಸೆ ನೀಡಿ ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.

● 10ನೇ ಪುಟಕ್ಕೆ

## ಬಸ್ ಪ್ರಯಾಣಿಕರಿಗೆ ಮಾಸ್ಕ್ ಕಡ್ಡಾಯ



**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಭೀತಿ ಹಿನ್ನೆಲೆ ಸರ್ಕಾರದ ಮಾರ್ಗಸೂಚಿಯಂತೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಮಾಸ್ಕ್ ಕಡ್ಡಾಯವಾಗಿ ಧರಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ಸಂಬಂಧ ಮಾಧ್ಯಮದವರೊಂದಿಗೆ ಮಾತನಾಡಿದ ರಾಮಲಿಂಗಾರೆಡ್ಡಿ, ಸರ್ಕಾರದ ಆದೇಶವನ್ನು ನಾವು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತೇವೆ. ಇಂದು ಕೇಂದ್ರ ಆರೋಗ್ಯ ಸಚಿವರ ಜೊತೆ ಸಚಿವ ದಿನೇಶ್ ಗುಂಡೂರಾವ್

● 10ನೇ ಪುಟಕ್ಕೆ

### ಕೊರೊನಾ ರೂಪಾಂತರ ಜೆಎನ್.1 ಹಾವಳಿ ಹಿನ್ನೆಲೆ

# ಕ್ರಿಸ್‌ಮಸ್, ಹೊಸ ವರ್ಷಾಚರಣೆಗೆ ಯಾವ ನಿರ್ಬಂಧವಿಲ್ಲ; ಆದರೆ ಮುನ್ನೆಚ್ಚರಿಕೆ ವಹಿಸಿ

### ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ





ಮೈಸೂರು, ಡಿ.20(ಆರ್‌ಕೆ)– ಕೊರೊನಾ ರೂಪಾಂತರಿ ಜೆಎನ್.1 ವೈರಸ್ ಹರಡುತ್ತಿರುವುದರಿಂದ ಮೈಸೂರು ಜಿಲ್ಲಾಡಳಿತವು ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಮೈಸೂರಿನ ಕೆ.ಆರ್., ಸೂಪರ್ ಸ್ಪೆಷಾಲಿಟಿ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಬೆಡ್‌ಗಳೊಂದಿಗೆ ಕೋವಿಡ್ ರೋಗಿಗಳ ಚಿಕಿತ್ಸೆಗೆ ವಾರ್ಡ್‌ಗಳನ್ನು ಸಜ್ಜುಗೊಳಿಸಲಾಗಿದ್ದು, ಐಸಿಯು, ವೆಂಟಿಲೇಟರ್, ಔಷಧಿ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ವೈದ್ಯರು, ನರ್ಸ್‌ಗಳು, ಡಿ ಗ್ರೂಪ್ ನೌಕರರು ಸೇವೆಗೆ ಲಭ್ಯವಿರುವಂತೆ ಈಗಾಗಲೇ ವ್ಯವಸ್ಥೆ ಮಾಡಲಾಗಿದೆ. ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಡಿಸೆಂಬರ್ 25ರ ಕ್ರಿಸ್‌ಮಸ್ ಹಾಗೂ 31ರಂದು ಹೊಸ ವರ್ಷಾಚರಣೆಗೆ ಯಾವುದೇ ನಿರ್ಬಂಧವೂ ಇಲ್ಲ. ಪ್ರತ್ಯೇಕ ಮಾರ್ಗಸೂಚಿ ಹೊರಡಿಸಿಲ್ಲ. ಆದರೆ ಜನರು ಮುನ್ನೆಚ್ಚರಿಕೆ ವಹಿಸುವುದು ಅತ್ಯವಶ್ಯ ಎಂದರು.

60 ವರ್ಷ ಮೇಲ್ಪಟ್ಟವರು, ರೋಗಿಗಳು, ಬಹು ಆರೋಗ್ಯ ಸಮಸ್ಯೆ ಇರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಅಂತಹವರು ಜನರೊಂದಿಗೆ ಅಥವಾ ಗುಂಪಿನಲ್ಲಿ ಸೇರಬಾರದು. ಸಾರ್ವಜನಿಕ ಸ್ಥಳಗಳಲ್ಲಿ ಅಂತರ ಕಾಪಾಡಬೇಕು ಎಂದಿರುವ ಡಾ.ರಾಜೇಂದ್ರ ಜ್ವರ, ನೆಗಡಿ, ಕೆಮ್ಮು,

● 10ನೇ ಪುಟಕ್ಕೆ

### ಲೋಕಸಭಾ ಚುನಾವಣೆ ಸೀಟು ಹಂಚಿಕೆ; ಅಭ್ಯರ್ಥಿಗಳ ಆಯ್ಕೆ ಸಂಬಂಧ

# ಬಿಜೆಪಿ ವರಿಷ್ಠರೊಂದಿಗೆ ಮಾಜಿ ಸಿಎಂ ಕುಮಾರಸ್ವಾಮಿ ಚರ್ಚೆ

● ಇಂದು ತಂದೆಯೊಂದಿಗೆ ಪ್ರಧಾನಿ ಭೇಟಿ ● ಇದೇ ವೇಳೆ ಅಮಿತ್ ಷಾ, ಜೆ.ಪಿ.ನಡ್ಡಾ ಜೊತೆ ಮಾತುಕತೆ ● 4 ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧೆ



ಬೆಂಗಳೂರು, ಡಿ. 20(ಕೆಎಂಶಿ)– ಮುಂಬರುವ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲು ಮಾಜಿ ಮುಖ್ಯಮಂತ್ರಿ ಮತ್ತು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ದೆಹಲಿಗೆ ತೆರಳಿದ್ದಾರೆ. ಬಿಜೆಪಿ ವರಿಷ್ಠರು ನೀಡಿದ ಆಹ್ವಾನದ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ತಮ್ಮ ಸಿಂಗಪೂರ್ ಪ್ರವಾಸವನ್ನು ಒಂದು ದಿನ ಮೊದಲೇ ಮೊಟಕುಗೊಳಿಸಿ ನಗರಕ್ಕೆ ಹಿಂತಿರುಗಿದ್ದರು. ದೆಹಲಿಯಲ್ಲಿ ಮೂರು ದಿನಗಳ ಕಾಲ ಇರಲಿದ್ದು, ನಾಳೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ತಮ್ಮ ತಂದೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರೊಂದಿಗೆ ಭೇಟಿ ಮಾಡಲಿದ್ದಾರೆ. ದೆಹಲಿ ಪ್ರವಾಸ ಸಂದರ್ಭದಲ್ಲಿ ಕೇಂದ್ರ

● 10ನೇ ಪುಟಕ್ಕೆ

### ದಾಖಲೆಯ ಸಂಸದರ ಅಮಾನತಿನ ನಡುವೆಯೇ

# ಲೋಕಸಭೆಯಲ್ಲಿ 3 ಅಪರಾಧ ಕಾನೂನು ತಿದ್ದುಪಡಿ ಮಸೂದೆ ಅಂಗೀಕಾರ

**ನವದೆಹಲಿ:** ಅಮಾನತುಗೊಂಡಿರುವ 97 ವಿರೋಧ ಪಕ್ಷದ ಸಂಸದರ ಅನುಪಸ್ಥಿತಿಯಲ್ಲಿ ಲೋಕಸಭೆ ಬುಧವಾರ ಭಾರತೀಯ ನ್ಯಾಯ (ಎರಡನೇ) ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ (ಎರಡನೇ) ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ (ಎರಡನೇ) ಮಸೂದೆಯನ್ನು ಅಂಗೀಕರಿಸಿತು. ಈ ಮಸೂದೆಗಳು ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಮತ್ತು ಭಾರತೀಯ ಸಾಕ್ಷ್ಯ ಕಾಯಿದೆಯನ್ನು ಬದಲಾಯಿಸುವ ಗುರಿಯನ್ನು ಹೊಂದಿವೆ. ಕ್ರಿಮಿನಲ್ ಕಾನೂನುಗಳನ್ನು ಸುಧಾರಿಸುವ ಮೂರು ಮಸೂದೆಗಳನ್ನು ಆಗಸ್ಟ್ 11 ರಂದು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ ಮಸೂದೆ, 2023 ಎಂದು ಪರಿಚಯಿಸಲಾಗಿತ್ತು.

ನಂತರ ಅವುಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಬ್ರಿಜ್ ಲಾಲ್ ನೇತೃತ್ವದ ಗೃಹ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಲಾಯಿತು, ಅದು ನವೆಂಬರ್ 10 ರಂದು ತನ್ನ ವರದಿಗಳನ್ನು ಸಲ್ಲಿಸಿತ್ತು. ಸಮಿತಿಯ ಸಲಹೆಗಳ



ಪ್ರಕಾರ ಮಸೂದೆಗಳನ್ನು ತಿದ್ದುಪಡಿ ಮಾಡುವ ಬದಲು, ಕೇಂದ್ರ ಸರ್ಕಾರವು ಆಗಸ್ಟ್ 11ರಂದು ಮಸೂದೆಗಳನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿತು. ಸಂಸದೀಯ ಸ್ಥಾಯಿ ಸಮಿತಿಯು ಶಿಫಾರಸು ಮಾಡಿದ ಬದಲಾವಣೆಗಳನ್ನು ಮಾಡಿದ ನಂತರ ಮಸೂದೆಗಳನ್ನು ಮತ್ತೆ ಪರಿಚಯಿಸಲಾಗುವುದು ಎಂದು ಹೇಳಿಕೆಯಲ್ಲಿ ಉಲ್ಲೇಖಿಸಿತ್ತು. ಮರುದಿನ, ಸರ್ಕಾರವು ಮಸೂದೆಗಳ ಇತ್ತೀಚಿನ ಪುನರಾವರ್ತನೆಯನ್ನು ಮತ್ತೆ ಪರಿಚಯಿಸಿತು. ಪ್ರತ್ಯೇಕ ತಿದ್ದುಪಡಿಗಳನ್ನು ಅಂಗೀಕರಿಸುವ

● 10ನೇ ಪುಟಕ್ಕೆ

# ನಿಗಮ–ಮಂಡಳಿಗೆ ನೇಮಕ: ಕಾರ್ಯಕರ್ತರಿಗೆ ಅಧಿಕಾರ

● ರಾಹುಲ್ ಗಾಂಧಿ ಪ್ರತಿಪಾದನೆ ● ನಿಗಮ–ಮಂಡಳಿ ನೇಮಕಾತಿ ವಿಳಂಬ ಸಾಧ್ಯತೆ



**ನವದೆಹಲಿ:** ಕರ್ನಾಟಕದ ನಿಗಮ–ಮಂಡಳಿಗಳಿಗೆ ಅಧ್ಯಕ್ಷರುಗಳ ನೇಮಕ ಪ್ರಕ್ರಿಯೆ ಇನ್ನಷ್ಟು ತಡವಾಗುವ ಸಾಧ್ಯತೆ ಇದೆ. ನಿಗಮ–ಮಂಡಳಿಗಳಲ್ಲಿ ಶಾಸಕರ ಜತೆಗೆ ಕಾರ್ಯಕರ್ತರಿಗೂ ಮೊದಲ ಹಂತದಲ್ಲೇ ಅಧಿಕಾರ ನೀಡಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದಾರೆ.

ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ಹೆಸರನ್ನು ಅಖೈರುಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹಲವು ಸುತ್ತಿನ ಸಮಾಲೋಚನೆ ನಡೆಸಿದ್ದರು. ಮೊದಲ ಹಂತದಲ್ಲಿ ಶಾಸಕರಿಗೆ ಅಧಿಕಾರ ನೀಡಬೇಕು ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದ್ದರೆ, ಕಾರ್ಯಕರ್ತರಿಗೂ ಅವಕಾಶ ನೀಡಬೇಕು ಎಂದು ಶಿವಕುಮಾರ್ ಪಟ್ಟು ಹಿಡಿದಿದ್ದರು. ಮೊದಲ ಹಂತದಲ್ಲಿ 35 ನಿಗಮ–ಮಂಡಳಿಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಉಭಯ ನಾಯಕರು ಸಹಮತಕ್ಕೆ ಬಂದಿದ್ದರು. ಶಿವಕುಮಾರ್ ನಿವಾಸದಲ್ಲಿ ಮಂಗಳವಾರ ರಾತ್ರಿ ಇಬ್ಬರು ನಾಯಕರು ಸಭೆ ಸೇರಿ ಪಟ್ಟಿಗೆ ಅಂತಿಮ ರೂಪ ನೀಡಿದ್ದರು.

ರಾಹುಲ್ ಗಾಂಧಿ ಅವರನ್ನು ಬುಧವಾರ ಮಧ್ಯಾಹ್ನ ಭೇಟಿ ಮಾಡಿದ ಸಿದ್ದರಾಮಯ್ಯ, ರಾಜ್ಯದಿಂದ ಅಖೈರುಗೊಳಿಸಿರುವ ಪಟ್ಟಿಯನ್ನು ನೀಡಿದರು. ಮೊದಲ ಹಂತದಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಉದ್ದೇಶಿಸಿದ್ದನ್ನು ಪ್ರಸ್ತಾಪಿಸಿದರು. ಈ ಮಾತಿಗೆ ರಾಹುಲ್ ಒಪ್ಪಲಿಲ್ಲ. ರಾಜ್ಯದಲ್ಲಿ ಪಕ್ಷ ಅಭೂತಪೂರ್ವ ಜಯ ಗಳಿಸಲು

● 10ನೇ ಪುಟಕ್ಕೆ

### ಸಂಸತ್‌ನಲ್ಲಿ ಕಲರ್ ಗ್ಯಾಸ್ ಸ್ಫೋಟ ಪ್ರಕರಣ

## ಮನೋರಂಜನ್ ಸಹಪಾಠಿ, ಬಾಗಲಕೋಟೆ ಮೂಲದ ಟೆಕ್ಕಿ ಸಾಯಿಕೃಷ್ಣ ಪೊಲೀಸ್ ವಶಕ್ಕೆ


ಮೈಸೂರು, ಡಿ.20–ಕಲಾಪ ನಡೆಯುತ್ತಿದ್ದ ವೇಳೆ ಸಂಸತ್‌ಗೆ ನುಗ್ಗಿ ಕಲರ್ ಗ್ಯಾಸ್ ಸ್ಫೋಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಬಾಗಲಕೋಟೆ ಮೂಲದ ನಿವೃತ್ತ ಡಿವೈಎಸ್‌ಪಿ ವಿಠಲ ಜಗಲಿ ಅವರ ಪುತ್ರನನ್ನು ವಶಕ್ಕೆ ಪಡೆದು, ವಿಚಾರಣೆಗೊಳಪಡಿಸಿದ್ದಾರೆ.

ಬೆಂಗಳೂರಿನ ಬಹು ರಾಷ್ಟ್ರೀಯ ಕಂಪನಿವೊಂದರ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಸಾಯಿಕೃಷ್ಣ ಇದೀಗ ಪೊಲೀಸರ ವಶದಲ್ಲಿದ್ದಾನೆ. ಈತ ಬೆಂಗಳೂರಿನ ಬಿಐಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 2008–09ನೇ ಸಾಲಿನಲ್ಲಿ ಮೈಸೂರಿನ ಮನೋರಂಜನ್ ಸಹಪಾಠಿಯಾಗಿದ್ದು, ಇಬ್ಬರೂ ಒಂದೇ ಕೊಠಡಿಯಲ್ಲಿ ವಾಸ್ತವ್ಯವಿದ್ದರು ಎಂದು ಹೇಳಲಾಗಿದೆ. ಪ್ರಮುಖ ಆರೋಪಿ ಮನೋರಂಜನ್ ತನ್ನ ಡೈರಿಯಲ್ಲಿ ಸಾಯಿ ಕೃಷ್ಣ ಹೆಸರನ್ನು ಬರೆದಿದ್ದಾನೆ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಆತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮತ್ತೊಂದು ಮೂಲದ ಪ್ರಕಾರ ನಿರುದ್ಯೋಗಿಯಾಗಿರುವ ಮನೋ ರಂಜನ್‌ಗೆ ಸಾಯಿಕೃಷ್ಣ ಹಣಕಾಸು ನೆರವು ನೀಡುತ್ತಿದ್ದ ಎಂದು ಹೇಳಲಾಗಿದೆ.

# ಕನ್ನಡದ ಲಕ್ಷ್ಮೀಶ ತೋಳ್ಪಾಡಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ದೆಹಲಿ, ಡಿ.20– 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟವಾಗಿದೆ. 24 ಭಾಷೆಗಳಿಗೆ ಪ್ರಶಸ್ತಿ ಪ್ರಕಟವಾಗಿದ್ದು ಇದರಲ್ಲಿ ಪ್ರಬಂಧ ವಿಭಾಗದಲ್ಲಿ ಕನ್ನಡದ ಖ್ಯಾತ ಚಿಂತಕ, ಲೇಖಕ, ವಾಗ್ಮಿ ಲಕ್ಷ್ಮೀಶ ತೋಳ್ಪಾಡಿ ಅವರ ಕೃತಿಗೆ ಪ್ರಶಸ್ತಿ ಲಭಿಸಿದೆ. ಮಹಾಭಾರತ ಅನುಸಂಧಾನದ ಭಾರತಯಾತ್ರೆ ಪ್ರಬಂಧಕ್ಕೆ ಈ ಗೌರವ ಸಿಕ್ಕಿದೆ ಎಂದು ಸಾಹಿತ್ಯ ಅಕಾಡೆಮಿ ಪ್ರಕಟಣೆಯಲ್ಲಿ ತಿಳಿಸಿದೆ.

ಲಕ್ಷ್ಮೀಶ ತೋಳ್ಪಾಡಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಬಳಿಯ ಶಾಂತಿಗೋಡು ಗ್ರಾಮದವರು. ಭಗವದ್ಗೀತೆಯ ಬಗೆಗಿನ 'ಮಹಾಯುದ್ಧಕ್ಕೆ ಮುನ್ನ' ಮೊದಲ ಪ್ರಕಟಿತ ಕೃತಿ. ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ, ಸಂಪಿಗೆ ಭಾಗವತ,ಬಾಳು ಸಾವು ಒಡ್ಡುತ್ತಿರುವ ಆಮಿಷ, ಆನಂದ ಲಹರೀ,



ಭಕ್ತಿಯ ನೆಪದಲ್ಲಿ,ಭವ ತಲ್ಲಣ' (ತಾಳ ಮದ್ದಲೆ ಕುರಿತು) ಕೃತಿಗಳು ಪ್ರಕಟವಾಗಿವೆ.

ಮಲಯಾಳಂ ಭಾಷೆಯಲ್ಲಿ ಖ್ಯಾತ ಬರಹಗಾರ ಇ.ವಿ. ರಾಮಕೃಷ್ಣನ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ. ಮಾತೃಭೂಮಿ ಬುಕ್ಸ್ ಪ್ರಕಟಿಸಿದ 'ಮಲಯಾಳ ನೋವೆಲಿಂಡೆ ದೇಶ ಕಾಲಂಙಳ್' ಕೃತಿಗೆ ಈ ಪ್ರಶಸ್ತಿ ಲಭಿಸಿದೆ. ರಾಮಕೃಷ್ಣನ್ ಅವರು ಸಾಹಿತ್ಯ ವಿಮರ್ಶೆಗಾಗಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಓಡಕ್ಕುಳಲ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಒಡಿಯಾದ ಖ್ಯಾತ ಕವಿ ಅಶುತೋಷ್ ಪರಿದಾ 'ಅಪ್ರಸ್ತುತ ಮೃತ್ಯು' ಕವನ ಸಂಕಲಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಹಿಂದಿ ಭಾಷೆಯಲ್ಲಿ ಸಂಜೀವ್ ಅವರ 'ಮುಜೆ ಪಹಚಾನೋ' ಕಾದಂಬರಿಗೆ, ಇಂಗ್ಲಿಷ್ ಭಾಷೆಯಲ್ಲಿ ನೀಲಂ ಶರಣ್ ಗೌರ್ ಅವರ Requiem in Raga Janki ಮತ್ತು ಉರ್ದು ಭಾಷೆ ಯಲ್ಲಿ ನವಾಬ್ ಸಹರ್ ಅವರ 'ರಾಜದೇವ್ ಕಿ ಅಮರಾಯಿ' ಕೃತಿಗೆ ಪ್ರಶಸ್ತಿ ಸಂದಿದೆ.

ಕಾದಂಬರಿಕಾರ ಕೃಷ್ಣತ್ ಖೋಟ್ ಅವರ ಮರಾಠಿಯಲ್ಲಿನ 'ರಿಂಗಾನ್' ಪುಸ್ತಕ ಮತ್ತು ಕೊಂಕಣಿಯಲ್ಲಿ ಪ್ರಕಾಶ್ ಪರ್ಯಾಕರ್ ಅವರ ಕಥಾ ಸಂಕಲನ 'ವರ್ಸಲ್'ಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

# ಬಸ್ ನಿಲ್ದಾಣದಲ್ಲಿ ಅಜ್ಜಿ ಕೈಯ್ಯಲ್ಲಿ ಹೆಣ್ಣು ಮಗು ಕೊಟ್ಟು ತಾಯಿ ಪರಾರಿ



### ಗುಂಡ್ಲುಪೇಟೆ ಸರ್ಕಾರಿ ಬಸ್ ನಿಲ್ದಾಣದಲ್ಲಿ ಘಟನೆ

ಗುಂಡ್ಲುಪೇಟೆ, ಡಿ.20–ಶೌಚಾಲಯಕ್ಕೆ ಹೋಗಿ ಬರುತ್ತೇನೆಂದು ತನ್ನ ಒಂದು ವರ್ಷದ ಹೆಣ್ಣು ಮಗುವನ್ನು ಅಜ್ಜಿಯೊಬ್ಬರಿಗೆ ನೀಡಿ, ತಾಯಿಯೊಬ್ಬಳು ಪರಾರಿಯಾಗಿದ್ದಾಳೆ. ಈ ಘಟನೆ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದಲ್ಲಿ ಬುಧವಾರ ಸಂಜೆ ನಡೆದಿದೆ. ತಾಲೂಕಿನ ಕಲ್ಲಿಗೌಡನಹಳ್ಳಿಯ ಮಹದೇವಮ್ಮ ತನ್ನ ಗ್ರಾಮಕ್ಕೆ ತೆರಳಲು ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದರು. ಈ ವೇಳೆ ಇವರ ಬಳಿ ಬಂದ ಅಪರಿಚಿತ ಮಹಿಳೆ, ಶೌಚಾಲಯಕ್ಕೆ ಹೋಗಿ ಬರುತ್ತೇನೆ ಎಂದು ಒಂದು ವರ್ಷದ ತನ್ನ ಹೆಣ್ಣು ಮಗುವನ್ನು ಮಹದೇವಮ್ಮ ಕೈಗೆ ಕೊಟ್ಟು ಹೋಗಿದ್ದಾಳೆ. ಆದರೆ, ಕೆಲ ಗಂಟೆ ಕಳೆದರೂ ಆಕೆ ಬಾರದಿರುವುದನ್ನು ಗಮನಿಸಿದ ಮಹದೇವಮ್ಮ ಮೊದಲು ಸಾರ್ವಜನಿಕರಿಗೆ ವಿಷಯ ತಿಳಿಸಿದ್ದಾರೆ. ನಂತರ ಪ್ರಯಾಣಿಕರು ಹಾಗೂ ಮಹದೇವಮ್ಮ ಸೇರಿ ಪೊಲೀಸರಿಗೆ ಮಾಹಿತಿ ನೀಡಿದರು.

ಮಗುವನ್ನು ವಶಕ್ಕೆ ಪಡೆದ ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಾಹೇಬಗೌಡ, ಚಂದ್ರಪ್ಪ, ಜಯರಾಮು ಮತ್ತು ವಿಶೇಷ ಪೇದೆ ಪ್ರಭುಸ್ವಾಮಿ, ಸದ್ಯ ಅದನ್ನು ಸಾಂತ್ವನ ಕೇಂದ್ರದ ಮುಖ್ಯಸ್ಥೆ ಸರಸ್ವತಿ

● 10ನೇ ಪುಟಕ್ಕೆ

# ಹತ್ತು ಹಲವು ಮಹತ್ತರ ಕಾರ್ಯ ಮಾಡಿದರೂ ವಿಶ್ವೇಶ್ವರಯ್ಯನವರು ಕ್ರೆಡಿಟ್ ತೆಗೆದುಕೊಳ್ಳಲಿಲ್ಲ; ಅವರದು ಸನ್ಯಾಸಿಯಂತಹ ಬದುಕು

● ಖ್ಯಾತ ಕಾದಂಬರಿಕಾರರೂ ಆದ ಪದ್ಮಭೂಷಣ ಡಾ.ಎಸ್.ಎಲ್.ಭೈರಪ್ಪನವರ ವಿವರಣೆ ● ಆಂಗ್ಲ ಭಾಷೆಗೆ ಅನುವಾದಿತ ಡಾ.ಡಿ.ಎಸ್.ಜಯಪ್ಪಗೌಡರ 'ಭಾರತ ರತ್ನ ಸರ್ ಎಂ.ವಿ. ಕೃತಿ ಲೋಕಾರ್ಪಣೆ ● ದೇಶ–ವಿದೇಶದ ಜನರಿಗೆ ಸರ್‌ಎಂವಿ ವಿಚಾರ ಮತ್ತಷ್ಟು ತಿಳಿಯಬೇಕಾಗಿದೆ

ಮೈಸೂರು, ಡಿ.20(ಎಂಟಿವೈ)– ಸರ್ ಎಂ.ವಿಶ್ವೇಶ್ವರಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಹಲವು ಮಹತ್ತರ ಕೆಲಸ ಕಾರ್ಯ ಮಾಡಿದರೂ, ಯಾವುದಕ್ಕೂ ಕ್ರೆಡಿಟ್ ತೆಗೆದುಕೊಳ್ಳದೆ ಸನ್ಯಾಸಿಯಂತೆ ಜೀವಿಸಿದ್ದರು ಎಂದು ಕಾದಂಬರಿಕಾರ, ಪದ್ಮಭೂಷಣ ಡಾ.ಎಸ್.ಎಲ್. ಭೈರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಡಿ.ಎಸ್.ಜಯಪ್ಪಗೌಡ ಅವರು, ಆಂಗ್ಲಭಾಷೆಗೆ ಅನುವಾದಿತ 'ಭಾರತರತ್ನ ಸರ್.ಎಂವಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಡಾ.ಡಿ.ಎಸ್.ಜಯಪ್ಪಗೌಡ ಪಿಹೆಚ್.ಡಿಗಾಗಿ ಸಿದ್ಧಪಡಿಸಿದ ಥೀಸಿಸ್ ಅನ್ನು ಪದವಿ ಪಡೆದ ನಂತರ ಇನ್ನಷ್ಟು ಸಂಶೋಧನೆ ಮಾಡಿ, ಹಲವು ಮಾಹಿತಿಯನ್ನು ಸೇರಿಸಿ ಮಾರ್ಪಡಿಸುವ ಮೂಲಕ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಈಗಾಗಲೇ ಕನ್ನಡದಲ್ಲಿ ಹೊರ ತಂದಿದ್ದ ಸರ್. ಎಂ.ವಿಶ್ವೇಶ್ವರಯ್ಯ ಅವರ ಜೀವನಾಧಾರಿತ ಕೃತಿ ಇಂಗ್ಲೀಷ್ ಮಾಧ್ಯಮದಲ್ಲಿ ಪ್ರಕಟವಾಗುವ ಅವಶ್ಯಕತೆ ಇತ್ತು. ಇದೀಗ ಕನ್ನಡದ ಕೃತಿಯನ್ನು ಅನುವಾದ ಮಾಡಿ, ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವುದು ಶ್ಲಾಘನೀಯ.

ನಾನು ಸರ್ ಎಂ.ವಿಶ್ವೇಶ್ವರಯ್ಯ ಅವರಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಎಲ್ಲಾ ಪುಸ್ತಕ ಹಾಗೂ ಲೇಖನವನ್ನು ಓದಿದ್ದೇನೆ. ಆದರೆ, ಡಾ.ಜಯಪ್ಪಗೌಡ ಅವರ ಪುಸ್ತಕದಲ್ಲಿ ಸರ್‌ಎಂ.ವಿ ಅವರ ಸಣ್ಣಪುಟ್ಟ ಸಾಧನೆಯನ್ನು ಸಹ ಪ್ರಸ್ತಾಪಿಸಿದ್ದಾರೆ. ಆ ಕಾರಣದಿಂದಾಗಿ ಈ ಪುಸ್ತಕವನ್ನು ನಾನು ಮೆಚ್ಚಿದ್ದೇನೆ. ಇದು ದೇಶ

● 10ನೇ ಪುಟಕ್ಕೆ




ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಖ್ಯಾತ ಕಾದಂಬರಿಕಾರರೂ ಆದ ಪದ್ಮಭೂಷಣ ಡಾ.ಎಸ್.ಎಲ್.ಭೈರಪ್ಪ ಅವರು ಆಂಗ್ಲಭಾಷೆಗೆ ಅನುವಾದಿತ ಡಾ.ಡಿ.ಎಸ್.ಜಯಪ್ಪಗೌಡ ಅವರ 'ಭಾರತರತ್ನ ಸರ್.ಎಂವಿ' ಪುಸ್ತಕ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕರ್ತೃ ಡಾ.ಡಿ.ಎಸ್.ಜಯಪ್ಪಗೌಡ, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ದೀಪು.ಆರ್, ಇತಿಹಾಸ ತಜ್ಞ ಡಾ.ಎನ್.ಎಸ್.ರಂಗರಾಜು, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಉದ್ಯಮಿ ಎ.ಎಸ್.ಸತೀಶ್, ಎನ್.ಅಮುದ ಪರಮೇಶ್ವರ್ ಅವರನ್ನು ಕಾಣಬಹುದು.

### ಏಕವಚನದಲ್ಲಿ ಟೀಕೆ ಮಾಡುವ ಗುಂಪು ಇದೆ

ಕರ್ನಾಟಕದಲ್ಲಿ ಈಗ ಒಂದು ಗುಂಪು ಹುಟ್ಟಿಕೊಂಡಿದೆ. ಆ ಗುಂಪು ಸಾಹಿತ್ಯ ಕ್ಷೇತ್ರದಲ್ಲೂ ಇದೆ. ಚೆನ್ನಾಗಿ ಬರೆಯುವವರ ಮುಖಕ್ಕೆ ಮಸಿ ಬಳಿಯುವಂತೆ ವರ್ತಿಸುತ್ತಿದ್ದಾರೆ. ಆ ಗುಂಪು ಜಯಪ್ಪಗೌಡರ ವಿಶ್ವೇಶ್ವರಯ್ಯ ಪುಸ್ತಕದ ವಿಚಾರದಲ್ಲಿ ಟೀಕೆ ಮಾಡಿ ಹಿನ್ನಡೆ ಮಾಡಲು ಸಂಚು ನಡೆಸಿದೆ. ಏಕವಚನದ ಭಾಷಾ ಪ್ರಯೋಗ ಮಾಡಿ ಟೀಕಿಸುತ್ತಿದೆ ಎಂದು ಕಿಡಿಕಾರಿದರು. ಸರ್.ಎಂ.ವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದ ದಿವಾನರಾಗಿ ಹಲವು ಯೋಜನೆ ಜಾರಿಗೊಳಿಸಿದ್ದರೂ ಕೆಲವರು ಮಾತ್ರ, ಮಹಾರಾಜರು ಸೂಚಿಸಿದ್ದಕ್ಕೆ ವಿಶ್ವೇಶ್ವರಯ್ಯ ಮಾಡಿದ್ದಾರೆ ಎಂದು ಹಗುರವಾಗಿ ಟೀಕೆ ಮಾಡುತ್ತಿದ್ದಾರೆ. ಯೋಜನೆಗಳ ಅನುಷ್ಠಾನಕ್ಕೆ ಹಣ ರಾಜರು ಕೊಡಬಹುದು. ಆದರೆ, ಬುದ್ಧಿವಂತಿಕೆ ಪ್ರದರ್ಶಿಸಿ ಯೋಜನೆ ಅನುಷ್ಠಾನಗೊಳಿಸುವುದು ಅಷ್ಟು ಸುಲಭದ ಮಾತಲ್ಲ. ಹಾಗಾಗಿ ವಿಶ್ವೇಶ್ವರಯ್ಯ ಅವರ ಸಾಧನೆ ಅಪರಿಮಿತ ಎಂದರು.

# ವಿವಿಧ ಬೇಡಿಕೆ ಈಡೇರಿಕೆಗಾಗಿ ಎಐಯುಟಿಯುಸಿ ಪ್ರತಿಭಟನೆ




ಮೈಸೂರು,ಡಿ.20(ಜಿಎ)–ಜನ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ, ದುಡಿಯುವ ಜನರ ಪರ್ಯಾಯ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಐಯುಟಿಯುಸಿ ವತಿಯಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ದೇಶದ ಜನರಿಗೆ ಒಳ್ಳೆಯ ದಿನಗಳನ್ನು ಕೊಡುವುದಾಗಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರವು ಹಿಂದಿನ ಸರ್ಕಾರಗಳು ಅನುಸರಿಸಿದ ನೀತಿಗಳನ್ನೇ ಅನುಸರಿಸಿ ದುಡಿಯುವ ಜನರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ. ಸಂಸತ್ತಿನಲ್ಲಿ ಬಹುಸಂಖ್ಯಾತ ಬಲವಿದೆ ಎಂಬ ಗರ್ವದಿಂದ ದೇಶದ ಜನರ ಅಭಿಪ್ರಾಯ ಬದಿಗೊತ್ತಿ ವಿದೇಶಗಳ ಮಾಲೀಕರಿಗೆ ವಾಣಿಜ್ಯ ಹಾಗೂ ವ್ಯಾಪಾರ ಸುಗಮಗೊಳಿಸುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ದುಡಿಯುವವರನ್ನು ಬಾಧೆಗೀಡು ಮಾಡಿದೆ. ಕಾಯಂ ಉದ್ಯೋಗಗಳು ತೀವ್ರವಾಗಿ ಕಡಿತಗೊಳ್ಳುತ್ತಿವೆ. ಹೊರ ಗುತ್ತಿಗೆ, ವಿವಿಧ ರೀತಿಯ ಗುತ್ತಿಗೆಗಳು ಹೆಚ್ಚಾಗಿದ್ದು, ಸಾರ್ವಜನಿಕ ಉದ್ಯಮಗಳನ್ನು ಜನಹಿತಕ್ಕೆ ವಿರುದ್ಧವಾಗಿ ಖಾಸಗೀಕರಣ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ಎಲ್ಲರಿಗೂ ಕಾಯಂ ಉದ್ಯೋಗ ಒದಗಿಸಬೇಕು. ವಿದ್ಯುತ್ ತಿದ್ದುಪಡಿ ಮಸೂದೆ ಹಿಂಪಡೆಯಬೇಕು. ಪಿಂಚಣಿದಾರರಿಗೆ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ ಕನಿಷ್ಠ 10 ಸಾವಿರ ಪಿಂಚಣಿ ನೀಡಬೇಕು. ರಾಷ್ಟ್ರೀಯ ವೇತನವನ್ನು ಕನಿಷ್ಠ 28 ಸಾವಿರಕ್ಕೆ ಏರಿಕೆ ಮಾಡಬೇಕು. ಬೆಲೆ ಏರಿಕೆ ನಿಯಂತ್ರಿಸಿ, ಆಹಾರ, ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹಿಂಪಡೆಯಬೇಕು. ಎಲ್ಲಾ ಗುತ್ತಿಗೆ ಕಾರ್ಮಿಕರ ಸೇವೆ ಕಾಯಂಗೊಳಿಸಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಹಳೆಯ ಪಿಂಚಣಿ ಯೋಜನೆ ಮರು ಜಾರಿ ಮಾಡಬೇಕು. ಕಾರ್ಮಿಕ ವಿರೋಧಿಯಾದ 4 ಲೇಬರ್ ಕೋಡ್‌ಗಳನ್ನು ರದ್ದುಗೊಳಿಸಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಬೇಕು. ಎಲ್ಲರಿಗೂ ಆಹಾರ, ಶಿಕ್ಷಣ, ಸಾರ್ವತ್ರಿಕ ಆರೋಗ್ಯ ರಕ್ಷಣೆಯ ಹಕ್ಕಿಗಾಗಿ ಕಾನೂನು ಜಾರಿಗೊಳಿಸಬೇಕು. ರಾಷ್ಟ್ರೀಯ ನಗರೀಕರಣ ಪೈಪ್‌ಲೈನ್ ಯೋಜನೆ ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಯಶೋಧರ್, ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಸದಸ್ಯರಾದ ಹರೀಶ್, ಸಂಧ್ಯಾ, ನಾಗೇಶ್‌ಮೂರ್ತಿ ಇನ್ನಿತರರಿದ್ದರು.

# 141 ಸಂಸದರ ಅಮಾನತು ಖಂಡನೀಯ: ಸಂಸತ್ ಇರುವುದೇ ಚರ್ಚೆ ನಡೆಸುವುದಕ್ಕಾಗಿ

**ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಭಿಮತ**



ಮೈಸೂರು,ಡಿ.20(ಆರ್‌ಕೆ)– ಸಂಸತ್ ಭವನಕ್ಕೆ ನುಗ್ಗಿ ಆತಂಕ ಮೂಡಿಸಿರುವ ಘಟನೆಯನ್ನು ಪ್ರಶ್ನಿಸಿದ್ದಕ್ಕೆ 141 ಸಂಸದರನ್ನು ಅಮಾನತು ಮಾಡಿರುವುದು ಖಂಡನೀಯ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಸಂಸದರನ್ನು ಅಮಾನತು ಮಾಡಿರುವುದು ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಮಾಡಿದ ಅವಮಾನ. ಘಟನೆ ಬಗ್ಗೆ ದೇಶದ ಜನರಿಗೆ ಸತ್ಯ ತಿಳಿಸಬೇಕಿತ್ತು. ಬದಲಾಗಿ ಅಪಮಾನ ಸರಿಯಲ್ಲ ಎಂದರು.

ತಕ್ಷಣವೇ ಅಮಾನತು ವಾಪಸ್ ಪಡೆದು ಸಂಸದರೊಂದಿಗೆ ಸಾಂವಿಧಾನಿಕ ಚರ್ಚೆ ನಡೆಸಬೇಕು ಎಂದು ಪ್ರಧಾನಿ, ಗೃಹ ಸಚಿವರನ್ನು ಒತ್ತಾಯಿಸಿದ ಅವರು, ಮೂರು ಸುತ್ತಿನ ಭದ್ರತೆ ಇದ್ದರೂ ಘಟನೆ ನಡೆದದ್ದೇಗೆ ಎಂದು ಕೇಳಿದ್ದೇ ತಪ್ಪಾ? ಸಂಸತ್ ಇರುವುದೇ ಪ್ರಶ್ನೆ ಮಾಡುವುದಕ್ಕಾಗಿ ಎಂದರು.

ಸಂಸದರ ಪ್ರಶ್ನೆಗಳಿಗೆ ಉತ್ತರ ನೀಡುವ ಮನೋಭಾವನೆ ಆಡಳಿತ ನಡಸುವವರಿಗಿರಬೇಕು. ಪ್ರಧಾನಿ ನರೇಂದ್ರ ಮೋದಿ ಘಟನೆ ಬಗ್ಗೆ ಸ್ಪಷ್ಟನೆ ನೀಡಬೇಕು. ಆದರೆ, ಸಂಸತ್ ಪ್ರಶ್ನೋತ್ತರವನ್ನೇ ದುರ್ಬಲಗೊಳಿಸಲಾಗುತ್ತಿದೆ. ಇದು ದುರ್ಬಲಗೊಂಡರೆ ಇಡೀ ಪ್ರಜಾಪ್ರಭುತ್ವವೇ ದುರ್ಬಲವಾಗುತ್ತದೆ. ಇದರಿಂದ ಭವಿಷ್ಯದ ಜನಪ್ರತಿನಿಧಿಗಳಿಗೆ ಯಾವ ಸಂದೇಶ ರವಾನೆಯಾಗುತ್ತದೆ ಗೊತ್ತಾ ಎಂದು ವಿಶ್ವನಾಥ್ ಕೇಂದ್ರದ ವಿರುದ್ಧ ಹರಿಹಾಯ್ದರು.

ಮಹುವಾ ಮೊಯಿತ್ರಾ ಏನು ತಪ್ಪು ಮಾಡಿದ್ದಾರೆಂದು ಅಮಾನತು ಮಾಡಿದ್ದಾರೆ? ಸಂಸದ ಪ್ರತಾಪ್ ಸಿಂಹ ಅವರಂತೆ ತಪ್ಪು ಮಾಡಿರಲಿಲ್ಲವಲ್ಲ. ಆದರೂ ಪ್ರತಾಪ್ ಸಿಂಹ ವಿರುದ್ಧ ಕ್ರಮ ಜರುಗಿಸಿಲ್ಲವೇಕೆ ಎಂದು ಪ್ರಶ್ನಿಸಿದ ಅವರು, ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವವರ ನಡವಳಿಕೆಯನ್ನು ನಾನು ಖಂಡಿಸುತ್ತೇನೆ ಎಂದರು.

**ಶ್ರೀರಾಮನನ್ನು ಒಂದು ಪಕ್ಷಕ್ಕೆ ಸೀಮಿತ ಮಾಡಬೇಡಿ:** ಶ್ರೀರಾಮನನ್ನು ಒಂದು ಪಕ್ಷಕ್ಕೆ ಸೀಮಿತ ಮಾಡಬೇಡಿ. ಶ್ರೀರಾಮ ಈ ದೇಶದ ಎಲ್ಲರಿಗೂ ದೇವರು. ಕೊರೊನಾ ಸೋಂಕು ಹರಡುತ್ತಿರುವ ಈ ಸಂದರ್ಭ ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಮಾಡಲು ಹೊರಟಿದ್ದೀರಿ. ಇದರಿಂದ ಎಷ್ಟು ಜನರನ್ನು ಬಲಿ ಪಡೆಯಲು ಮುಂದಾಗಿದ್ದೀರಿ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಈ ಹಿಂದೆ ಕೊರೊನಾ ಸೋಂಕು ಆರಂಭದಲ್ಲಿ ಕುಂಭಮೇಳ ನಡೆಸಿದ್ದರಿಂದ ದೇಶದಲ್ಲಿ ಸೋಂಕು ಹೆಚ್ಚಾಗಿತ್ತು. ಈಗ ಮತ್ತೆ ಉಲ್ಬಣವಾಗುತ್ತಿರುವ ಸಂದರ್ಭ ರಾಮಮಂದಿರ ಉದ್ಘಾಟಿಸಲು ಮುಂದಾಗಿರುವುದೆಷ್ಟು ಸಮಂಜಸ ಎಂದು ಪ್ರಶ್ನಿಸಿದ ವಿಶ್ವನಾಥ್, ಬಿಜೆಪಿ ಪಿತಾಮಹರಾದ ಮುರಳಿ ಮನೋಹರ್ ಜೋಷಿ, ಲಾಲ್‌ಕೃಷ್ಣ ಅಡ್ವಾನಿ ಅವರನ್ನು ಆಹ್ವಾನಿಸಿಲ್ಲ. ರಾಮಮಂದಿರಕ್ಕೆ ಅಡಿಗಲ್ಲು ಹಾಕಿದವರನ್ನು ನಿರ್ಲಕ್ಷಿಸಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸಿರುವುದು ಸರಿಯೇ? ಎಂದರು.


**ನಾನೂ ಟಿಕೆಟ್ ಆಕಾಂಕ್ಷಿ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾನೂ ಸ್ಪರ್ಧಿಸಲು ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಟಿಕೆಟ್ ಕೊಡುವುದು, ಬಿಡುವುದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ ಎಂದು ವಿಶ್ವನಾಥ್ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು.

### ಖರ್ಗೆ ಪ್ರಧಾನಿ ಅಭ್ಯರ್ಥಿಯಾದರೆ ಸಂತೋಷ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಇಂಡಿಯಾ ಮೈತ್ರಿ ಕೂಟವು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸಿರುವುದು ಸ್ವಾಗತಾರ್ಹ. ಹೆಚ್.ಡಿ.ದೇವೇಗೌಡರ ಬಳಿಕ ಕರ್ನಾಟಕ ರಾಜ್ಯಕ್ಕೆ ಪ್ರಧಾನಿಯಾಗುವ ಮತ್ತೊಂದು ಅವಕಾಶ ಬಂದರೆ ಸಂತೋಷ. ರಾಜ್ಯದ ಜನ ಒಗ್ಗಟ್ಟಿನಿಂದ ಸ್ವಾಗತಿಸಬೇಕು. ಶೋಷಿತ ಸಮುದಾಯದಿಂದ ಬಂದ ಖರ್ಗೆ ಪ್ರಧಾನಿಯಾದರೆ ದೇಶದ ಜನ ಸಂತೋಷ ಪಡುತ್ತಾರೆ. **–ಎ.ಹೆಚ್.ವಿಶ್ವನಾಥ್**

# ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.20–ಡಿಸೆಂಬರ್ 22ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ನಿರ್ವಹಣಾ ಕಾಮಗಾರಿಯನ್ನು




ಹಮ್ಮಿಕೊಳ್ಳಲಾಗಿದ್ದು, ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೇರಿ ಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆ ಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭುಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭೂಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್‌ನಗರ, ಲಾಲ್ ಬಹದ್ದೂರು ಶಾಸ್ತ್ರೀನಗರ, ಎಸ್‌ಎಂಪಿ ಡೆವಲಪರ್ಸ್, ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಜೆಎಸ್‌ಎಸ್ ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯ ನಗರ, ಪ್ರಕೃತಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ನಿಲುಗಡೆಯಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.




ಅಮ್ಮ ಕೊಡವ ಸಮಾಜ ಮೈಸೂರು ವತಿಯಿಂದ ದಾಸ್‌ಪ್ರಕಾಶ್ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಸ್ನೇಹ ಮಿಲನ' ಕಾರ್ಯಕ್ರಮದಲ್ಲಿ ಕಾವೇರಿ ಪೂಜೆ ಮತ್ತು ಪುತ್ತರಿ ಕದಿರು ಪೂಜೆ ಆಯೋಜಿಸಲಾಗಿತ್ತು. ಇದೇ ವೇಳೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಅಭಿನಂದಿಸಲಾಯಿತು. ಅಧ್ಯಕ್ಷ ಹೆಚ್.ಎಂ.ಸುಬ್ಬಮ್ಮಯ್ಯ, ಕಾರ್ಯದರ್ಶಿ ರಾಧಾ ಮಹೇಂದ್ರ, ಖಜಾಂಚಿ ಸಿ.ಕೆ.ಉಮೇಶ್, ಕೊಡಗಿನಿಂದ ಆಗಮಿಸಿದ ಬಾನಂಡ ಲೀಲಾವತಿ, ಬಾನಂಡ ಪೃಥ್ವಿ, ಲತಾ ಗಣೇಶ್, ರೇವತಿ, ಕಿಶೋರ್‌ಕುಮಾರ್, ರಾಧಾ ಗಣೇಶ್, ಶ್ವೇತಾ ರವಿ, ಬಿ.ಎ.ರೂಪ, ಸಮಾಜ ಬಾಂಧವರು ಭಾಗವಹಿಸಿದ್ದರು.

# ಮೈಸೂರು ನಗರ ಕೇಂದ್ರ ಗ್ರಂಥಾಲಯದ ಸೇವೆಗಳಲ್ಲಿ ತಾತ್ಕಾಲಿಕ ಅಡಚಣೆ

ಮೈಸೂರು, ಡಿ.20– ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿಯ ಅಧೀನ ಶಾಖಾ/ಸೇವಾ ಕೇಂದ್ರ ಗ್ರಂಥಾಲಯಗಳಲ್ಲಿ ಡಿ.21ರಿಂದ 31ರವರೆಗೆ ಪುಸ್ತಕಗಳು ಹಾಗೂ ಪೀಠೋಪಕರಣಗಳ ಭೌತಿಕ ದಾಸ್ತಾನು ಪರಿಶೀಲನೆ ನಡೆಯಲಿದ್ದು, ಕೆಲವು ದಿನಗಳಂದು ಗ್ರಂಥಾಲಯದ ಪುಸ್ತಕಗಳ ಎರವಲು ಸೇವೆ ಹಾಗೂ ಪರಾಮರ್ಶನಾ ಸೇವೆಯಲ್ಲಿ ಸಾರ್ವಜನಿಕರಿಗೆ ಅಡಚಣೆ ಉಂಟಾಗಲಿದೆ. ಗ್ರಂಥಾಲಯ ಸೇವೆಯನ್ನು ಬೆಳಗ್ಗೆ 8ರಿಂದ 10, ಸಂಜೆ 5.30ರಿಂದ 8ರವರೆಗೆ ಮಾತ್ರ



ನೀಡಲಾಗುವುದು. ಪುಸ್ತಕಗಳು ಹಾಗೂ ಪೀಠೋಪಕರಣಗಳ ಭೌತಿಕ ಪರಿಶೀಲನೆಯನ್ನು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ನಡೆಸಲಾಗುತ್ತಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಪ್ರಕಟಣೆ ತಿಳಿಸಿದೆ.

### ಗ್ರಂಥಾಲಯ ಕರ್ತವ್ಯದ ಸಮಯ 8 ಗಂಟೆಗೆ ನಿಗದಿ

ಮೈಸೂರು,ಡಿ.20–ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಧೀನದಲ್ಲಿ ಈ ಹಿಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ನಗರಪಾಲಿಕೆ ವ್ಯಾಪ್ತಿಗೆ ಮೇಲ್ದರ್ಜೆಗೇರಿಸಲಾದ ಗ್ರಂಥಾಲಯಗಳಿಗೆ ಹಾಗೂ ಅಲೆಮಾರಿ ಮತ್ತು ಕೊಳಚೆ ಪ್ರದೇಶ ಗ್ರಂಥಾಲಯಗಳಿಗೆ ಸರ್ಕಾರದ ಆದೇಶದಂತೆ ಕರ್ತವ್ಯದ ವೇಳೆಯನ್ನು ಪ್ರಸ್ತುತ 6ರಿಂದ 8 ಗಂಟೆವರೆಗೆ ಹೆಚ್ಚಿಸಿ ಆದೇಶಿಸಲಾಗಿದೆ. ಸರ್ಕಾರದಿಂದ ಘೋಷಿಸಲ್ಪಟ್ಟ ಸಾರ್ವಜನಿಕ ರಜಾ ದಿನಗಳು, ಪ್ರತಿ ತಿಂಗಳ 2ನೇ ಮತ್ತು 4ನೇ ಮಂಗಳವಾರ ಹಾಗೂ ಪ್ರತಿ ಸೋಮವಾರದಂದು ಗ್ರಂಥಾಲಯಗಳಿಗೆ ವಾರದ ರಜೆ ಇರುತ್ತದೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.24 ಮಹಿಳಾ ಉದ್ಯಮಿಗಳ ಉತ್ತೇಜನಕ್ಕಾಗಿ 'ಸ್ಫೂರ್ತಿ ಜಾತ್ರೆ'



ಮೈಸೂರು, ಡಿ.20(ಜಿಎ)–ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಭಾರತೀಯ ಬಿಲ್ಡರ್‌ಗಳ ಸಂಸ್ಥೆಯ ಮೈಸೂರು ಕೇಂದ್ರದ ಮಹಿಳಾ ಘಟಕವಾದ 'ಸ್ಫೂರ್ತಿ' ವತಿಯಿಂದ ಇದೇ ಡಿ.24ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ 'ಸ್ಫೂರ್ತಿ ಜಾತ್ರೆ' ಆಯೋಜಿಸಲಾಗಿದೆ ಎಂದು ಸ್ಫೂರ್ತಿ ಅಧ್ಯಕ್ಷೆ ರೇಖಾ ಯೋಗಾನರಸಿಂಹ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಉದ್ಯಮಿಗಳ ಉತ್ಪನ್ನಗಳಿಗೆ ಮಾರುಕಟ್ಟೆ, ವ್ಯಾಪಾರ ಬೆಳಸಿಕೊಳ್ಳಲು ಉತ್ತೇಜನ ನೀಡಲಾಗಿದೆ. ಕಳೆದ 7 ವರ್ಷಗಳಿಂದ ಸ್ಫೂರ್ತಿ ಜಾತ್ರೆಯನ್ನು ಆಯೋಜಿಸುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಬಾರಿಯ ಸ್ಫೂರ್ತಿ ಜಾತ್ರೆಗೆ ಲಿಟರೇಚರ್ ಫೆಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಚಾಲನೆ ನೀಡಲಿದ್ದಾರೆ ಎಂದರು.

ಜಾತ್ರೆಯಲ್ಲಿ ಉಡುಪುಗಳು, ಆಭರಣ, ಫ್ಯಾಷನ್ ಮತ್ತು ಸೌಂದರ್ಯ ಪರಿಕರ, ಗೃಹಾಲಂಕಾರ, ಕುಂಬಾರಿಕೆ, ಉಡುಗೊರೆ ಕಲಾಕೃತಿಗಳು, ಆಹಾರ ಉತ್ಪನ್ನಗಳು, ಮೋಜಿನ ಆಟಗಳು ಸೇರಿದಂತೆ 50 ಮಳಿಗೆಗಳಲ್ಲಿ ಮಹಿಳಾ ವ್ಯಾಪಾರಿಗಳಿಗೆ ಸೇರಿದ ಉತ್ಪನ್ನಗಳ ವಸ್ತುಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಿದ್ದು, ವಿಶೇಷವಾಗಿ ಮಕ್ಕಳ ಮೂರು ಮಳಿಗೆಗಳನ್ನು ಉಚಿತವಾಗಿ ನೀಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಮಾ ಶ್ರೀಕಾಂತ್, ರೀನಾ ಪ್ರವೀಣ್ ಪಾಲ್, ಶಾಂತಿ ಭಾರದ್ವಾಜ್, ರಮ್ಯ ಉಪಸ್ಥಿತರಿದ್ದರು.

# ಡಿ.23, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವದ ಸಮಾರೋಪ



ಮೈಸೂರು, ಡಿ.20(ಜಿಎ)–ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವದ ಸಮಾರೋಪ ಸಮಾರಂಭವನ್ನು ಡಿ.23ರಂದು ವಿಜಯನಗರದಲ್ಲಿರುವ ಬಂಟರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್, ಕಾರ್ಯದರ್ಶಿ ಜಿ.ಕೆ. ಶೆಟ್ಟಿ, ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಸಿ. ಪ್ರಸಾದ್ ರೆಡ್ಡಿ ಸಹಾ ಆಗಮಿಸುವರು. ಈ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ, 50 ವರ್ಷಗಳಿಂದ ನಡೆದುಕೊಂಡು ಬಂದಿರುವ ಹೋಟೆಲ್‌ನ ಹಿರಿಯ ಮಾಲೀಕರನ್ನು ಅಭಿನಂದಿಸಲಾಗುತ್ತದೆ. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ರವಿ ಮೂರುರು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದರು. ಗೋಷ್ಠಿಯಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಸಂಘದ ಉಪಾಧ್ಯಕ್ಷ ಆನಂದ ಶೆಟ್ಟಿ ಡಿ.ಚಂದ್ರಶೇಖರ ಶೆಟ್ಟಿ ಉಪಸ್ಥಿತರಿದ್ದರು.

# ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಡಿ.20– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ನಿವೇಶನ ಹೊಂದಿದ್ದು, ವಸತಿ ರಹಿತರಾಗಿರುವ ಜನರಿಗೆ ಡಾ.ಬಿ.ಆರ್. ಅಂಬೇಡ್ಕರ್ ನಗರ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಗುರಿ ನಿಗಧಿಪಡಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಡಿಸೆಂಬರ್ 30ರ ಸಂಜೆ 5.30ರೊಳಗೆ ನಿಗಧಿತ ನಮೂನೆಯಲ್ಲಿ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೈಕ್ ಡಿಕ್ಕಿ: ಸ್ಕೂಟರ್ ಸವಾರ ಸಾವು



ಮೈಸೂರು, ಡಿ.20–ಸ್ಕೂಟರ್‌ಗೆ ಅಪರಿಚಿತ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬಾಲಕ ಸಾವನ್ನಪ್ಪಿದ ಘಟನೆ ಮೈಸೂರಿನ ರಾಜೀವ್‌ನಗರದ ಶರೀಫ್ ಫಂಕ್ಷನ್ ಹಾಲ್ ಬಳಿ ಸಂಭವಿಸಿದೆ.


ಮೈಸೂರಿನ ಉದಯಗಿರಿ ನಿವಾಸಿ ಸಯ್ಯದ್ ಇಮ್ರಾನ್ ಉಲ್ಲಾ ಎಂಬುವರ ಭಾಮೈದ ಸಯ್ಯದ್ ಹಸನ್ (14) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ಡಿ.17ರಂದು ರಾತ್ರಿ 8.30ರ ಸುಮಾರಿನಲ್ಲಿ ಸುಜುಕಿ ಆಕ್ಸಿಸ್ ಸ್ಕೂಟರ್‌ನಲ್ಲಿ (ಕೆಎ 55 ಎಕ್ಸ್ 6434) ರಾಜೀವ್ ನಗರದ ಅಬ್ದುಲ್ ರೆಹಮಾನಿಯಾ ರಸ್ತೆಯಲ್ಲಿ ಶರೀಫ್ ಫಂಕ್ಷನ್ ಹಾಲ್ ಹತ್ತಿರ ನಂದಿನಿ ಪಾರ್ಲರ್ ಕ್ರಾಸ್ ಬಳಿ ಬಲಕ್ಕೆ ತಿರುಗಿದಾಗ ಹಿಂಬದಿಯಿಂದ ವೇಗವಾಗಿ ಬಂದ ಬೈಕ್ ಈತನ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದು ಸಯ್ಯದ್ ಹಸನ್ ತೀವ್ರವಾಗಿ ಗಾಯಗೊಂಡಿದ್ದಾನೆ. ಬೈಕ್ ಸವಾರನೂ ಕೂಡ ಕೆಳಗೆ ಬಿದ್ದನಾದರೂ, ಸಣ್ಣಪುಟ್ಟ ಗಾಯಗಳಿಂದಾಗಿ ಆತ ಸ್ಥಳದಿಂದ ತೆರಳಿದ್ದಾನೆ ಎಂದು ಹೇಳಲಾಗಿದೆ. ಸಯ್ಯದ್ ಹಸನ್‌ನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಡಿ.18ರಂದು ಬೆಳಗ್ಗೆ ಸಾವನ್ನಪ್ಪಿದ್ದಾನೆ. ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹದಿನಾರು ಗ್ರಾಮದ ವ್ಯಕ್ತಿ ನಾಪತ್ತೆ



ಮೈಸೂರು, ಡಿ.20–ಆಸ್ಪತ್ರೆಗೆ ಹೋಗುವುದಾಗಿ ತಿಳಿಸಿ, ಮನೆಯಿಂದ ಹೊರಟ ವ್ಯಕ್ತಿ ನಾಪತ್ತೆಯಾಗಿರುವ ಬಗ್ಗೆ ತಾಲೂಕಿನ ಹದಿನಾರು ಗ್ರಾಮದಿಂದ ವರದಿಯಾಗಿದೆ. ಗ್ರಾಮದ ನಿವಾಸಿ ಪುಟ್ಟಸ್ವಾಮಿ (62) ಎಂಬುವರು ಡಿ.12ರಂದು ಬೆಳಗ್ಗೆ ತನಗೆ ಜ್ವರ ಬಂದಿರುವುದರಿಂದ ಆಸ್ಪತ್ರೆಗೆ ಹೋಗಲಿರುವುದಾಗಿ ಪತ್ನಿ ಲೋಕಾಮಣಿ ಅವರಿಗೆ ತಿಳಿಸಿ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಮಾಹಿತಿ ಇರುವವರು ವರುಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2594411 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2444800 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

# ನಿಧನ



**ವೇಣುಗೋಪಾಲ್ ಶೆಟ್ಟಿ**

ಮೈಸೂರು, ಡಿ.20–ಮೈಸೂರಿನ ಜೆ.ಪಿ.ನಗರದ ನಿವಾಸಿ ವೇಣುಗೋಪಾಲ್ ಶೆಟ್ಟಿ(74) ಅವರು ಮಂಗಳವಾರ ರಾತ್ರಿ ನಿಧನರಾದರು. ದಿವಂಗತರು ಪತ್ನಿ ಪ್ರೇಮಮ್ಮ, ಪುತ್ರಿ ಮೀನಾ, ಪುತ್ರರಾದ ಸಂತೋಷ್, ಧನ್‌ಪಾಲ್, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ತಾಲೂಕಿನ ಆಯರಹಳ್ಳಿ ಗ್ರಾಮದ ಜಮೀನಿನಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**21.12.2023 ಗುರುವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,**
**ತಿಥಿ: ನವಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸೋರಿಯಾಸಿಸ್, ಇಸುಬು, ಹುಳಕಡ್ಡಿ ಚರ್ಮರೋಗಗಳಿಗೆ ಆಯುರ್ವೇದ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಆದರ್ಶ ಸೇವಾ ಸಂಘ :** 77ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ರಾಷ್ಟ್ರ ಜಾಗೃತಿ ಅಭಿಯಾನ ಸಮಾರೋಪ ಸಮಾರಂಭ, ಬೆಳಗ್ಗೆ 7.30 ರಿಂದ ಶ್ರೀ ಶ್ರೀ ಪರಮಾತ್ಮಜೀ ಮಹಾರಾಜ್ ಸ್ವಾಮೀಜಿ ಸಾನ್ನಿಧ್ಯದಲ್ಲಿ ಗಣಪತಿ ಪೂಜೆ, ಶ್ರೀ ಅನಂತ ಜೋಷಿ ಅವರ ಮೈಸೂರಿನ ವೇದ ಬಳಗದವರಿಂದ ವೇದಘೋಷ, ಶ್ರೀ ಸುಬ್ಬರಾವ್ ಮತ್ತು ತಂಡದವರಿಂದ ಭಜನೆ ಮತ್ತು ದೇವರನಾಮ ಸಮರ್ಪಣೆ, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ, ಸಾಧಕರಿಗೆ ಸನ್ಮಾನ, ತುಮಕೂರು ರಾಮಕೃಷ್ಣ ಆಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿ ಅವರಿಂದ ದಿಕ್ಸೂಚಿ ಭಾಷಣ, ವಯೋಲಿನ್ ವಾದಕ ಡಾ. ಮೈಸೂರು ಮಂಜುನಾಥ್ ಅವರಿಂದ 25 ಗೀತೆಗಳ ಧ್ವನಿ ಸುರುಳಿ ಮತ್ತು ಸಾಹಿತ್ಯ ಬಿಡುಗಡೆ, ಉಪಸ್ಥಿತರು : ಮಕ್ಕಳ ಹೃದಯ ತಜ್ಞ ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಮಧ್ಯಾಹ್ನ 1.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಗಾಯನ ಸಮರ್ಪಣೆ, ನೃತ್ಯರೂಪಕ ಸಮರ್ಪಣೆ, ಕೋಲಾಟ ಸಮರ್ಪಣೆ, ಉಪಸ್ಥಿತರು : ವಿದ್ವಾನ್ ಎಸ್.ಕೆ.ಆರ್. ಜಿಲಾನಿಭಾಷ, ಚಂಪಕ ಅಕಾಡೆಮಿಯ ಡಾ. ನಾಗಲಕ್ಷ್ಮೀ ನಾಗರಾಜನ್, ಸಂಜೆ 5.30 ರಿಂದ ಸಮಾರೋಪ ಸಮಾರಂಭ, ಬಹುಮಾನ ವಿತರಣೆ, ಆಶೀರ್ವಚನ: ಸದ್ಗುರು ಶ್ರೀ ಪರಮಾತ್ಮಜೀ ಮಹಾರಾಜ್ ಸ್ವಾಮೀಜಿಯವರಿಂದ, ಆಶಯನುಡಿ : ಮಕ್ಕಳ ಹೃದಯ ತಜ್ಞ ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಆಗಮ ಪ್ರವೀಣ ಸ್ಥಾನಾಚಾರ್ಯ ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಸ್ಥಳ: ಕಲಾಮಂದಿರ.

■ **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ :** ಮಕ್ಕಳು ಮತ್ತು ಹವಾಮಾನ ಬದಲಾವಣೆ ಕುರಿತು ಕಾರ್ಯಾಗಾರ, ಉಪಸ್ಥಿತರು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರೊಸೆನ್ ಸೆನ್, ಟಿ.ಜಿ. ಶ್ರೀನಿಧಿ, ಡಾ. ಪದ್ಮಕುಮಾರ್, ಪ್ರೊ. ಎಂ.ಎಸ್. ಸಪ್ನಾ, ಸ್ಥಳ: ವಿಜ್ಞಾನ ಭವನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಸಮಾದೇಷ್ಟರು ಗೃಹರಕ್ಷಕ ದಳ :** ಗೃಹರಕ್ಷಕರ ವಾರ್ಷಿಕ ವಲಯ ಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟ, ಸ್ಥಳ: ಡಿಎಆರ್ ಮೈದಾನ, ಜ್ಯೋತಿನಗರ, ಸಂಜೆ 4ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ.ಬಿ.ಆರ್. ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ ಅವರಿಂದ ಭಾರತದ ಸಂವಿಧಾನ ಮತ್ತು ಶಿಕ್ಷಣದ ಹಕ್ಕುಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಸೊಳ್ಳೆಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಿನ್ಸಿಪಾಲ್ ಕೆ.ಪಿ.ಚಂದ್ರ, ಸ್ಥಳ: ಸೊಳ್ಳೆಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೆಚ್.ಡಿ. ಕೋಟೆ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ಶ್ರೀ ರಾಮಚಂದ್ರಾಚಾರ್ಯ ಉಮರ್ಜಿ ಅವರಿಂದ ಭಗವದ್ಗೀತೆ ಪ್ರವಚನ– ಅಧ್ಯಾಯ 13, ಸ್ಥಳ: ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಅಗ್ರಹಾರ, ಸಂಜೆ 6.30 ರಿಂದ.

■ **ನಿರಂತರ ಫೌಂಡೇಶನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ನಿರಂತರ ರಂಗ ಉತ್ಸವ, ಸಂಜೆ 5.30ಕ್ಕೆ ಜನಪದ ಕಲಾ ಪ್ರದರ್ಶನ, ಅಂಚೆ ಮದ್ಲೇ ಕಲಾತಂಡ, ಯಲ್ಲಾಪುರದವರಿಂದ ಸಿದ್ದಿ ಡಮಾಮಿ ಜನಪದ ನೃತ್ಯ, ಸಂಜೆ 6.15ಕ್ಕೆ ಉದ್ಘಾಟನೆ, ಉಪಸ್ಥಿತರು : ಬಂದರು ಮತ್ತು ಒಳನಾಡು ಜಲ ಸಾರಿಗೆ ನಿರ್ದೇಶನಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಯರಾಮ ರಾಯಪುರ, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ನಿರ್ದೇಶಕರಾದ ಡಾ. ಧರಣಿದೇವಿ ಮಾಲಗತ್ತಿ, ನಿರಂತರದ ಪ್ರಸಾದ್ ಕುಂದೂರು, ಸಂಜೆ 7ಕ್ಕೆ ಬೆಂಗಳೂರಿನ ರಂಗರಥ ತಂಡದ ಕಲಾವಿದರಿಂದ ಕ್ರೌಂಚ ಗೀತಾ ನಾಟಕ ಪ್ರದರ್ಶನ, ರಚನೆ : ಆಸಿಫ್ ಕ್ಷತ್ರಿಯ, ನಿರ್ದೇಶನ : ಆಸಿಫ್ ಕ್ಷತ್ರಿಯ ಮತ್ತು ಶ್ವೇತ ಶ್ರೀನಿವಾಸ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, 8.30 ಆರೋಗ್ಯಾಮೃತ–ಪ್ರಾಯೋಜಿತ ಕಾರ್ಯಕ್ರಮ, 9.00 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಡಾ.ಎನ್.ರಮಣಿ–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ :** 12.30 ದೇವರನಾಮ, 1.20 ಭಾವಗೀತೆ–ಶಾಂತಲಾ ವಟ್ಟಂ, 4.00 ಜನಪದ ಸಂಗೀತ –ಮೈಸೂರು ಜಿ. ಗುರುರಾಜ್ ಮತ್ತು ಸಂಗಡಿಗರು, 4.30 ವಿಜ್ಞಾನ ಭಾರತಿ–ಪರಿಸರ ಮತ್ತು ಪ್ರಾಣಿ ಪ್ರಪಂಚದಿಂದ ಪ್ರೇರಿತವಾದ ಇಂಜಿನಿಯರಿಂಗ್ ಆವಿಷ್ಕಾರಗಳು ಕುರಿತು ಮಾತನಾಡುತ್ತಾರೆ ಶಶಿಧರ್ ಡೋಂಗ್ರೆ, ಭೂಮಿಯ ಅಂತರಾಳದಲ್ಲಿ ಏನಿದೆ–ಮಾತನಾಡುತ್ತಾರೆ ಎನ್.ಶಂಕರ್, 6.50 ಕೃಷಿರಂಗ–ಕೊಳ್ಳೆಗಾಲ ತಾಲೂಕು ಇಕ್ಕಡಹಳ್ಳಿ ಗ್ರಾಮದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ, ಪ್ರಸ್ತುತಿ–ಎನ್.ಕೇಶವಮೂರ್ತಿ, 10.30 ಸವಿನೆನಪು

## ಸಿಐಡಿಯಲ್ಲಿ ಎರಡು ವಿಶೇಷ ವಿಭಾಗ ರಚನೆ

**ಬೆಂಗಳೂರು:** ಸಾರ್ವಜನಿಕರಿಗೆ ಅಧಿಕ ಲಾಭದ ಆಮಿಷವೊಡ್ಡಿ ಹಣ ದೋಚುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳಲ್ಲಿ ಆರೋಪಿಗಳ ಪತ್ತೆ, ಪ್ರಕರಣಗಳ ನಿಯಂತ್ರಣಕ್ಕೆ ಅಪರಾಧ ತನಿಖಾ ದಳವು (ಸಿಐಡಿ) ಎರಡು ವಿಶೇಷ ವಿಭಾಗಗಳನ್ನು ರಚಿಸಿದೆ.

ಆರ್ಥಿಕ ವಂಚನೆಗಳ ತನಿಖೆಗೆ 'ಠೇವಣಿ ವಂಚನೆ ವಿಭಾಗ' ಹಾಗೂ ವೃತ್ತಿಪರ ಕ್ರಿಮಿನಲ್‌ಗಳ ಮೇಲೆ ಕಣ್ಗಾವಲಿಡಲು 'ಕ್ರಿಮಿನಲ್ ಗುಪ್ತದಳ ವಿಭಾಗ' ರಚಿಸಲಾಗಿದೆ.

ಸಿಐಡಿಯಲ್ಲಿ ಹೊಸ ಎರಡು ವಿಭಾಗಗಳೂ ಸೇರಿದಂತೆ ಸದ್ಯ 3 ವಿಭಾಗಗಳು ಕೆಲಸ ಮಾಡುತ್ತಿವೆ. ರಾಜ್ಯ ವ್ಯಾಪ್ತಿ ಕಾರ್ಯಾಚರಣೆ ನಡೆಸಲಿವೆ. ಆರ್ಥಿಕ ವಂಚನೆ ಪ್ರಕರಣ ಪತ್ತೆಗೆ 2 ವಿಭಾಗಕ್ಕೂ ಎಸ್ಪಿ ದರ್ಜೆಯ ಅಧಿಕಾರಿಗಳು ನೇತೃತ್ವ ವಹಿಸಲಿದ್ದಾರೆ ಎಂದು ಸಿಐಡಿ ಡಿಜಿಪಿ ಡಾ.ಎಂ.ಎ.ಸಲೀಂ ತಿಳಿಸಿದ್ದಾರೆ.

ಆರ್ಥಿಕ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿಯಲ್ಲಿ 903 ಪ್ರಕರಣಗಳು ತನಿಖೆ ಹಂತದಲ್ಲಿದ್ದವು. ಅದರಲ್ಲಿ, 290 ಪ್ರಕರಣಗಳ ತನಿಖೆ ಪೂರ್ಣಗೊಳಿಸಲಾಗಿದೆ. ಉಳಿದಂತೆ 615 ಪ್ರಕರಣ ತನಿಖೆ ನಡೆಯುತ್ತಿದೆ. ಹೊಸ ವಿಭಾಗಗಳ ರಚನೆಯಿಂದ ಪ್ರಕರಣಗಳ ತ್ವರಿತ ತನಿಖೆಗೆ ಸಹಕಾರಿ ಆಗಲಿದೆ ಎಂದರು. 'ಸ್ಥಳೀಯ ಠಾಣೆಗಳ ರೌಡಿ ಪಟ್ಟಿಯಲ್ಲಿ ಹೆಸರಿರುವವರ ಮೇಲೆ ನಿಗಾ ವಹಿಸುವುದು ಹಾಗೂ ಕ್ರಿಮಿನಲ್‌ಗಳ ಚಲನವಲನ ಮಾಹಿತಿ ಸಂಗ್ರಹಕ್ಕೆ ಕ್ರಿಮಿನಲ್ ಗುಪ್ತದಳ ವಿಭಾಗ ಕೆಲಸ ಮಾಡಲಿದೆ. ಸಿಐಡಿಯಲ್ಲಿ 62 ಡಿವೈಎಸ್‌ಪಿ ಹುದ್ದೆಗಳಿದ್ದವು. ಎರಡು ಹುದ್ದೆಗಳನ್ನು ವಾಪಸ್ ನೀಡಿ, ಎಸ್‌ಪಿ ಹುದ್ದೆಗಳನ್ನು ಸೃಜಿಸಲಾಗಿದೆ. ರಾಜ್ಯದಲ್ಲಿ 6 ವಲಯಗಳಿದ್ದು ಡಿವೈಎಸ್ಪಿ ನೇತೃತ್ವದಲ್ಲಿ 2 ಇನ್‌ಸ್ಪೆಕ್ಟರ್‌ಗಳನ್ನು ಒಳಗೊಂಡ ತಂಡಗಳು ಕೆಲಸ ಮಾಡುತ್ತಿವೆ. ಡಿವೈಎಸ್ಪಿ ನೇತೃತ್ವದಲ್ಲಿ ವಲಯವಾರು ದಾಖಲಾದ ಪ್ರಕರಣಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎನ್ನಲಾಗಿದೆ.

## ನಟಿ ಹೇಮಾಚೌಧರಿ ಆಸ್ಪತ್ರೆಗೆ ದಾಖಲು



**ಬೆಂಗಳೂರು:** ಎರಡು ದಿನಗಳ ಹಿಂದೆ ಬ್ರೈನ್ ಹ್ಯಾಮರೇಜ್‌ಗೆ ತುತ್ತಾಗಿದ್ದ ಹಿರಿಯ ನಟಿ ಹೇಮಾಚೌಧರಿ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಆಪ್ತರು ತಿಳಿಸಿದ್ದಾರೆ. ನಗರ ಪ್ರತಿಷ್ಠಿತ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿದ್ದು ಬೆಳಗ್ಗಿನಿಂತ ಈಗ ಆರೋಗ್ಯದಲ್ಲಿ ಅಲ್ಪ ಚೇತರಿಕೆ ಕಂಡಿದೆ ಎಂದು ಹೇಳಲಾಗುತ್ತಿದೆ. ಬೆಳಗ್ಗೆ ಹೇಮಾ ಚೌಧರಿ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು, ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಎರಡು ದಿನಗಳ ಹಿಂದೆ ಅವರಿಗೆ ಬ್ರೈನ್ ಹ್ಯಾಮರೇಜ್ ಆಗಿದ್ದು, ಕೂಡಲೇ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿತ್ತು.

ಮೂರು ದಿನಗಳ ಹಿಂದೆಯಷ್ಟೇ ಅವರು ಲೀಲಾವತಿ ಅವರ 11ನೇ ದಿನದ ಕಾರ್ಯದಲ್ಲಿ ಭಾಗಿಯಾಗಿದ್ದರು. ವಿನೋದ್ ರಾಜ್ ಅವರಿಗೆ ಸಾಂತ್ವನ ಕೂಡ ಹೇಳಿದ್ದರು. ಆ ಸಮಯದಲ್ಲಿ ಆರೋಗ್ಯವಾಗಿದ್ದ ಅವರು, ಅಲ್ಲಿಂದ ಬಂದ ನಂತರ ಏಕಾಏಕಿ ಮೆದುಳಿನಲ್ಲಿ ರಕ್ತಸ್ರಾವ ಆಗಿದೆ ಎಂದು ಹೇಳಲಾಗುತ್ತಿದೆ. ಕನ್ನಡ, ಮಲಯಾಳಂ, ತೆಲುಗು, ತಮಿಳು ಹೀಗೆ ನಾನಾ ಭಾಷೆಗಳಲ್ಲಿ ಹೇಮಾಚೌಧರಿ ನಟಿಸಿದ್ದಾರೆ. ಕಿರುತೆರೆಯಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹೀಗಾಗಿ ಹೇಮಾ ಅವರ ಅನಾರೋಗ್ಯ ಅವರ ಅಭಿಮಾನಿಗಳಲ್ಲಿ ಆತಂಕ ಮೂಡಿಸಿದೆ. ಹೇಮಾ ಅವರ ಪುತ್ರ ಐರ್ಲೆಂಡ್‌ನಲ್ಲಿ ಇದ್ದು, ಇಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಅವರ ಪುತ್ರನೇ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಹಿಂದೂ ದೇವಾಲಯಗಳ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದನ್ನು ಯಾರೂ ವಿರೋಧಿಸುತ್ತಿಲ್ಲ

**● ಖ್ಯಾತ ವಾಗ್ಮಿ ಡಾ.ಪಾವಗಡ ಪ್ರಕಾಶ್ ರಾವ್ ವಿಷಾದ ● ಒಂದು ಸಮುದಾಯಕ್ಕೆ 10 ಸಾವಿರ ಕೋಟಿ ಕೊಡುತ್ತೇನೆ ಎನ್ನುವ ಸಿಎಂ ಅನ್ನು ಆರು ಪಟ್ಟು ದೊಡ್ಡ ಸಮುದಾಯ ಹಿಂದೂಗಳಿಗೆ 60 ಸಾವಿರ ಕೋಟಿ ಕೊಡಿ ಎಂದು ಯಾರೂ ಕೇಳುತ್ತಿಲ್ಲ**

ಮೈಸೂರು, ಡಿ.20(ಎಸ್‌ಪಿಎನ್)– ಒಂದು ಸಮುದಾಯಕ್ಕೆ ಹತ್ತು ಸಾವಿರ ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿರುವಂತೆಯೇ, ಇದಕ್ಕೆ ಆರು ಪಟ್ಟು ಹೆಚ್ಚಾಗಿರುವ ಹಿಂದೂಗಳಿಗೂ 60 ಸಾವಿರ ಕೋಟಿ ರೂ.ಗಳನ್ನು ಘೋಷಿಸಿ ಎಂದು ಜನರು ಏಕೆ ಒತ್ತಾಯಿಸುತ್ತಿಲ್ಲ ಎಂದು ಖ್ಯಾತ ವಾಗ್ಮಿ ಡಾ.ಪಾವಗಡ ಪ್ರಕಾಶ್‌ರಾವ್ ಪ್ರಶ್ನಿಸಿದರು.

ಮೈಸೂರು ಕಲಾಮಂದಿರದಲ್ಲಿ 77ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರ ಜಾಗೃತಿ ಅಭಿಯಾನ ಮೈಸೂರು ವಿಭಾಗ ಹಾಗೂ ಆದರ್ಶ ಸೇವಾ ಸಂಘ ಸಹಯೋಗದೊಂದಿಗೆ ನಡೆದ 'ದೇಶಭಕ್ತಿ, ನಮ್ಮ ಸಂವಿಧಾನ, ನಮ್ಮ ಸಂಸ್ಕೃತಿ, ನಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ 2 ದಿನಗಳ ಜನ ಜಾಗೃತಿ ಅಭಿ ಯಾನ'ದಲ್ಲಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ 162 ಹಿಂದೂ ದೇವಾಲಯಗಳನ್ನು ಸರ್ಕಾರದ ಅಧೀನಕ್ಕೆ ಪಡೆಯಲಾಗುವುದು ಎಂದು ಪದೇ ಪದೇ ಹೇಳುತ್ತಿದೆ. ಇದರ ಬಗ್ಗೆ ಹಿಂದೂಗಳು ಏಕೆ ಪ್ರತಿಭಟಿಸುತ್ತಿಲ್ಲ ಎಂದು ಗೊತ್ತಾಗುತ್ತಿಲ್ಲ. ಮುಜರಾಯಿ ಇಲಾಖೆಗೆ ಬರುವ ಆದಾಯವನ್ನು ಹಿಂದೂಗಳೇತರರಿಗೆ ಶೇ.80ರಷ್ಟು ವಿತರಣೆಯಾಗುತ್ತಿದೆ. ಇದರ ಬಗ್ಗೆ ಯಾರಿಗೂ ತಿಳಿಯುತ್ತಿಲ್ಲ ಎಂದರು.

ಹಾಗೆಯೇ ಒಂದು ಸಮುದಾಯಕ್ಕೆ 10 ಸಾವಿರ ಕೋಟಿ ರೂ.ಗಳನ್ನು ಕೊಡುತ್ತೇನೆ ಎಂದು ಘೋಷಿಸಿರುವ ಮುಖ್ಯಮಂತ್ರಿಗಳು, ಇಷ್ಟು ಹಣ ಆಯವ್ಯಯದಲ್ಲಿ ಹೊಂದಿಸಬಹುದೇ ಎಂಬುದನ್ನು ಯಾವ ನಾಯಕರೂ ಸ್ಪಷ್ಟಪಡಿಸುತ್ತಿಲ್ಲ ಎಂದ ಅವರು, ಇಂದಿನ ಯುವ ಪೀಳಿಗೆ ಹಣದ ಹಿಂದೆ ಹೋಗುತ್ತಿದೆ. ಹಾಗಾಗಿಯೇ ಯುವ ಜನರಲ್ಲಿ ನಮ್ಮ ಸಂಸ್ಕೃತಿ, ನಮ್ಮ ಪರಂಪರೆ, ನಮ್ಮತನ ತಿಳಿಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನನಗೆ ಇಬ್ಬರು ಮಕ್ಕಳಿದ್ದಾರೆ. ಅವರು ಭಾರತದಲ್ಲೇ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ವಿದೇಶಗಳಲ್ಲಿ ಕೆಲಸ ಮಾಡಲು ನಾನು ಕಳುಹಿಸಲು ಇಷ್ಟಪಡುವುದಿಲ್ಲ. ಅವರೂ ಸಹಾ ಭಾರತ ಬಿಟ್ಟು ಬೇರೆಡೆ ಕೆಲಸ ಮಾಡಲು ಇಚ್ಛಿಸುವುದಿಲ್ಲ. ಆದರೆ, ಬಹುತೇಕ ಪೋಷಕರು, ತಮ್ಮ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಮಾಡಿಸಿ, ಹೆಚ್ಚಿನ ವೇತನಕ್ಕಾಗಿ ವಿದೇಶಕ್ಕೆ ಕಳುಹಿಸುವ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಇದರಿಂದ ಪ್ರೇರಣೆಗೊಂಡು ಬಹುತೇಕ ಯುವಕರು ವಿದೇಶಕ್ಕೆ ಹೋಗಲು ಇಷ್ಟಪಡುತ್ತಾರೆ. ಇದಕ್ಕೆ ಕಡಿವಾಣ ಹಾಕುವುದು ಪೋಷಕರ ಆದ್ಯ ಕರ್ತವ್ಯ. ಇಲ್ಲದಿದ್ದರೆ ಪೋಷಕರೇ ನಿಜವಾದ ರಾಷ್ಟ್ರದ್ರೋಹಿಗಳು ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರ ಎಂದರೆ ನಾವು, ರಾಷ್ಟ್ರಭಕ್ತಿ ಕುರಿತಾಗಿ ಇಂದು ಜನರನ್ನು ಹೊಡೆದು ಏಳಿಸಬೇಕಾದ ಸಂದರ್ಭದಲ್ಲಿದ್ದೇವೆ. ದೇಶದ ಜನರಿಗೆ ದೇಶಭಕ್ತಿಯನ್ನು ಹೇಳಿ ಕೊಡಬೇಕಾ?. ಅಲ್ಲದೆ, ರಾಷ್ಟ್ರದ ಉನ್ನತ ನಾಯಕರೊಬ್ಬರು ಎಲ್ಲಿದೆ ನಿಮ್ಮ 'ಭಾರತ ಮಾತೆ' ಎಂದು ಕೇಳುತ್ತಾರೆ. ಇಂತಹ ನಾಯಕರ ಹೃದಯದಲ್ಲಿ ರಾಷ್ಟ್ರದ ಮೇಲೆ ಭಕ್ತಿ ಇದೆಯೇ ಎಂದು ಪ್ರಶ್ನಿಸಿದರು.

ಪ್ರಸ್ತುತ ಇಸ್ರೇಲ್ ಮತ್ತು ಹಮಾಸ್ ನಡುವೆ ಯುದ್ಧ ನಡೆಯುತ್ತಿದೆ. ಇಸ್ರೇಲ್ ಪ್ರಧಾನಿ ತನ್ನ ಮಗನನ್ನೇ ಯುದ್ಧ ಭೂಮಿಗೆ ಕಳುಹಿಸಿದ ನಿದರ್ಶನ ಇದೆ. ಇದು ನಿಜವಾದ ರಾಷ್ಟ್ರಭಕ್ತಿ. ಹಾಗಾಗಿ ನಮ್ಮ ಮಕ್ಕಳಿಗೆ ಹುಟ್ಟಿನಿಂದಲೇ ರಾಷ್ಟ್ರಭಕ್ತಿ ಕಲಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲರಿಗೂ ಒಪ್ಪುವಂತಹ ಸಂವಿಧಾನ ರಚಿಸಿದ್ದಾರೆ. ಅದರಲ್ಲಿ ಎಲ್ಲರಿಗೂ ಸಮಾನತೆಗೆ ಆದ್ಯತೆ ನೀಡಿದ್ದಾರೆ. ಅದು ಪರಿಪೂರ್ಣವಾಗಿ ಅಳವಡಿಕೆಯಾಗಿದೆಯೇ ಎಂಬುದನ್ನು ನಾವು ಪರಿಶೀಲಿಸಬೇಕು ಹಾಗೂ ಸಂವಿಧಾನದ ಆಶಯಗಳನ್ನು ಸಮಾನಾಗಿ ಹಂಚದಿದ್ದರೆ ನಾವು ಏನು ಮಾಡುವುದು ಎಂದು ಪ್ರಶ್ನಿಸಿದರು.

ನಾವು ಸಮಾನತೆ ಕುರಿತು ಈಗ ಮಾತನಾಡುತ್ತಿದ್ದೇವೆ. ಆದರೆ, ಇದನ್ನು ಮೊದಲು ಕೊಟ್ಟವರು ಶಂಕರಾಚಾರ್ಯರು. ಅಲ್ಲದೆ, ವೇದ, ಉಪನಿಷತ್, ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ಸಂವಿಧಾನದಲ್ಲಿರುವ ಅನೇಕ ಅಂಶಗಳು ಅಡಕವಾಗಿವೆ. ಆದರೆ, ಈ ಅಂಶ ಎಷ್ಟೋ ಮಂದಿಗೆ ತಿಳಿದಿಲ್ಲ ಇದನ್ನು ತಿಳಿಸುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಹಿಂದೂಗಳ ಬಹುದಿನಗಳ ಬಯಕೆಯಂತೆ ಅಯೋಧ್ಯೆಯಲ್ಲಿ ಭವ್ಯ ಶ್ರೀ ರಾಮದೇವರ ಮಂದಿರ ನಿರ್ಮಾಣವಾಗುತ್ತಿದೆ. ಆದರೆ, ಪ್ರಭು ಶ್ರೀರಾಮಚಂದ್ರನ ವ್ಯಕ್ತಿತ್ವ, ಆದರ್ಶ ಇಂದಿನ ಪೀಳಿಗೆಗೆ ತಿಳಿಸಿಕೊಡುವ ಪ್ರಯತ್ನ ಆಗುತ್ತಿಲ್ಲ. ಇದು ಮೊದಲು ಆಗಬೇಕು. ಆದರೆ, ವಿದೇಶಿಗರಿಗೆ ಪ್ರಭು ಶ್ರೀರಾಮಚಂದ್ರರ ವ್ಯಕ್ತಿತ್ವ ತಿಳಿದು, ಅವರೂ ಭಾರತಕ್ಕೆ ಬಂದು ಶ್ರೀರಾಮಚಂದ್ರನ ಬಗ್ಗೆ ಅಧ್ಯಯನದಲ್ಲಿ ತೊಡಗಿದ್ದಾರೆ. ಶ್ರೀರಾಮನ ಬಗ್ಗೆ ವಿದೇಶಿಗರಿಗಿರುವ ಆಸಕ್ತಿ ನಮ್ಮವರಿಗಿಲ್ಲ ಎಂದು ಬೇಸರ ಹೊರಹಾಕಿದರು.

ಈ ವೇಳೆ ಡಾ.ಪಾವಗಡ ಪ್ರಕಾಶ್ ರಾವ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿದ್ವಾನ್ ಪ್ರೀತಿ ಕುಮಾರ್, ವಿದ್ವಾನ್ ನೀತಿ ಕುಮಾರ್ ಅವರಿಂದ ಭರತನಾಟ್ಯ, ನಂತರ ನಾಟ್ಯ ಸಂಸ್ಕೃತಿ ಕಲಾನಿಕೇತನ ತಂಡದವರಿಂದ ಭರತನಾಟ್ಯ ನಡೆಯಿತು. ವೇದಿಕೆಯಲ್ಲಿ ರಾಷ್ಟ್ರ ಜಾಗೃತಿ ಅಭಿಯಾನದ ಜಿ.ಆರ್.ನಾಗರಾಜು, ಡಿ.ಟಿ.ಪ್ರಕಾಶ್, ವನಜಾ ಪಂಡಿತ್, ಡಾ.ಎಂ.ಮಹೇಶ್ ಶೆಣೈ ಇತರರಿದ್ದರು.



**77ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರ ಜಾಗೃತಿ ಅಭಿಯಾನ ಮೈಸೂರು ವಿಭಾಗ ವತಿಯಿಂದ ನಡೆದ 'ದೇಶಭಕ್ತಿ, ನಮ್ಮ ಸಂವಿಧಾನ, ನಮ್ಮ ಸಂಸ್ಕೃತಿ, ನಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಎರಡು ದಿನಗಳ ಜನ ಜಾಗೃತಿ ಅಭಿಯಾನ'ದಲ್ಲಿ ಖ್ಯಾತ ವಾಗ್ಮಿ ಡಾ.ಪಾವಗಡ ಪ್ರಕಾಶ್‌ರಾವ್ ಅವರು, ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ರಾಷ್ಟ್ರ ಜಾಗೃತಿ ಅಭಿಯಾನದ ಜಿ.ಆರ್.ನಾಗರಾಜು, ಡಿ.ಟಿ.ಪ್ರಕಾಶ್ ಇತರರಿದ್ದರು.**

> " ಸಮಾಜದಲ್ಲಿ ಹಲವು ವಿಚಾರಗಳನ್ನು ಸರಿಪಡಿಸಬೇಕಿದೆ. ಆದರೆ, ನಾಯಕರ ಕೊರತೆಯೋ, ಇಚ್ಛಾಶಕ್ತಿ ಇಲ್ಲವೋ ಗೊತ್ತಾಗುತ್ತಿಲ್ಲ. ಇಂದು ನಮ್ಮ ಚುನಾಯಿತ ಪ್ರತಿನಿಧಿಗಳಿಂದ ಹಿಡಿದು ವಿದ್ಯಾವಂತರಿಗೂ ರಾಷ್ಟ್ರಗೀತೆ, ನಾಡಗೀತೆ ಹೇಳಲು ಬರುವುದಿಲ್ಲ. ದೇಶದ ಜನರನ್ನು ಒಂದುಗೂಡಿಸಿದ್ದ 'ವಂದೇ ಮಾತರಂ ಗೀತೆ' ಹಾಡಬೇಕಾದರೂ ಪ್ರಸ್ತುತ ಅನುಮತಿ ಪಡೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಈ ನಿಟ್ಟಿನಲ್ಲಿ ಗೀತೆಗಳ ಮೂಲಕ ದೇಶ ಭಕ್ತಿ ಬಗ್ಗೆ ಅರಿವು ಮೂಡಿಸುತ್ತಿರುವುದು ಒಳ್ಳೆಯ ಕಾರ್ಯ.
>
> **– ನ್ಯಾ.ಎಸ್.ಕುಮಾರ್, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ.**

# ಮೈಸೂರಲ್ಲಿ ದೆಹಲಿ ಪೊಲೀಸರಿಂದ ಮನೋರಂಜನ್ ಸ್ನೇಹಿತರ ವಿಚಾರಣೆ

ಮೈಸೂರು,ಡಿ.20(ಪಿಎಂ)–ಸಂಸತ್‌ನಲ್ಲಿ ಕಲರ್ ಸ್ಮೋಕ್ ಸಿಡಿಸಿದ ಪ್ರಕರಣದ ಸಂಬಂಧ ಆರೋಪಿ ಮನೋರಂಜನ್ ಜೊತೆಯಲ್ಲಿ ಆತ್ಮೀಯ ಒಡನಾಟ ಹೊಂದಿದ್ದ ಕೆಲ ಸ್ನೇಹಿತರ ತಲಾಷೆ ನಡೆಸಿ, ದೆಹಲಿ ಪೊಲೀಸರು ಬುಧವಾರ ವಿಚಾರಣೆ ನಡೆಸಿದರು ಎಂದು ಹೇಳಲಾಗಿದೆ.

ದೆಹಲಿ ಪೊಲೀಸ್‌ನ ವಿವಿಧ ತಂಡಗಳು ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದು, ಮನೋರಂಜನ್‌ನ ಹಲವು ಸ್ನೇಹಿತರನ್ನು ಇಂದು ಪತ್ತೆಹಚ್ಚಿ ವಿಚಾರಣೆಗೆ ಒಳಪಡಿಸಿ, ಮನೋರಂಜನ್ ಚಟುವಟಿಕೆ ಕುರಿತು ಮಹತ್ವದ ಮಾಹಿತಿ ಕಲೆ ಹಾಕಲಾಗಿದೆ ಎಂದು ಹೇಳಲಾಗಿದೆ. ಪ್ರತಿಯೊಬ್ಬರನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿ, ಮನೋರಂಜನ್ ವರ್ತನೆ ಮತ್ತು ಚಟುವಟಿಕೆ ಸಂಬಂಧ ಮಾಹಿತಿ ಪಡೆಯಲಾಗಿದೆ ಎಂದು ಹೇಳಲಾಗಿದೆ.



ಮನೋರಂಜನ್

ಅಲ್ಲದೆ, ಮನೋರಂಜನ್ ಕುಟುಂಬದ ವಿಚಾರಣೆಯನ್ನು ದೆಹಲಿ ಪೊಲೀಸರು ಮೂರನೇ ದಿನವಾದ ಬುಧವಾರವೂ ಮುಂದುವರೆಸಿದರು. ಮೈಸೂರಿನ ವಿಜಯನಗರದ ಎರಡನೇ ಹಂತದಲ್ಲಿರುವ ಮನೋರಂಜನ್ ನಿವಾಸಕ್ಕೆ ಇಂದು ಸಂಜೆ 5.30ರ ಸುಮಾರಿಗೆ ಭೇಟಿ ನೀಡಿದ ಇಬ್ಬರು ತನಿಖಾಧಿಕಾರಿಗಳು, ಸುಮಾರು ಗಂಟೆ ಕಾಲ ವಿಚಾರಣೆ ಮತ್ತು ಶೋಧ ಕಾರ್ಯ ನಡೆಸಿದರು.

ಮನೋರಂಜನ್‌ನ ಹಣದ ಮೂಲದ ಬಗ್ಗೆ ತೀವ್ರತರವಾಗಿ ತನಿಖೆ ನಡೆಸಲಾಗುತ್ತಿದೆ ಎನ್ನಲಾಗಿದ್ದು, ಈ ಸಂಬಂಧ ಸೂಕ್ತ ಮಾಹಿತಿ ಸಂಗ್ರಹದಲ್ಲಿ ತನಿಖಾಧಿಕಾರಿಗಳು ನಿರತರಾಗಿದ್ದಾರೆ ಎಂದು ಹೇಳಲಾಗಿದೆ. ಆರೋಪಿ ಮನೋರಂಜನ್ ಹಾಗೂ ಇವರ ತಂದೆ ದೇವರಾಜೇಗೌಡ ಅವರ ಬ್ಯಾಂಕ್ ಖಾತೆಗಳ ಸಂಪೂರ್ಣ ವಿವರ ಪಡೆದುಕೊಳ್ಳಲಾಗಿದೆ. ಯಾವುದೇ ವೃತ್ತಿಯಲ್ಲಿ ಇಲ್ಲದಿದ್ದರೂ ಆರೋಪಿ ಎಲ್ಲಿಂದ ಹಣ ಹೊಂದಿಸುತ್ತಿದ್ದ ಎಂಬ ನಿಟ್ಟಿನಲ್ಲಿ ತನಿಖೆ ತೀವ್ರಗೊಳಿಸಲಾಗಿದೆ ಎಂದು ತಿಳಿದು ಬಂದಿದೆ.

## ಧನಕರ್ ಅವರನ್ನು ಅಣಕಿಸಿದ ಪ್ರಕರಣ
# ಜಾತಿ ಎಳೆದು ತರುವ ಕೆಲಸ ಬೇಡ



**ನವದೆಹಲಿ:** ಪ್ರತಿ ವಿಚಾರದಲ್ಲಿಯೂ ಜಾತಿಯನ್ನು ಎಳೆದು ತರುವ ಕೆಲಸ ಆಗಬಾರದು ಎಂದು ಹೇಳಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯಲ್ಲಿ ತಮಗೆ ಮಾತನಾಡಲು ಅವಕಾಶ ಕೊಡದೆ ಇದ್ದಾಗಲೆಲ್ಲ ತಮ್ಮ ಜಾತಿಯ ಕಾರಣಕ್ಕಾಗಿ ಹೀಗಾಗುತ್ತಿದೆ ಎಂದು ದೂರಬೇಕೇ ಎಂದು ಪ್ರಶ್ನಿಸಿದರು.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಅವರು ಅಣಕಿಸಿರುವುದು ವಿವಾದ ಸೃಷ್ಟಿಸಿರುವ ಬೆನ್ನಲ್ಲೇ ಖರ್ಗೆ ಈ ಪ್ರಶ್ನೆ ಎತ್ತಿದ್ದಾರೆ. ರಾಜ್ಯಸಭೆಯ ಸಭಾಪತಿ ಕೂಡ ಆಗಿರುವ ಧನಕರ್ ಅವರು ತಮ್ಮನ್ನು ಅಣಕಿಸಿದ್ದನ್ನು ಖಂಡಿಸಿದ್ದಾರೆ. ಅಣಕಿಸಿರುವುದು ತಮ್ಮ ರೈತಾಪಿ ಹಿನ್ನೆಲೆ ಹಾಗೂ ಜಾಟ್ ಜಾತಿಗೆ ಮಾಡಿದ ಅವಮಾನ ಎಂದು ಹೇಳಿದ್ದಾರೆ. ಆಡಳಿತಾರೂಢ ಬಿಜೆಪಿ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಖರ್ಗೆ ಅವರು, ಸದನದ ಸದಸ್ಯರಿಗೆ ರಕ್ಷಣೆ ಒದಗಿಸುವ ಕೆಲಸವನ್ನು ಸಭಾಪತಿ ಮಾಡಬೇಕು. ಆದರೆ ಅವರೇ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದರು. ನನಗೆ ರಾಜ್ಯಸಭೆಯಲ್ಲಿ ಮಾತನಾಡಲು ಹಲವು ಬಾರಿ ಅವಕಾಶ ಕೊಟ್ಟಿಲ್ಲ. ನಾನು ದಲಿತ ಎಂಬ ಕಾರಣಕ್ಕೆ ಹೀಗೆ ಮಾಡಲಾಗುತ್ತಿದೆ ಎಂದು ಹೇಳಬೇಕೇ ಎಂದು ಪ್ರಶ್ನಿಸಿದ ಅವರು, ಜಾತಿಯ ಬಗ್ಗೆ ಸದನದ ಒಳಗೆ ಮಾತನಾಡಿ ಸದನದ ಹೊರಗಿರುವ ಜನರನ್ನು ಪ್ರಚೋದಿಸುವ ಕೆಲಸ ಮಾಡಬಾರದು ಎಂದರು.

ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ತಮ್ಮ ಜಾತಿಯ ಬಗ್ಗೆ ಮಾತನಾಡುವುದು ಇಡೀ ದೇಶದ ಪಾಲಿಗೆ ಬೇಸರದ ಸಂಗತಿ ಎಂದು ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧುರಿ ಹೇಳಿದರು. ಸಂಸದರನ್ನು ಅಮಾನತು ಮಾಡಿದ ಕ್ರಮವನ್ನು ವಿರೋಧಿಸಿ ಸಂಸತ್ತಿನ ಮೆಟ್ಟಿಲುಗಳ ಮೇಲೆ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಬ್ಯಾನರ್ಜಿ ಅವರು ಧನಕರ್ ಅವರನ್ನು ಅಣಕಿಸಿದ್ದು ವಿವಾದಕ್ಕೆ ಕಾರಣವಾಗಿದೆ. ಅಣಕವಾಡಿದ್ದನ್ನು ಬಿಜೆಪಿ ಖಂಡಿಸಿದೆ.

## ಡಿ.23ರಿಂದ ಜಯನಗರ ರಾಮಮಂದಿರದಲ್ಲಿ ಅಯೋಧ್ಯೆ ರಾಮಮಂದಿರ ಮಾದರಿ ದರ್ಶನ

ಮೈಸೂರು, ಡಿ.20 (ಎಸ್‌ಪಿಎನ್) –ಮೈಸೂರು ಜಯನಗರ 16ನೇ ಮುಖ್ಯರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಡಿಸೆಂಬರ್ 23ರಿಂದ 26ರವರೆಗೆ ಶ್ರೀವೈಕುಂಠ ಏಕಾದಶಿ ಪ್ರಯುಕ್ತ ಶ್ರೀ ಅಯೋಧ್ಯೆ ರಾಮ ಮಂದಿರ ಮಾದರಿ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀ ರಾಮಮಂದಿರದ ಅಧ್ಯಕ್ಷ ಅರುಣ್ ಶರ್ಮಾ ತಿಳಿಸಿದ್ದಾರೆ.

ಡಿ.24ರಂದು ಭಾನುವಾರ ಸಂಜೆ 6.30ಕ್ಕೆ ಗಮಕ ವಾಚನವನ್ನು ವಿದ್ವಾಂಸರಿಂದ ಆಯೋಜಿಸಲಾಗಿದ್ದು, ಭಕ್ತಾದಿಗಳು ಸಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ಅಯೋಧ್ಯೆ ರಾಮ ಮಂದಿರವನ್ನು ಕಣ್ತುಂಬಿಕೊಳ್ಳಬೇಕು. ವಿಶೇಷವಾಗಿ ಶ್ರೀ ಅಯೋಧ್ಯೆ ಶ್ರೀರಾಮ ಮಂದಿರದ ಮಾದರಿಯು ಮೈಸೂರಿನಲ್ಲಿ ಪ್ರಥಮ ಪ್ರದರ್ಶನವನ್ನು ಶ್ರೀ ಆಂಜನೇಯ ಮಂದಿರದಲ್ಲಿ ಪ್ರದರ್ಶನವಾಗಿದ್ದು, 48ನೇ ಪ್ರದರ್ಶನವು ಒಂದು ಮಂಡಲ ಕಾಲ ಶ್ರೀರಾಮಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿರುವುದು ಬಹಳ ಶುಭದಾಯಕ. ಪ್ರತಿದಿನ ಬೆಳಗ್ಗೆ 6ರಿಂದ ರಾತ್ರಿ 11ರವರೆಗೆ ಭಕ್ತರು ಈ ಅಯೋಧ್ಯೆ ರಾಮ ಮಂದಿರ ಮಾದರಿಯನ್ನು ವೀಕ್ಷಿಸಬಹುದು ಎಂದು ಅವರು ತಿಳಿಸಿದ್ದಾರೆ.

## ಇಂದಿನಿಂದ ಪ್ರವಚನ

ಮೈಸೂರು, ಡಿ.20–ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಶ್ರೀ ರಾಘವೇಂದ್ರ ಸೇವಾ ಸಮಿತಿ ವತಿಯಿಂದ ಡಿಸೆಂಬರ್ 21ರಿಂದ 24ರವರೆಗೆ ಪ್ರತಿದಿನ ಸಂಜೆ 5ರಿಂದ 6ರವರೆಗೆ ಪಂಡಿತ್ ಶ್ರೀ ರಾಮ ಚಂದ್ರಾಚಾರ್ಯರಿಂದ ಪ್ರವಚನ ಏರ್ಪಡಿಸಲಾಗಿದೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪತ್ರಿಕಾ ಪ್ರಕಟಣೆ ಕೋರಿದೆ. ಹೆಚ್ಚಿನ ಮಾಹಿತಿಗೆ ದೂ. 0821–2511355.

## ಉತ್ಕರ್ಷ ಯೋಗ, ಮೇಧಾ ಯೋಗ ಶಿಬಿರ

ಮೈಸೂರು, ಡಿ. 20– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಉತ್ಕರ್ಷ ಯೋಗ, ಮೇಧಾ ಯೋಗ ಶಿಬಿರ ಆಯೋಜಿಸಲಾಗಿದೆ.

ಮೇಧಾ ಯೋಗ (13ರಿಂದ 17 ವರ್ಷ ವಯಸ್ಸಿನವರಿಗೆ): ಡಿ.26ರಿಂದ 30ರವರೆಗೆ ಸಂಜೆ 5 ಗಂಟೆಯಿಂದ 7 ಗಂಟೆಯವರೆಗೆ.

ಉತ್ಕರ್ಷ ಯೋಗ (8ರಿಂದ 13 ವರ್ಷ ವಯಸ್ಸಿನವರಿಗೆ): ಡಿ.25ರಿಂದ 29ರವರೆಗೆ ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗೆ ಮೊ. 9008043065, 9845685892 ಸಂಪರ್ಕಿಸಬಹುದು.

## ವಧು–ವರರ ಸಮಾವೇಶ

ಮೈಸೂರು,ಡಿ.20–ಮೈಸೂರಿನ ಲಪ್ಲಿ ವಧು–ವರರ ಮಾಹಿತಿ ಕೇಂದ್ರದ ವತಿಯಿಂದ ಡಿ.24ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಲೇಖನ ಪಾರ್ಟಿ ಹಾಲ್‌ನಲ್ಲಿ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9591163 666, ದೂ.0821–4264402 ಸಂಪರ್ಕಿಸಿ.

# ಪೌರಕಾರ್ಮಿಕರ ಕಾಯಂಗಾಗಿ ಆಗ್ರಹಿಸಿ ನಾಳೆ 'ಬೆಂಗಳೂರು ಚಲೋ'

ಮೈಸೂರು,ಡಿ.20(ಎಸ್‌ಪಿಎನ್)– ನಗರ ಪಾಲಿಕೆ, ನಗರಸಭೆ, ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರಾಜ್ಯದ ಎಲ್ಲಾ ಪೌರಕಾರ್ಮಿಕರನ್ನು ರಾಜ್ಯ ಸರ್ಕಾರ ಕಾಯಂಗೊಳಿಸಬೇಕು ಎಂದು ಒತ್ತಾಯಿಸಿ ಡಿಸೆಂಬರ್ 22ರಂದು 'ಬೆಂಗಳೂರು ಚಲೋ' ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಸಂಘದ ಅಧ್ಯಕ್ಷ ನಾರಾಯಣ ತಿಳಿಸಿದರು.



**ಮೈಸೂರು ಜಲದರ್ಶಿನಿಯಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಸಂಘದ ಅಧ್ಯಕ್ಷ ನಾರಾಯಣ ಮಾತನಾಡಿದರು.**

ಮೈಸೂರು ಜಲದರ್ಶಿನಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 11,800 ಸಾವಿರ ಪೌರ ಕಾರ್ಮಿಕರಿಗಷ್ಟೇ ನೇರಪಾವತಿ ವ್ಯವಸ್ಥೆ ಜಾರಿಯಲ್ಲಿದೆ. ಇನ್ನೂ 26,200 ಪೌರ ಕಾರ್ಮಿಕರಿಗೆ ಸೌಲಭ್ಯ ಸಿಕ್ಕಿಲ್ಲ. ಹಾಗಾಗಿ ಡಿಸೆಂಬರ್ 22ರ ಶುಕ್ರವಾರ ಬೆಳಿಗ್ಗೆ 11ಕ್ಕೆ ಬಿಬಿಎಂಪಿ ಕಚೇರಿಯಿಂದ ಸ್ವಾತಂತ್ರ್ಯ ಉದ್ಯಾನದವರೆಗೆ 25 ಸಾವಿರ ಪೌರ ಕಾರ್ಮಿಕರು ಪ್ರತಿಭಟನಾ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ಗುತ್ತಿಗೆ ಪದ್ಧತಿ ರದ್ದಾಗಿ ನೇರ ಪಾವತಿ ವ್ಯವಸ್ಥೆ ಜಾರಿಗೊಂಡರೂ ಉದ್ಯೋಗ, ಆರ್ಥಿಕ, ಸಾಮಾಜಿಕ ಹಾಗೂ ಆರೋಗ್ಯ ಭದ್ರತೆ ಇಲ್ಲ. ಒಳಚರಂಡಿ ಕಾರ್ಮಿಕರು, ವಾಹನ ಚಾಲಕರು ನೇರ ಪಾವತಿ ವ್ಯವಸ್ಥೆಗೆ ಒಳಪಟ್ಟಿಲ್ಲ. ಅವರನ್ನೂ ಕಾಯಂ ಮಾಡಬೇಕು. ಹಾಗಾಗಿ ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ರ್‍ಯಾಲಿ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಆರ್.ಶಿವಣ್ಣ, ಎಸ್.ಎಂ.ಪಳನಿಸ್ವಾಮಿ, ನಾಗರಾಜು, ಆರ್.ದಾಸ್, ಪಳನಿ, ಜಯರಾಮು, ಕೆ.ನಾಗರತ್ನ, ಮಂಜು ಪಾಲ್ಗೊಂಡಿದ್ದರು.

# ವಾಣಿಜ್ಯ ಸಿಲಿಂಡರ್‌ಗಳ ದರ ದುಬಾರಿ

**14.2 ಕೆಜಿ. ಸಿಲಿಂಡರ್‌ಗಳಿಗೆ 19 ಕೆಜಿ ಸಿಲಿಂಡರ್‌ನಿಂದ ಗ್ಯಾಸ್ ತುಂಬಿ ಮಾರಾಟ**

ಮೈಸೂರು, ಡಿ.20(ಜಿಎ)–ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಶೇ. 100 ರಷ್ಟು ಹೆಚ್ಚಾಗಿರುವುದರಿಂದಾಗಿ ಕೆಲವು ಸಂಸ್ಥೆಗಳು ಗೃಹ ಬಳಕೆಯ 14.2 ಕೆಜಿ ಸಿಲಿಂಡರ್‌ಗಳಿಗೆ 19 ಕೆಜಿ ಅಡುಗೆ ಅನಿಲ ಸಿಲಿಂಡರ್‌ನಿಂದ ತುಂಬಿ ವಿತರಿಸುತ್ತಿವೆ. ಇದರಿಂದಾಗಿ ಅನೇಕ ಗಂಭೀರ ಅವಘಡ ಸಂಭವಿಸಬಹುದಾಗಿದೆ ಎಂದು ಗ್ರಾಹಕ ದಕ್ಷತಾ ಕಲ್ಯಾಣ್ ಫೌಂಡೇಷನ್ ರಾಜ್ಯ ವಿಭಾಗದ ಮುಖ್ಯಸ್ಥ ಚೇತನ್ ಕಳವಳ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರಿಂದ ಸರ್ಕಾರಕ್ಕೂ ಕೋಟ್ಯಂತರ ನಷ್ಟವಾಗುತ್ತಿದೆ. ಈ ದಂಧೆ ನಡೆಸುವವರಿಗೆ ಸರ್ಕಾರಿ ತೈಲ ಕಂಪನಿಗಳು, ಎಲ್‌ಪಿಜಿ ವಿತರಕರು ಬೆಂಬಲ ನೀಡುತ್ತಿದ್ದಾರೆ. ಹೀಗಾಗಿ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ತಮ್ಮ ಸಂಸ್ಥೆ ಮಾಡುತ್ತಿದ್ದು, ಗ್ರಾಹಕರ ಹೆಸರಿನಲ್ಲಿ ನಕಲಿ ನೋಂದಣಿ ಮಾಡಿಸಿ ಕಾಳಸಂತೆಯಲ್ಲಿ ಸಿಲಿಂಡರ್‌ಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದರು.

ಸುಲಭವಾಗಿ ಗ್ಯಾಸ್ ರೀಫಿಲ್ಲಿಂಗ್ ದಂಧೆ ನಡೆಸುವ ಮೂಲಕ ಜೀವಗಳನ್ನು ಅಲ್ಪಮೊತ್ತಕ್ಕೆ ಪಣಕ್ಕಿಡಲಾಗುತ್ತಿದೆ. ಇಂತಹವರಿಗೆ ಜೈಲು ಹಾಗೂ ದಂಡ ಶಿಕ್ಷೆ ವಿಧಿಸಲು ಅವಕಾಶವಿದ್ದರೂ, ತಮ್ಮ ಸಂಸ್ಥೆ ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಹೀಗಾಗಿ ಹಿರಿಯ ಅಧಿಕಾರಿಗಳು ಇತ್ತ ಗಮನ ಹರಿಸಬೇಕೆಂದರು. ಸುದ್ದಿಗೋಷ್ಠಿಯಲ್ಲಿ ಯಶ್ ದೇಶಪಾಂಡೆ, ಪ್ರಶಾಂತ್ ಜಾಮಗಡ, ಶ್ರೀನಿವಾಸ್ ಉಪಸ್ಥಿತರಿದ್ದರು.

# ಐಆರ್‌ಸಿಟಿಸಿಯಿಂದ ಹೊಸ ವರ್ಷಕ್ಕೆ ವಿಶೇಷ ಪ್ರವಾಸ ಆಯೋಜನೆ

ಮೈಸೂರು, ಡಿ.20–ಐಆರ್‌ಸಿಟಿಸಿ ಬೆಂಗಳೂರು ತನ್ನ ಗ್ರಾಹಕರಿಗೆ ಹೊಸ ವರ್ಷ 2024ರ ಜನವರಿಯಲ್ಲಿ ನೇಪಾಳಕ್ಕೆ ಅತ್ಯಾಕರ್ಷಕ ಅಂತರಾಷ್ಟ್ರಿಯ ಏರ್ ಪ್ಯಾಕೇಜ್ ನೊಂದಿಗೆ ಆಚರಿಸಲು ಅತ್ಯುತ್ತಮ ಅವಕಾಶವನ್ನು ಪ್ರಸ್ತುತಪಡಿಸುತ್ತಿದೆ. ಪ್ರವಾಸವನ್ನು ಬೆಂಗಳೂರಿನಿಂದ ಪ್ರಾರಂಭಿಸಲಾಗುತ್ತಿದ್ದು, 2024 ಜನವರಿ 27ರಿಂದ ಪ್ರಾರಂಭಗೊಳ್ಳುವ ಈ ಪ್ರವಾಸವು 5 ರಾತ್ರಿ, 6 ದಿನಗಳ ಪ್ಯಾಕೇಜ್ ಆಗಿದ್ದು, ಒಬ್ಬರಿಗೆ 43,960 ರೂ.ಗಳಾಗಿರುತ್ತದೆ. ಪ್ರವಾಸವು ಕಠ್ಮಂಡು ಮತ್ತು ಪೋಖರಾದಲ್ಲಿ ಪಶುಪತಿನಾಥ ದೇವಾಲಯ, ಬೂದನಾಥ ಸ್ತೂಪ, ಸ್ವಯಂಭೂತನಾಥ ಸ್ತೂಪ, ಬಿಂಧ್ಯಾಬಾಸಿನಿ ದೇವಾಲಯ, ಗುಪ್ತೇಶ್ವರ ಮಹದೇವ ಗುಹೆ, ಮನಕಮನ ದೇವಾಲಯ ಮತ್ತು ಇತರೆ ಸ್ಥಳಗಳನ್ನು ಒಳಗೊಂಡಿದೆ.

ಈ ಪ್ಯಾಕೇಜ್‌ನಲ್ಲಿ ವಿಶೇಷ ಸೌಲಭ್ಯಗಳನ್ನು ನೀಡಲಾಗಿದ್ದು, ನೇಪಾಳ ಏರ್ ಲೈನ್ಸ್‌ನಿಂದ ಏರ್ ಟಿಕೆಟ್ ಒದಗಿಸಲಾಗುತ್ತಿದ್ದು, ಮೂರು ಸ್ಟಾರ್ ಹೋಟೆಲ್‌ಗಳಲ್ಲಿ ಬೆಳಗಿನ ಉಪಾಹಾರ ಮತ್ತು ರಾತ್ರಿಯ ಭೋಜನವನ್ನು ಒಳಗೊಂಡಿರುತ್ತದೆ. ಕಠ್ಮಂಡುವಿನಲ್ಲಿ 3 ರಾತ್ರಿಗಳು ಮತ್ತು ಪೋಖಾರಾದಲ್ಲಿ 2 ರಾತ್ರಿಗಳ ವಸತಿ ವ್ಯವಸ್ಥೆ, ಪ್ರೇಕ್ಷಣೀಯ ಸ್ಥಳಗಳ ವೀಕ್ಷಿಸಲು ಎಸಿ ಬಸ್ ವ್ಯವಸ್ಥೆ ಇರುತ್ತದೆ. ಸ್ಥಳಗಳಿಗೆ ಪ್ರವೇಶ ಟಿಕೆಟ್‌ಗಳು ಪ್ರವಾಸಿ ಮಾರ್ಗದರ್ಶಿ ಮತ್ತು ಪ್ರಯಾಣ ವಿಮೆ ಮತ್ತು ಜಿಎಸ್‌ಟಿಯನ್ನು ಒಳಗೊಂಡಿರುತ್ತದೆ. ಅಲ್ಲದೆ ಅಂಡಮಾನ್ ಉಷ್ಣವಲಯದ ಅದ್ಭುತಗಳು ಎಂಬ ದೇಶೀಯ ವಿಮಾನ ವಿಮಾನ ಪ್ರವಾಸವನ್ನು ಆಯೋಜಿಸಿದ್ದು, ಈ ಪ್ರವಾಸವು 2024 ಜನವರಿ 16ರಿಂದ ಆರಂಭಗೊಳಲಿದ್ದು, 5 ರಾತ್ರಿ, 6 ದಿನಗಳ ವಿಶೇಷ ಪ್ಯಾಕೇಜ್ ಆಗಿದ್ದು, ಒಬ್ಬರಿಗೆ 50,050 ರೂ.ಗಳಾಗಿರುತ್ತದೆ. ಹ್ಯಾವ್ಲಾಕ್, ನೀಲ್, ನಾರ್ತ್ ಬೇ ಐಲ್ಯಾಂಡ್, ಪೋರ್ಟ್‌ಬ್ಲೇರ್, ರಾಸ್ ಐಲ್ಯಾಂಡ್ ಸ್ಥಳಗಳನ್ನು ಪ್ಯಾಕೇಜ್ ಒಳಗೊಂಡಿರುತ್ತದೆ. ಈ ಪ್ರವಾಸವು ವಿಮಾನದ ವಸತಿ ಊಟ ಹಾಗೂ ಪ್ರವಾಸಿ ವ್ಯವಸ್ಥಾಪಕರು ಮತ್ತು ಪ್ರವಾಸಿ ವಿಮೆ ಒಳಗೊಂಡಿದ್ದು, ಪ್ರವಾಸಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಎಲ್‌ಟಿಸಿ ಸೌಲಭ್ಯ ವನ್ನು ಪಡೆಯಬಹುದಾಗಿದೆ ಎಂದು ಐಆರ್‌ಸಿಟಿಸಿ ಪ್ರಧಾನ ವ್ಯವಸ್ಥಾಪಕ ಕುಮಾರ್ ಸದಾನಂದನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಪ್ರವಾಸಕ್ಕಾಗಿ ಐಆರ್‌ಸಿಟಿಸಿ ಕೌಂಟರ್‌ಗಳಲ್ಲಿ ಮತ್ತು ಆನ್‌ಲೈನ್ www.irctctourism.com ಮೂಲಕ ಬುಕ್ಕಿಂಗ್ ಮಾಡಬಹುದಾಗಿದೆ. ಮಾಹಿತಿಗಾಗಿ ಬೆಂಗಳೂರು ದೂ.ಸಂ: 85959 31292/90, ಮೈಸೂರು ದೂ.ಸಂ: 859593 1294, ಹುಬ್ಬಳ್ಳಿ ದೂ.ಸಂ: 8595 931293 ಸಂಪರ್ಕಿಸಬಹುದು.**

# ರೇಷ್ಮೆ ಕೃಷಿಯಲ್ಲಿ ಇನ್ನು ಹಲವು ಸಂಶೋಧನೆ ಆಗಬೇಕಿದೆ

**ತೋಟಗಾರಿಕಾ ವಿವಿ ವಿಶ್ರಾಂತ ಕುಲಪತಿ ಡಾ.ಎಸ್.ಬಿ.ದಂಡಿನ್ ಸಲಹೆ**

ಮೈಸೂರು,ಡಿ.20(ಎಂಕೆ)–ರೇಷ್ಮೆ ಕೃಷಿಯಲ್ಲಿ ರೇಷ್ಮೆಹುಳು ಗೂಡು ಕಟ್ಟದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಮತ್ತಷ್ಟು ಸಂಶೋಧನೆ ಅಗತ್ಯವಿದೆ ಎಂದು ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಉನ್ನತ ಸಮಿತಿ ಅಧ್ಯಕ್ಷ ಡಾ.ಎಸ್.ಬಿ.ದಂಡಿನ್ ಹೇಳಿದರು.



ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ 'ರೇಷ್ಮೆ ಹುಳು ಗೂಡು ಕಟ್ಟದಿರುವ ಹಾಗೂ ರೇಷ್ಮೆ ಕೃಷಿಯ ಚಟುವಟಿಕೆಗಳ ಕುರಿತು ಉನ್ನತ ಮಟ್ಟದ ಸಮಿತಿ ಸಭೆ ನಡೆಸಿದ ಅವರು, ವಿಜ್ಞಾನಿಗಳು ಮತ್ತಷ್ಟು ಸಂಶೋಧನೆ ನಡೆಸುವ ಅವಶ್ಯಕತೆಯಿದ್ದು, ಬೇರೆ ಬೇರೆ ರೈತರ ಹಿಪ್ಪುನೇರಳೆ ತೋಟಗಳಿಂದ ಮಣ್ಣು ತಂದು ಪರೀಕ್ಷೆ ಮಾಡಬೇಕು. ಎಲ್ಲಾ ಚಾಕಿ ಕೇಂದ್ರಗಳನ್ನು ಪರಿಶೀಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ನಿರ್ದೇಶಕ ಡಾ.ಎಸ್. ಗಾಂಧಿ ದಾಸ್ ಮಾತನಾಡಿ, ಸಂಶೋಧನೆಗೆ ಬೇಕಾದ ಎಲ್ಲಾ ನೆರವನ್ನು ವಿಜ್ಞಾನಿಗಳಿಗೆ ನೀಡಲಾಗುವುದು. ಎಲ್ಲಾ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿ ಈ ಸಮಸ್ಯೆಯನ್ನು ಬಗೆಹರಿಸುವ ಅವಶ್ಯಕತೆಯಿದೆ. ಶಿಫಾರಸ್ಸು ಮಾಡದ ಕೀಟನಾಶಕಗಳನ್ನು ಹಿಪ್ಪುನೇರಳೆ ತೋಟಕ್ಕೆ ಮತ್ತು ರೇಷ್ಮೆಹುಳುಗಳಿಗೆ ಬಳಕೆ ಮಾಡುವುದರಿಂದ ರೇಷ್ಮೆಹುಳು ಗೂಡು ಕಟ್ಟದಿರುವುದಕ್ಕೆ ಕಾರಣವಾಗುತ್ತಿದೆ. ಈ ಕುರಿತು ರೈತರಲ್ಲಿ ಯಾವುದೇ ಸಂಸ್ಥೆಯು ಶಿಫಾರಸ್ಸು ಮಾಡದ ಕೀಟನಾಶಕಗಳನ್ನು ಮತ್ತು ರಾಸಾಯನಿಕಗಳನ್ನು ತಮ್ಮ ಹಿಪ್ಪುನೇರಳೆ ತೋಟಕ್ಕೆ ಮತ್ತು ರೇಷ್ಮೆಹುಳುಗಳಿಗೆ ಬಳಕೆ ಮಾಡಬಾರದು ಎಂದು ಮನವರಿಕೆ ಮಾಡಿಕೊಡಬೇಕು ಎಂದರು.

ಕೇಂದ್ರ ರೇಷ್ಮೆ ಮಂಡಳಿ ನಿವೃತ್ತ ನಿರ್ದೇಶಕ ಡಾ. ನಿರ್ಮಲ್‌ಕುಮಾರ್, ವಿಜ್ಞಾನಿ ಹೆಚ್.ಕೆ.ಬಸವರಾಜು, ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ವಿಜ್ಞಾನಿ ಡಾ.ಎಸ್.ಮಂಥಿರ ಮೂರ್ತಿ, ರೇಷ್ಮೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಎನ್.ವೈ.ಚಿಗರಿ, ವಿಜ್ಞಾನಿಗಳಾದ ಡಾ.ಕೆ.ಬಿ.ಚಂದ್ರಶೇಖರ್, ಡಾ.ರಘುನಾಥ್, ಡಾ.ಎಸ್.ಬಾಲಸರಸ್ವತಿ, ಡಾ.ಮುತ್ತುಲಕ್ಷ್ಮೀ, ಡಾ.ಸಿ.ಎಮ್.ಬಾಬು, ಶ್ಯಾನ್‌ಬೋಗ್, ಡಾ.ಎಸ್.ಮಹಿಬಾ ಹೆಲೆನ್, ಡಾ.ಸತೀಶ್, ಡಾ.ಮಲ್ಲಿಕಾರ್ಜನ, ಡಾ.ಜಾಯ್ಸಿರಾಣಿ, ಡಾ.ಧಾನೇಶ್ವರ್ ಪ್ರಧಾನ್ ಸೇರಿದಂತೆ 50ಕ್ಕೂ ಹೆಚ್ಚು ವಿಜ್ಞಾನಿಗಳು ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದರು.

## ನಕ್ಕರೆ ಅದೇ ಸ್ವರ್ಗ

ರೋಗಿ : "ಏನ್ ಡಾಕ್ಟರ್, ಕೇವಲ ಒಂದೇ ಹಲ್ಲು ಕಿತ್ತದ್ದಕ್ಕೆ 200 ರೂಪಾಯಿ ಕೊಡಬೇಕಾ?"

ಡಾಕ್ಟರ್ : "ಹಲ್ಲು ಕಿತ್ತದ್ದಕ್ಕೆ 50 ರೂ.ಮಾತ್ರ. ಆದರೆ ಹಲ್ಲು ಕೀಳುವಾಗ ನೀವು ಕಿರುಚಿದ್ದನ್ನು ಕೇಳಿ ಕಾಯ್ತಾ ಇದ್ದ 3 ಜನ ಗಿರಾಕಿಗಳು ಓಡಿ ಹೋದ್ರು. ಅದಕ್ಕಾಗಿ ಉಳಿದ 150 ರೂಪಾಯಿ!"

ಮೈಸೂರು ಮಿತ್ರ
ಗುರುವಾರ, 21 ಡಿಸೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ಒಳ್ಳೆಯ ಪುಸ್ತಕವು ಕಷ್ಟ ಕಾಲದಲ್ಲಿ ಸ್ನೇಹಿತನಾಗುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ ಆಳವಾದ ದುಃಖವನ್ನು ಮರೆಯಲು ಸಹಾಯ ಮಾಡುತ್ತದೆ.

–ವೀಣಾ ಶಾಂತೇಶ್ವರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುರ್ಯೋಧನನಿದ್ದಲ್ಲಿ ಕೌರವರ ಬಳಗಕ್ಕೆ ಕೊರತೆಯೇ?

## ನಿಮ್ಮ ಪತ್ರಗಳು

### ರಿಂಗ್ ರೋಡ್‌ನಲ್ಲಿ ನಿರಂತರ ಅಪಘಾತ ತಡೆಗೆ ಹಂಪ್‌ಗಳ ಅಗತ್ಯ

ಮಾನ್ಯರೆ,

ಕಳೆದ ಭಾನುವಾರ ಸ್ಕೂಟರ್‌ಗೆ ಕಾರು ಡಿಕ್ಕಿಯಾಗಿ ಪತ್ರಕರ್ತರೊಬ್ಬರು ಟಿ. ನರಸೀಪುರ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಹಾಗೂ ಸ್ಕೂಟರ್‌ಗೆ ಟಿಪ್ಪರ್ ಡಿಕ್ಕಿಯಾಗಿ ಶಿಕ್ಷಕಿಯೊಬ್ಬರು ಸೋಮವಾರ ನಿಧನರಾಗಿರುವ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ.

ಮೈಸೂರು ನಗರದೊಳಗೆ ಬರುವ ವಾಹನಗಳ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ನಿರ್ಮಿಸಿದ ಹೊರ ವರ್ತುಲ ರಸ್ತೆಗಳು ಇಂದು ಜನರ ಪ್ರಾಣ ತೆಗೆಯುವ "ಖೆಡ್ಡಾ"ಗಳಾಗಿ ಮಾರ್ಪಟ್ಟಿರುವುದು ವಿಷಾದನೀಯ.

ರಿಂಗ್ ರಸ್ತೆ ನಿರ್ಮಾಣವಾದ ಈ ದಶಕದಲ್ಲಿ ನೂರಾರು ಜನರು ಈವರೆಗೆ ಪ್ರಾಣ ತೆತ್ತಿದ್ದಾರೆ. ಆದರೆ ಅದನ್ನು ತಡೆಗಟ್ಟಲು ನಗರಪಾಲಿಕೆ, ಹೆದ್ದಾರಿ ಪ್ರಾಧಿಕಾರ ಮತ್ತು ಸರ್ಕಾರ ಯಾವ ಯೋಜನೆಯನ್ನೂ ರೂಪಿಸದೆ ತಮಗೆ ಸಂಬಂಧವೇ ಇಲ್ಲವೇನೋ ಎನ್ನುವಂತಿವೆ.

45 ಕಿ ಮೀ.ವ್ಯಾಪ್ತಿಯ ವರ್ತುಲ ರಸ್ತೆಗಳ ಜಂಕ್ಷನ್‌ಗಳಲ್ಲಿ, ವೃತ್ತಗಳಲ್ಲಿ ಹಾಗೂ ಕೂಡು ರಸ್ತೆಗಳ ಎರಡೂ ಬದಿಗಳಲ್ಲಿ ಟ್ರಾಫಿಕ್ ಸಿಬ್ಬಂದಿ ಬ್ಯಾರಿಕೇಡ್‌ಗಳನ್ನು ಇಟ್ಟಿದ್ದಾರೆ. ಆದರೆ ಲಂಗು ಲಗಾಮು ಇಲ್ಲದೆ ಬರುವ ಲಾರಿಗಳು, ಕಾರುಗಳು ಹಾಗೂ ದ್ವಿಚಕ್ರ ವಾಹನ ಸವಾರರು ಇದ್ಯಾವುದನ್ನೂ ಲೆಕ್ಕಿಸದೆ ನಿಯಂತ್ರಣವಿಲ್ಲದೆ ವಾಹನ ಚಲಾಯಿಸುವುದೇ ಇಂತಹ ಅಪಘಾತಗಳಿಗೆ ಕಾರಣವಾಗಿದೆ. ಅಲ್ಲದೆ ಇಂತಹ ಜಂಕ್ಷನ್‌ಗಳು ಆ ಕಡೆಯಿಂದ ಈ ಕಡೆಗೆ ಹಾಗೂ ಈ ಕಡೆಯಿಂದ ಆ ಕಡೆಗೆ ಬಡಾವಣೆಗಳ ಜನರ ಓಡಾಟಕ್ಕೂ ಮಾರ್ಗವಾಗಿದ್ದು, ಈ ರೀತಿ ವೇಗವಾಗಿ ಬರುವ ವಾಹನಗಳ ದೆಸೆಯಿಂದ ಬಡಾವಣೆಗಳ ಜನರು ನಡೆದುಕೊಂಡು ರಸ್ತೆ ದಾಟುವುದು ಕೂಡ ಅಪಾಯಕಾರಿ ಎನ್ನುವಂತಾಗಿದೆ.

ಭಾರಿ ವಾಹನಗಳು ನಗರ ಪ್ರವೇಶ ಮಾಡದಿರಲಿ ಎಂದು ನಿರ್ಮಿಸಿದ ಹೊರ ವರ್ತುಲ ರಸ್ತೆ, ನಗರ ಇತಿಮಿತಿ ಇಲ್ಲದೆ ಬೆಳೆಯುತ್ತಿರುವ ಕಾರಣ ಇಂದು ನಗರದೊಳಗೆ ರಿಂಗ್ ರಸ್ತೆ ನಿರ್ಮಾಣವಾಗಿರುವಂತಿದೆ.

ಇಂತಹ ಅಪಘಾತಗಳನ್ನು ತಡೆಗಟ್ಟಲು ಎಲ್ಲಾ ಕೂಡು ರಸ್ತೆಗಳ, ಜಂಕ್ಷನ್‌ಗಳ ಬಳಿ ಎರಡೂ ಕಡೆ ವೈಜ್ಞಾನಿಕವಾಗಿ ಹಂಪ್‌ಗಳನ್ನು ನಿರ್ಮಾಣ ಮಾಡುವುದೇ ಪರಿಹಾರವಾಗಿದೆ. ರಿಂಗ್ ರಸ್ತೆ ನಗರ ಪ್ರದೇಶದೊಳಗೆ ಇರುವ ಕಾರಣ ರಾಷ್ಟ್ರೀಯ ಹೆದ್ದಾರಿ ಎನ್ನುವ ಹಣೆಪಟ್ಟಿಯನ್ನು ತೆಗೆದು ಹಂಪ್ ನಿರ್ಮಿಸಿ ಅತಿವೇಗದ ವಾಹನ ಚಾಲನೆಗೆ ದಂಡ ವಿಧಿಸುವ ಮೂಲಕ ಪ್ರಾಣಹಾನಿಯನ್ನು ತಡೆಗಟ್ಟಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿ ಹಂಪ್ ನಿರ್ಮಿಸುವಂತಿಲ್ಲ ಎನ್ನುವ ಅವೈಜ್ಞಾನಿಕ ನಿಯಮವನ್ನು ತೆಗೆದು ಸೂಕ್ತ ಎಚ್ಚರಿಕೆ ಫಲಕಗಳನ್ನು ಹಾಕಬೇಕು. ಈ ಬಗ್ಗೆ ಟ್ರಾಫಿಕ್ ಪೊಲೀಸರು ಮತ್ತು ನಗರ ಯೋಜನಾ ಇಲಾಖೆ ಹಾಗೂ ಸಂಬಂಧಿಸಿದವರು ಕ್ರಮ ಕೈಗೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ಅಂಚೆ ಅಧಿಕಾರಿಗಳಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಅಶೋಕ ವೃತ್ತ (ಬಲ್ಲಾಳ್ ಸರ್ಕಲ್)ದ ಸಮೀಪದಲ್ಲಿದ್ದ ಅಂಚೆ ಪೆಟ್ಟಿಗೆಯನ್ನು ರಸ್ತೆ ಅಭಿವೃದ್ಧಿ ಕಾರಣದಿಂದ ತೆರವುಗೊಳಿಸಲಾಗಿದೆ. ಇದರಿಂದ ಇದನ್ನೇ ಅವಲಂಬಿತರಾದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಸಂಬಂಧಪಟ್ಟ ಅಂಚೆ ಅಧಿಕಾರಿಗಳು ಆದಷ್ಟು ಬೇಗ ಸಮಸ್ಯೆ ಬಗೆಹರಿಸಬೇಕೆಂದು ಮನವಿ.

– ನೊಂದ ನಾಗರಿಕರು, ಮೈಸೂರು.

### ಅನೈತಿಕ ಚಟುವಟಿಕೆಗಳ ತಾಣವಾಗಿರುವ ಉದ್ಯಾನವನಗಳು

ಮಾನ್ಯರೇ,

ಮೈಸೂರು ನಗರದಲ್ಲಿ ಪಾರ್ಕ್‌ಗಳ ಅಭಿವೃದ್ಧಿ ಯೋಜನೆಗಳು ಭರದಿಂದ ಸಾಗುತ್ತಿದೆ. ಯಾವುದೇ ನಗರ ಅಥವಾ ಊರಿಗೆ ಉದ್ಯಾನವನಗಳೇ ಆಕರ್ಷಣೆ. ಅವುಗಳ ನಿರ್ವಹಣೆ ಅತೀ ಮುಖ್ಯವಾಗಿರುತ್ತದೆ. ನಿರ್ವಹಣೆ ಇಲ್ಲದಿದ್ದರೆ ಪಾರ್ಕ್ ಸಾರ್ವಜನಿಕ ಆಸ್ತಿಯಾಗಿ ಉಳಿಯದೆ, ಬೇರೆಯವರ ಆಸ್ತಿಯಾಗಿ ಮಾರ್ಪಾಡಾಗುತ್ತದೆ. ನಿರ್ವಹಣೆ ದೃಷ್ಟಿಯಿಂದ ಹೊಣೆ ವಹಿಸಿರುವ ಪಾರ್ಕ್‌ಗಳ ಸ್ಥಿತಿಗತಿ ಹೇಗಿದೆ ಎಂದು ಪರಿಶೀಲಿಸುವ ವ್ಯವಸ್ಥೆ ಮಾಡಬೇಕು. ಈ ಕಾರಣಕ್ಕೆ ನಗರದ ಎಲ್ಲಾ ಉದ್ಯಾನಗಳ ಅಳತೆ ಮಾಡಿ, ಬಂದೋಬಸ್ತ್ ಮಾಡುವ ಅಗತ್ಯವಿದೆ. ಇಲ್ಲದಿದ್ದರೆ ಕತ್ತಲಾಗುತ್ತಿದ್ದಂತೆ ಉದ್ಯಾನವನಗಳು ಪುಂಡು ಪೋಕರಿಗಳ ಚಟುವಟಿಕೆಗಳ ಕೇಂದ್ರವಾಗುತ್ತಿದೆ. ಕುಡುಕರ ಅಡ್ಡೆಯಾಗುತ್ತಿದೆ. ಜನ ಉದ್ಯಾನದೊಳಗೆ ಹೋಗಲು ಭಯಪಡುವ ವಾತಾವರಣ ಸೃಷ್ಟಿಯಾಗುತ್ತದೆ. ಮದ್ಯದ ಬಾಟಲಿಗಳು, ಪ್ಲಾಸ್ಟಿಕ್ ಲೋಟಗಳು ಎಲ್ಲೆಂದರಲ್ಲಿ ಚೆಲ್ಲಾಡಿರುತ್ತವೆ. ಕೆಲವೇ ಕೆಲವು ಉದ್ಯಾನಗಳಲ್ಲಿ ವಾಯುವಿಹಾರಕ್ಕೆ ಬರುವ ಜನರ ದೈಹಿಕ ಸಾಮರ್ಥ್ಯಕ್ಕೆ ಬೇಕಿರುವ ಸಾಧನ ಅಳವಡಿಸಲಾಗಿದೆ. ಆರಂಭದಲ್ಲಿ ಚೆನ್ನಾಗಿರುತ್ತದೆ. ಅಚ್ಚರಿ ಸಂಗತಿ ಎಂದರೆ ಈ ಉದ್ಯಾನಗಳೂ ನಿರ್ವಹಣೆ ಕೊರತೆ ಎದುರಿಸುತ್ತಿವೆ. ಆದ್ದರಿಂದ ಪಾರ್ಕ್ ಅನ್ನು ಅಭಿವೃದ್ಧಿ ಮಾಡಿದರೆ ಸಾಲದು. ಅದನ್ನು ನಿರಂತರ ನಿರ್ವಹಣೆ ಮಾಡಬೇಕು. ಪಾರ್ಕ್‌ನ ಆಟೋಟ ವಸ್ತುಗಳ ರಕ್ಷಣೆಗೆ ಭದ್ರತೆಯನ್ನು ನೀಡಬೇಕು. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಮನಹರಿಸಬೇಕು.

– ಗೋವಿತ್ ಕಿರಣ್, ರಾಜೇಂದ್ರ ನಗರ, ಮೈಸೂರು

### ಮಕ್ಕಳನ್ನು ಮಲದ ಗುಂಡಿಗೆ ಇಳಿಸಿದ್ದು ಅಪರಾಧ

ಮಾನ್ಯರೆ,

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳನ್ನು ಅಲ್ಲಿನ ಕೆಲವು ಶಿಕ್ಷಕರು ಒತ್ತಾಯಪೂರ್ವಕವಾಗಿ ಮಲದ ಗುಂಡಿಯನ್ನು ಸ್ವಚ್ಛಗೊಳಿಸಲು ಇಳಿಸಿರುವುದು ಕಾನೂನುಬಾಹಿರ ಕೃತ್ಯವಾಗಿದೆ ಇದು ಘೋರ ಅಪರಾಧವಾಗಿದೆ. ಮನುಷ್ಯರು ಮಲದ ಗುಂಡಿಗೆ ಇಳಿದು ಸ್ವಚ್ಛಗೊಳಿಸುವುದನ್ನು ನಿಷೇಧ ಮಾಡಿರುವ ಈ ಕಾಲಘಟ್ಟದಲ್ಲಿ ವಸತಿಯ ಶಾಲೆಯ ಮಕ್ಕಳನ್ನು ಈ ಕೆಲಸಕ್ಕೆ ಬಳಸಿಕೊಂಡಿರುವುದು ಅಲ್ಲಿನ ವ್ಯವಸ್ಥೆಯನ್ನು ಮತ್ತಷ್ಟು ಗಂಭೀರವಾಗಿ ಪರಿಗಣಿಸುವಂತಿದೆ. ಈಗಾಗಲೇ ಈ ಘಟನೆಯು ಸರ್ಕಾರದ ಗಮನಕ್ಕೆ ಬಂದಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನಿನ ಪ್ರಕಾರ ದಂಡಿಸುವುದರ ಜೊತೆಗೆ ರಾಜ್ಯದಲ್ಲಿ ಇರುವ ಎಲ್ಲಾ ವಸತಿ ಮತ್ತು ವಸತಿ ರಹಿತ ಶಾಲೆಗಳ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಮತ್ತೊಮ್ಮೆ ಈ ತರಹದ ಅನಾಗರಿಕತೆಯ ಘಟನೆ ನಡೆಯದಂತೆ ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ ನಗರ

## ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ,
ಯುವರಾಜ ಕಾಲೇಜು,
ಮೈಸೂರು.

# ಪಾಪದ ಪ್ಲಾಸ್ಟಿಕ್‌ಗೆ ಪ್ರಾಯಶ್ಚಿತ...!?










ಈ ಬಾರಿ ಮುಸುಕಿನ ಜೋಳ, ಮುಸುಕನ್ನು ತೆರೆದು, ಪಾರದರ್ಶಕ ಪ್ಲಾಸ್ಟಿಕ್ ಅನ್ನು ಸುತ್ತಿಕೊಂಡು ಮಾರುಕಟ್ಟೆಗೆ ಬಂದಿಳಿದಿದೆ! ಹೇಗೋ ಇಷ್ಟು ವರ್ಷ ತಪ್ಪಿಸಿಕೊಂಡಿತ್ತು, ಭಾರತದಲ್ಲಿ! ಈಗ ಅದಕ್ಕೂ ಪ್ಲಾಸ್ಟಿಕ್ ಸಂಸ್ಕಾರ ಬಂದುಬಿಟ್ಟಿದೆ. ನಿಜಕ್ಕೂ ಬಹಳ ದುಃಖವೆನಿಸಿತು.

1907ರಲ್ಲಿ ಅಮೆರಿಕದ ನ್ಯೂಯಾರ್ಕ್‌ನಲ್ಲಿ ಲಿಯೋ ಬೇಕ್ಲ್ಯಾಂಡ್‌ನಿಂದ ಆವಿಷ್ಕಾರಗೊಂಡ ಈ ಅದ್ಭುತ ವಸ್ತುವಿಗೆ, ಆತ ಡಿಸೆಂಬರ್ 7, 1909ರಂದು ಪೇಟೆಂಟ್ ಅನ್ನೂ ಪಡೆದುಬಿಟ್ಟ. ಅಲ್ಲಿಂದ ಶುರುವಾದ ಪ್ಲಾಸ್ಟಿಕ್‌ನ ನಾಗಾಲೋಟ ಇಂದಿಗೂ ನಿಂತಿಲ್ಲ. ಪ್ಲಾಸ್ಟಿಕ್ ಇಲ್ಲದೆಯೇ ಕೇವಲ 125 ವರ್ಷಗಳ ಹಿಂದೆ ನಾವು ಜೀವಿಸಿದ್ದೆವು. ಪ್ರಪಂಚ ಸಾಕಷ್ಟು ಅಸಾಧಾರಣ ಆವಿಷ್ಕಾರಗಳನ್ನು ಕಂಡಿತ್ತು ಎಂದರೆ, ನಂಬಲು ಅಸಾಧ್ಯವೆನಿಸುವಷ್ಟರ ಮಟ್ಟಿಗೆ ನಮ್ಮ ಜೀವನ ಅದರೊಂದಿಗೆ ಬೆಸೆದುಕೊಂಡು ಬಿಟ್ಟಿದೆ.

ಪ್ಲಾಸ್ಟಿಕ್ ಎನ್ನುವ ಪದದ ವ್ಯುತ್ಪತ್ತಿಯನ್ನು ನೋಡಿದರೆ, ಅದರ ಮೂಲ ನಮಗೆ ಗ್ರೀಕ್ ಭಾಷೆಯಲ್ಲಿ ದೊರೆಯುತ್ತದೆ. ಗ್ರೀಕ್‌ನಲ್ಲಿ 'ಪ್ಲಾಸ್ಟಿಕೋಸ್' ಎಂದರೆ, ಸುಲಭವಾಗಿ ರೂಪ ಪಡೆಯಬಲ್ಲ, ಮಡಚಲು, ತಿರುಚಲು ಬರುವ ವಸ್ತು ಎಂದರ್ಥ. ಈ ಎಲ್ಲ ಗುಣಗಳನ್ನು ಹೊಂದಿರುವ ಬೇಕ್ಲ್ಯಾಂಡ್‌ನ ಆವಿಷ್ಕಾರಕ್ಕೆ ಇದಕ್ಕಿಂತಾ ಒಳ್ಳೆಯ ಹೆಸರು ಎಲ್ಲಿತ್ತು? ಪ್ಲಾಸ್ಟಿಕ್ ಹೀಗೆ ತನ್ನ ಹೆಸರನ್ನು ಪಡೆದುಕೊಂಡು ಹೆಜ್ಜೆಯೂರಿ ಈಗ ಸರ್ವವ್ಯಾಪಿಯಾಗಿಬಿಟ್ಟಿತು.

ಇತ್ತೀಚಿನ ವರ್ಷಗಳಲ್ಲಿ ಪ್ಲಾಸ್ಟಿಕ್ ತನ್ನ ಅತಿಯಾದ ಹೊಂದಿಕೊಳ್ಳುವ ಗುಣದಿಂದ ಎಲ್ಲೆಡೆ, ಅವಶ್ಯಕತೆಯಿಲ್ಲದಿದ್ದರೂ ಬಳಕೆ ಆಗುತ್ತಿದೆ. ಬಹಳ ಹಿಂದೇನಲ್ಲ, ನಾವು ಚಿಕ್ಕವರಿದ್ದಾಗ ಈಗ್ಗೆ 25–30 ವರ್ಷಗಳ ಹಿಂದೆ, ದಿನಸಿ ತರಲು ಅಂಗಡಿಗೆ ಹೋದಾಗ, ದಿನಪತ್ರಿಕೆಗಳಿಂದ ಹರಿದು ಮಾಡಿದ ಹಾಳೆಗಳಲ್ಲಿ ಸುತ್ತಿ, ಸುತ್ತಲಿ ದಾರದಿಂದ ಕಟ್ಟಿ ಕೊಡುತ್ತಿದ್ದರು. ಕಾಲು ಕೇಜಿ, ಅರ್ಧಕೇಜಿ ಮತ್ತು ಒಂದು ಕೇಜಿಗಳಿಗೆ ಬೇರೆ ಬೇರೆ ಅಳತೆಯ ಕಾಗದಗಳನ್ನು ಕತ್ತರಿಸಿಟ್ಟಿರುತ್ತಿದ್ದರು. ಅಕ್ಕಿ, ರಾಗಿಯಂತಹ ಹೆಚ್ಚಿನ ತೂಕದ ದಿನಸಿಗೆ ಚೀಲವನ್ನು ಕೊಂಡೊಯ್ಯದಿದ್ದರೆ, ಪೇಚಾಡಿಕೊಂಡು ಅಂಗಡಿಯವರಿಂದಲೇ ಚೀಲವನ್ನು, ಹಿಂತಿರುಗಿಸುವ ಷರತ್ತಿನ ಮೇಲೆ ಕಡ ಪಡೆಯಬೇಕಿತ್ತು. ದಿನಸಿಯನ್ನು ಆಯಾ ಡಬ್ಬಗಳಿಗೆ ಹಾಕಿಯಾದ ಮೇಲೆ, ಕಾಗದ ಒಲೆ ಸೇರುತ್ತಿದ್ದರೆ, ಸುತ್ತಲಿ ದಾರವನ್ನು ಒಂದು ಕೋಲಿಗೆ ಸುತ್ತಿ, ಅಗತ್ಯ ಬಂದಾಗ ಉಪಯೋಗಿಸಲು ಇಟ್ಟುಕೊಳ್ಳುತ್ತಿದ್ದೆವು. ಪ್ಯಾಕೆಟ್ ಎಣ್ಣೆ ಇನ್ನೂ ವ್ಯಾಪಕವಾಗಿ ಬಳಕೆಗೆ ಬಂದಿರಲಿಲ್ಲ, ಹಾಗಾಗಿ ಎಣ್ಣೆಯ ಡಬ್ಬವನ್ನೂ ಒಯ್ಯುತ್ತಿದ್ದೆವು.

ಹಾಗೆಯೇ ತರಕಾರಿ ಖರೀದಿಗೆ ಹೊರಟು ಚೀಲ ಮರೆತಿದಿದ್ದರೆ ಮತ್ತದೇ ಪೇಚಾಟ. ಆಗ ಪೇಸ್ಟು, ಹಲ್ಲು ಪುಡಿ, ಪೌಡರ್, ಕ್ರೀಮುಗಳು, ಪ್ಯಾರಾಚ್ಯೂಟ್ ಎಣ್ಣೆ, ಹಾಲಿನ ಪುಡಿ, ಸಿರಿಲಾಕ್ ಇಂಥವೆಲ್ಲಾ ಟಿನ್ ಡಬ್ಬದಲ್ಲಿ ಪ್ಯಾಕ್ ಆಗಿ ಬರುತ್ತಿದ್ದವು. ಎಣ್ಣೆ, ಔಷಧಿ, ಹಾರ್ಲಿಕ್ಸ್‌ನಂತಹ ಪೇಯಗಳ ಪುಡಿಗಳು ಗಾಜಿನ ಬಾಟಲಿಯಲ್ಲಿ ದೊರೆಯುತ್ತಿದ್ದವು. ಅವನ್ನು ಒಂದೋ ಅಡುಗೆಮನೆಯಲ್ಲಿ ಬೇರೆ ವಸ್ತುಗಳನ್ನು ಹಾಕಿಡಲು ಬಳಸುತ್ತಿದ್ದರು. ಇಲ್ಲವಾದಲ್ಲಿ ಗುಜರಿಯವನಿಗೆ ವರ್ತನೆ ಎಂಬಂತೆ ಹಾಕುತ್ತಿದ್ದರು. ಈಗ ಗುಜರಿಯವರನ್ನು ಕಾಯ್ದು ಹಾಕಲು ನಮ್ಮ ಅತೀವ 'ಬ್ಯುಸಿಲೈಫ್' ಮತ್ತು 'ಸ್ಟೇಟಸ್' ಆಸ್ಪದ ಕೊಡುತ್ತಿಲ್ಲ. ಎಲ್ಲವೂ ಕಸದ ಬುಟ್ಟಿಗೆ. ಸೋಪು, ಬಟ್ಟೆ ಒಗೆಯುವ ಪೌಡರ್‌ಗಳು ಗಟ್ಟಿ ಪೇಪರ್‌ನಲ್ಲಿ ಪ್ಯಾಕ್ ಆಗಿ ಬರುತ್ತಿದ್ದವು. ಅವೂ ಒಲೆ ಸೇರಿ ಉರಿದು ಹೋಗುತ್ತಿದ್ದವು. ಮನೆಮನೆಗೆ ಹಾಲು ಹಾಕುವ ಪರಿಪಾಠ ಸ್ವಲ್ಪ ಉಳಿದುಕೊಂಡಿದೆಯಾದರೂ, ಪ್ಯಾಕೆಟ್ ಹಾಲಿನ ಕೊಳ್ಳುವಿಕೆ ನಮ್ಮ ದಿನಚರಿಯ ಭಾಗವಾಗಿಬಿಟ್ಟಿದೆ.

ಇನ್ನು ಹೋಟೆಲ್‌ನ ತಿಂಡಿ ತಿನ್ನಬೇಕೆಂದು ಆಸೆಯಾಗಿ ಪಾರ್ಸೆಲ್ ತರಿಸೋಣ ಎಂದು ಹೋದರೆ, ಹೋಟೆಲ್‌ನವರು ಬಾಳೆಲೆಯ ಮೇಲೆ ತಿಂಡಿಯನ್ನು ಹಾಕಿ, ಅದನ್ನು ಪೇಪರ್ನಲ್ಲಿ ಸುತ್ತಿ, ಬಿಳಿಯ ದಾರದಲ್ಲಿ ಕಟ್ಟಿಕೊಡುತ್ತಿದ್ದರು. ಸಾಂಬಾರ್‌ಗಾಗಿ ಸ್ಟೀಲ್ ಡಬ್ಬ ತೆಗೆದುಕೊಂಡು ಹೋಗಲೇಬೇಕಿತ್ತು. ಬಾಳೆಲೆ ಅಥವಾ ಮುತ್ತುಗದ ಎಲೆ ಹಸುಗಳ ಹೊಟ್ಟೆ ಸೇರದಿದ್ದರೂ ಗೊಬ್ಬರವಂತೂ ಆಗುತ್ತಿದ್ದವು. ಇನ್ನು ಆ ಬಿಳಿಯ ದಾರವನ್ನು ಎತ್ತಿಟ್ಟುಕೊಂಡು ಹೂ ಕಟ್ಟಲೋ ಮತ್ತೊಂದಕ್ಕೋ ಬಳಸಿದ ನೆನಪು ನನಗೆ ಇನ್ನೂ ಹಸಿಯಾಗಿದೆ.

ಕೈಯ್ಯಲ್ಲೊಂದು ಚೀಲವಿಲ್ಲದೆ ನಮ್ಮ ಅಪ್ಪ–ಅಮ್ಮ ಅಥವಾ ಅಜ್ಜ–ಅಜ್ಜಿಯರು ಹೊರಗೆ ಹೋಗಿದ್ದನ್ನು ಬಹುಶಃ ನಾವು ನೋಡಿಲ್ಲ. ಪ್ರಯಾಣ ಹೊರಟೆವೆಂದರೆ, ನೀರಿಗಾಗಿ ರೈಲು ಚೆಂಬುಗಳು, ಮುಚ್ಚಳ ಗಟ್ಟಿಯಾಗಿದ್ದು ನೀರು ಸೋರದಿರುವ ಡಬ್ಬಗಳಿಗಾಗಿ ಹುಡುಕಾಟ! ಅಥವಾ ಬಸ್ಸು ನಿಂತ ಸ್ಥಳದಲ್ಲಿ ಇದ್ದ ಹೋಟೆಲ್ ಅಥವಾ ಯಾವುದಾದರೂ ಮನೆಗಳಲ್ಲಿ ಕೇಳಿ ನೀರು ಕುಡಿದು ಮುಗಿಸುತ್ತಿದ್ದೆವು. ಯೋಚನೆ ಮಾಡಿ ನೋಡಿ, ನಮಗೆ ಅರಿವಿಲ್ಲದೆಯೇ 'Zero Wastage' ಜೀವನವನ್ನು ನಡೆಸುತ್ತಿದ್ದೆವು.

> **ಪ್ಲಾಸ್ಟಿಕ್‌ನಲ್ಲಿ ಹೊಸ ಹೊಸ ಆವಿಷ್ಕಾರ ಆದಂತೆಲ್ಲಾ, ನಮ್ಮ ಜೀವನ ಬದಲಾಗುತ್ತಾ ಬಂತು. ಜೀವನ ಅತೀ ಸುಲಭವಾಗಿ ಹೋಯಿತು. ಬದಲಾದ ನಮ್ಮ ಜೀವನ ಶೈಲಿಯನ್ನು ಕೊಂಚ ಕಣ್ಮುಂದೆ ತಂದುಕೊಳ್ಳಿ!?**

ಪ್ಲಾಸ್ಟಿಕ್‌ನಲ್ಲಿ ಹೊಸ ಹೊಸ ಆವಿಷ್ಕಾರ ಆದಂತೆಲ್ಲಾ, ನಮ್ಮ ಜೀವನ ಬದಲಾಗುತ್ತಾ ಬಂತು. ಜೀವನ ಅತೀ ಸುಲಭವಾಗಿ ಹೋಯಿತು. ಬದಲಾದ ನಮ್ಮ ಜೀವನ ಶೈಲಿಯನ್ನು ಕೊಂಚ ಕಣ್ಮುಂದೆ ತಂದುಕೊಳ್ಳಿ!?

ಪ್ಲಾಸ್ಟಿಕ್ ಬಳಸುವುದು ಪ್ರತಿಷ್ಠೆಯ ವಿಷಯವಾಗಿಬಿಟ್ಟಿದೆ. ಕೈಚೀಲ ಹಿಡಿದು ಹೋಗುವುದು ಹಾಸ್ಯಾಸ್ಪದವೆನಿಸಿದೆ, 'ಲಗ್ಗೇಜ್' ಎನಿಸತೊಡಗಿದೆ. ಪ್ಲಾಸ್ಟಿಕ್ ಬಳಸಿ ದಿನಸಿ ಕಟ್ಟಿ ಕೊಡುವುದು ಅಂಗಡಿಯವರಿಗೆ ಸುಲಭವೆನಿಸತೊಡಗಿದರೆ, ನಮಗೆ, ಕಾಗದ ಹರಿದು ದಿನಸಿ ಬೆರೆತು ಹೋಗುವುದರಿಂದ ಮುಕ್ತಿ ಸಿಕ್ಕಿತೆಂಬ ಸಂತಸ. ಸೋಪು, ಪೇಸ್ಟು, ಪೌಡರ್, ಎಣ್ಣೆ, ಶ್ಯಾಂಪೂ, ಫಿನೈಲ್, ಕಾಫಿಪುಡಿ, ಹಾಲು ಎಲ್ಲವೂ ಪ್ಲಾಸ್ಟಿಕ್‌ನಲ್ಲಿ! ಎಷ್ಟೋಬಾರಿ ತಮ್ಮ ವಸ್ತುಗಳನ್ನು ಮಾರಲು ಹೆಚ್ಚು ಆಕರ್ಷಣೀಯವಾಗಿಸುವ ಭರದಲ್ಲಿ ಅನಗತ್ಯವಾಗಿ ಪ್ಯಾಕಿಂಗ್‌ನ ಪ್ಲಾಸ್ಟಿಕ್ ಪದರಗಳನ್ನು ಹೆಚ್ಚಿಸಿರುವ ಕಂಪನಿಗಳು 'ಒಂದು ಎರಡು ಐದು ಹತ್ತು ರೂಪಾಯಿಗಳಿಗೆ ದೊರೆಯುವ ವಿವಿಧ ಸಾಮಾನುಗಳ ಸ್ಯಾಶೆಗಳು'

ಹಳ್ಳಿಗೂ ಕಾಲಿಟ್ಟಿರುವ ಪ್ಲಾಸ್ಟಿಕ್‌ನ ತಾಂಡವ ಭಯಂಕರವೇ. ಮೊದಲಿಗೆ ಪ್ಲಾಸ್ಟಿಕ್ ಚಾಪೆ ಬಂದಾಗ ಎಲ್ಲರ ಮನೆಯಲ್ಲೂ ಅದರದೇ ಕಾರುಬಾರು. ನಂತರದ ದಿನಗಳಲ್ಲಿ ಪ್ಲಾಸ್ಟಿಕ್ ಒಂದೊಂದೇ ದಿನಬಳಕೆಯ ವಸ್ತುಗಳನ್ನು ರೀಪ್ಲೇಸ್ ಮಾಡತೊಡಗಿತು. ಬಿದಿರಿನ ಕುಕ್ಕೆಗಳು, ಮಂಕರಿಗಳು, ಮೊರಗಳು, ಬುಟ್ಟಿಗಳು, ಪೊರಕೆಗಳು, ಕಾಲೊರೆಸುವ ಮ್ಯಾಟುಗಳು ಎಲ್ಲಿಯವರೆಗೆ ಎಂದರೆ, ಕೃಷಿ ಪರಿಕರಗಳೂ. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಬಳಸಲ್ಪಡುವ ಗೊರಬೂ ಪ್ಲಾಸ್ಟಿಕ್‌ನಲ್ಲಿ ತಯಾರಾಗತೊಡಗಿತು. ಗುಡಿಕೈಗಾರಿಕೆ ನೆಲಕಚ್ಚಿದ್ದು ಇಂದು ಜೀವನ್ಮರಣದ ಸ್ಥಿತಿಯಲ್ಲಿದೆ.

ಅರಣ್ಯನಾಶವಾಗುತ್ತಿದೆ, ಗಣಿಗಾರಿಕೆಯಿಂದ ಪ್ರಕೃತಿ ಹಾಳಾಗುತ್ತಿದೆ ಎಂಬ ಕಾಳಜಿಗೆ ಉತ್ತರವಾಗಿ ದೊರೆತಿದ್ದೂ ಪ್ಲಾಸ್ಟಿಕ್ ಎನ್ನುವುದು ಒಂದು ವಿಪರ್ಯಾಸವೇ ಸರಿ. ಮರದ ಮತ್ತು ಲೋಹದ ಸಾಮಾನುಗಳಿಗೆ ಪರ್ಯಾಯವಾಗಿ ಪ್ಲಾಸ್ಟಿಕ್‌ನ ಸಾಮಾನುಗಳು ಎಲ್ಲೆಲ್ಲೂ ಕಾಣತೊಡಗಿದವು. ಮೇಜು–ಕುರ್ಚಿಗಳು, ಪೈಪುಗಳು? ಪಿವಿಸಿ ಬಂದಮೇಲಂತೂ ಚಪ್ಪಲಿಗಳೂ ಪ್ಲಾಸ್ಟಿಕ್‌ನವೇ. ಅಡುಗೆ ಮನೆಯೂ ಪ್ಲಾಸ್ಟಿಕ್‌ಮಯವೇ!

ಈಗ ಎಲ್ಲೆಲ್ಲೂ ಹುಟ್ಟಿಕೊಂಡಿರುವ ತಿಂಡಿ ಗಾಡಿಗಳಲ್ಲಿ ಆಹಾರ ಸರಬರಾಜಾಗುವುದೂ ಪ್ಲಾಸ್ಟಿಕ್‌ನ ತಟ್ಟೆ ಲೋಟಗಳಲ್ಲೇ. ತಿನ್ನಲು ಪ್ಲಾಸ್ಟಿಕ್‌ನ ಚಮಚೆ. ಎಲ್ಲವೂ ಏಕ ಬಳಕೆಯವೇ.ಇನ್ನು, ಮದುವೆ ಮನೆಗಳಲ್ಲಿ ಮುಂಚೆ ಎಲೆಗಳು, ಸ್ಟೀಲ್ ಲೋಟಗಳು ದೊನ್ನೆಗಳು ಬಳಕೆಯಾಗುತ್ತಿದ್ದವು. ಈಗ ಅಲ್ಲೂ ಪ್ಲಾಸ್ಟಿಕ್ ಲೇಪಿತ ಮುತ್ತುಗದ ಎಲೆ, ಲೋಟ ಬಟ್ಟಲು ಮತ್ತು ಬಾಟಲಿ. ಬೀಡಾಕ್ಕೂ ಒಂದು ಪುಟ್ಟ ಕವರ್!

ಇಲ್ಲಿ ಸಮಸ್ಯೆ ಪ್ಲಾಸ್ಟಿಕ್‌ನ ಬಳಕೆಯದಲ್ಲ. ಅದರ ಬಳಕೆಯ ನಂತರದ ಸೂಕ್ತ ವಿಲೇವಾರಿಯ ಬಗ್ಗೆ ನಮಗೆ ಪರಿಜ್ಞಾನವಿಲ್ಲದಿರುವುದು ಅಥವಾ ನಾವು ಬೇಜವಾಬ್ದಾರಿಯಿಂದ ವರ್ತಿಸುವುದು. ಮಣ್ಣು ಸೇರಿ ಕರಗದ ಪ್ಲಾಸ್ಟಿಕ್ ನೂರಾರು ಸಾವಿರಾರು ವರ್ಷಗಳವರೆಗೆ ಶಾಶ್ವತವಾಗಿರುವುದು ಸಮಸ್ಯೆಯ ಮೂಲ. ಪ್ಲಾಸ್ಟಿಕ್ ಕಸದ ಸೂಕ್ತ ವಿಂಗಡನೆಯಾಗದೆ ಅದು ಪ್ರಕೃತಿಗೆ ಮಾಡುತ್ತಿರುವ ಹಾನಿಯ ಬಗ್ಗೆ, ಆರೋಗ್ಯದ ಮೇಲೆ ಉಂಟುಮಾಡುತ್ತಿರುವ ಅಡ್ಡ ಪರಿಣಾಮದ ಬಗ್ಗೆ ಸರಣಿ ಲೇಖನಗಳನ್ನೇ ಬರೆಯಬಹುದು. ಕೆರೆ ಕಟ್ಟೆಗಳು, ನದಿ, ಸಾಗರ, ಸಮುದ್ರ, ಮಣ್ಣು, ಮನುಷ್ಯ ವಾಸ ಇಲ್ಲದ ಅಂಟಾರ್ಟಿಕ ಕೊನೆಗೆ ಬಾಹ್ಯಾಕಾಶದಲ್ಲೂ ಪ್ಲಾಸ್ಟಿಕ್ ತ್ಯಾಜ್ಯ ಉಂಟುಮಾಡಿರುವ ಉತ್ಪಾತದ ಅರಿವು ನಮ್ಮೆಲ್ಲರಿಗೂ ಇದೆ. ಹಸುಗಳ ಹೊಟ್ಟೆಗಳಲ್ಲಿ ಕೇಜಿಗಟ್ಟಲೆ ಪ್ಲಾಸ್ಟಿಕ್ ದೊರೆತಿರುವುದನ್ನು ಓದಿದ್ದೇವೆ. ಜಲಚರಗಳಿಗೆ ಪ್ಲಾಸ್ಟಿಕ್ ಮುಳುವಾಗಿರುವುದನ್ನು ನೋಡುತ್ತಿದ್ದೇವೆ.

ನಾವು ಮಾಡಬಹುದಾದದ್ದು ಏನು? 5 ರೂಪಾಯಿಯ ಕೊತ್ತಂಬರಿ ಸೊಪ್ಪು ತೆಗೆದುಕೊಂಡರೂ ಪ್ಲಾಸ್ಟಿಕ್ ಕವರ್ ಕೊಡುವಂತೆ ಅಂಗಡಿಯವರನ್ನು ಪೀಡಿಸುತ್ತೇವೆ. ಕೊಡದಿದ್ದರೆ ಜಗಳವಾಡುತ್ತೇವೆ ಅಥವಾ ಮುಂದೆ ಆ ಅಂಗಡಿಗೆ ಹೋಗುವುದೇ ಇಲ್ಲ! ಹೋಟೆಲ್‌ನಲ್ಲಿ ತಿಂಡಿಗೆ, ಚಟ್ನಿಗೆ, ಸಾಂಬಾರ್‌ಗೆ, ಸೌತೇಕಾಯಿ ಈರುಳ್ಳಿಗೆ ಪ್ರತ್ಯೇಕ ಕವರ್, ಅವೆಲ್ಲವನ್ನು ಹಾಕುವುದಕ್ಕೆ ಮತ್ತೊಂದು ದೊಡ್ಡ ಕವರ್! ಸಾಧ್ಯವಾದಲ್ಲೆಲ್ಲಾ ನಾವು ಕೈಚೀಲ ಡಬ್ಬಗಳನ್ನು ಕೊಂಡು ಹೋದರೆ ನಮ್ಮಿಂದಾದಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬಹುದಲ್ಲವೇ?

ದಿನಸಿ ಅಂಗಡಿಯವರು ನಮಗೆ ಬೇರೆ ದಾರಿಯೇ ಇಲ್ಲದ ಹಾಗೆ ಎಲ್ಲವನ್ನೂ ಪ್ಲಾಸ್ಟಿಕ್‌ನಲ್ಲಿ ಪ್ಯಾಕ್ ಮಾಡಿಯೇ ಇಟ್ಟಿರುತ್ತಾರೆ. ಆದರೆ ಅವನ್ನು ಮನೆಗೆ ತಂದಮೇಲೆ ಕವರ್‌ಗಳನ್ನು ಪ್ರತ್ಯೇಕವಾಗಿ ಇಟ್ಟು ವಿಲೇವಾರಿ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಬೇಕು. ಪ್ಲಾಸ್ಟಿಕ್ ಅನ್ನು ಸಂಸ್ಕರಿಸಲು ಸರ್ಕಾರ ಸಾಕಷ್ಟು ಯೋಜನೆಗಳನ್ನು, ಕ್ರಮಗಳನ್ನು ಕೈಗೊಂಡಿದೆ. ಅದಕ್ಕೆ ನಾವು ಸಹಕಾರ ನೀಡಬೇಕು.

ಈಗ ಕಸಸಂಗ್ರಹಣೆ ಮಾಡುವವರು ಹಸಿಕಸ ಮತ್ತು ಒಣಕಸಗಳಿಗೆ ಪ್ರತ್ಯೇಕ ದಿನ ನಿಗದಿ ಮಾಡಿ ತೆಗೆದುಕೊಂಡು ಹೋಗುತ್ತಾರೆ. ಆದರೆ, ಬಹಳಷ್ಟು 'ವಿದ್ಯಾವಂತರು', 'ಪ್ರಜ್ಞಾವಂತರು', 'ನಾಗರಿಕರು' ಎನಿಸಿಕೊಂಡವರೇ, 'ಕಸ ಎಂದ ಮೇಲೆ ಎಲ್ಲಾ ಒಂದೇ, ಅದನ್ನೇನು ಬೇರೆ ಮಾಡುವುದು?" ಎಂದೋ, "ಸಂಬಳ ತಗೋತಾರಲ್ಲ, ಮಾಡಿಕೊಳ್ಳಲಿ ಬಿಡಿ' ಎಂದು ಎಲ್ಲೋ ಎಸೆದು ಬರುವುದೋ ಮಾಡುತ್ತಾರೆ. ಇದು ನನ್ನ ಮನೆಯ ಬಳಿ ಆಗುವುದೇ, ನಿಮ್ಮ ಮನೆಯ ಬಳಿಯೂ ಆಗುತ್ತಿರಬಹುದು. ನಮ್ಮ ಮನೆಯ ಕಸವನ್ನು ಬೇರೆಯವರು ಮುಟ್ಟಿ ವಿಂಗಡಿಸಿಕೊಳ್ಳಲಿ ಎನ್ನುವುದು ಅನಾಗರಿಕತೆಯಷ್ಟೇ ಅಲ್ಲ, ಅಮಾನವೀಯ ನಡುವಳಿಕೆಯೂ ಹೌದು.

ಇನ್ನು ಈಗ ಸ್ವಿಗ್ಗಿ ಮತ್ತು ಝೋಮ್ಯಾಟೋಗಳಿಂದ ಆಹಾರವನ್ನು ತರಿಸಿಕೊಳ್ಳುವ ಅಭ್ಯಾಸ ಹೆಚ್ಚೇ ಆಗಿದೆ. ಎಲ್ಲ ಹೋಟೆಲುಗಳು, ಪ್ಲಾಸ್ಟಿಕ್ ಕವರ್ ಅಥವಾ ಡಬ್ಬಗಳಲ್ಲಿ ಆಹಾರವನ್ನು ಕಳುಹಿಸುತ್ತವೆ. ಇಲ್ಲಿ ಸಮಸ್ಯೆ ಇನ್ನೊಂದು ರೀತಿ. ತಿಂದು ಉಳಿದ ಆಹಾರವನ್ನು ಬೇರೆ ಮಾಡದೆಯೇ, ಆ ಡಬ್ಬ ಅಥವಾ ಕವರ್ ಅನ್ನು ಒಣಕಸಕ್ಕೆ ಹಾಕುತ್ತಾರೆ. ಬದಲಿಗೆ, ಅವನ್ನು ಸ್ವಲ್ಪ ತೊಳೆದು ಒಣ ಕಸಕ್ಕೆ ಹಾಕಿದರೆ ಸಮಸ್ಯೆಗೆ ಸಣ್ಣ ಪರಿಹಾರ ದೊರೆತಂತೆ. ತಿಂಡಿ ಗಾಡಿಗಳಿಗೂ ಈ ಮಾತು ಅನ್ವಯಿಸುತ್ತದೆ. ಹಾಲಿನ ಮತ್ತು ಇತರ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ಪೂರ್ತಿಯಾಗಿ ಕತ್ತರಿಸದೆ ಪ್ಯಾಕಿನಲ್ಲಿಯೇ ಉಳಿಯುವ ಹಾಗೆ ಕತ್ತರಿಸಿದರೆ ಸಂಸ್ಕರಣಕ್ಕೂ ಸುಲಭ.

ಹೇಳುತ್ತಾ ಹೋದರೆ ಇದು ಮುಗಿಯುವುದಲ್ಲ. ನಾನಿಲ್ಲಿ ವೈಜ್ಞಾನಿಕವಾದ ಯಾವ ಅಂಶಗಳನ್ನೂ ಬಳಸಿಕೊಂಡು ಪ್ಲಾಸ್ಟಿಕ್‌ನ ಆಟಾಟೋಪದ ಬಗ್ಗೆ ಹೇಳುತ್ತಿಲ್ಲ. ಏಕೆಂದರೆ ಅದರ ಬಗ್ಗೆ ಈಗ ಬಹುತೇಕ ಎಲ್ಲರಿಗೂ ಗೊತ್ತಿದೆ. ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿಯನ್ನು ಮರೆತು ನಾವು ತೋರುತ್ತಿರುವ ಅವಜ್ಞೆ ಅಲಕ್ಷ್ಯದ ಬಗ್ಗೆಯಷ್ಟೇ ನನ್ನ ಮಾತುಗಳು.

ಭೂಮಿಯ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ವಿಜ್ಞಾನಿಗಳು ಪ್ಲಾಸ್ಟಿಕ್ ಬಾಟಲ್‌ಗಳ ಇಟ್ಟಿಗೆ ತಯಾರಿಸುತ್ತಿದ್ದಾರೆ, ಪ್ಲಾಸ್ಟಿಕ್ ತ್ಯಾಜ್ಯದಿಂದ ರಸ್ತೆ ಮಾಡುತ್ತಿದ್ದಾರೆ. ಅಲ್ಲದೇ ಈಗ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಸಾವಯವ ಪ್ಲಾಸ್ಟಿಕ್ ಬಂದಿದೆ, ಬಯೋಡಿ ಗ್ರೇಡಬಲ್ ಪ್ಲಾಸ್ಟಿಕ್‌ನ ಆವಿಷ್ಕಾರವಾಗಿದೆ. ಬಿದಿರು ಮತ್ತು ಪೇಪರ್‌ನ ಸ್ಟ್ರಾ, ತಿನ್ನಬಹುದಾದ ವಸ್ತುಗಳಿಂದ ಮಾಡಿರುವ ತಟ್ಟೆ ಲೋಟ ಚಮಚೆಗಳು ಬಂದಿವೆ. ಹಲವಾರು ಉತ್ಸಾಹೀ ತರುಣ ತರುಣಿಯರು ಇಂತಹ ಆವಿಷ್ಕಾರಗಳಲ್ಲಿ ತೊಡಗಿಸಿಕೊಂಡು ಭೂಮಿಯ ಹೊರೆ ಕಡಿಮೆ ಮಾಡುವತ್ತ ಯೋಚಿಸುತ್ತಿದ್ದಾರೆ. ಇವೆಲ್ಲಾ ಸ್ವಲ್ಪ ತುಟ್ಟಿಯೆನಿಸಿದರೂ, ಬಳಕೆ ಹೆಚ್ಚಾದಂತೆ ಅವುಗಳೂ ಸುಲಭ ಬೆಲೆಗೆ ದೊರೆಯುವಂತಾಗುತ್ತವೆ.

ಪ್ಲಾಸ್ಟಿಕ್ ಅನ್ನು ದೂರವಿಡಲು ಸಾಧ್ಯವಿಲ್ಲ. 2050ರ ಹೊತ್ತಿಗೆ ಪ್ಲಾಸ್ಟಿಕ್‌ನ ಬಳಕೆ ದುಪ್ಪಟ್ಟಾಗುತ್ತದೆ ಎಂದು ಅಧ್ಯಯನಗಳು ಹೇಳುತ್ತವೆ. ಆದರೆ, ಪ್ರತೀ ಪ್ಲಾಸ್ಟಿಕ್‌ನ ವಸ್ತು ನಾವು ಕೊಳ್ಳುವಾಗ, ಅಥವಾ ಅದು ನಮ್ಮ ಕೈಗೆ ಮನೆಗೆ ಬಂದಾಗ, ನಮ್ಮಲ್ಲಿ ಪ್ರಕೃತಿಗೆ ಹಾನಿ ಮಾಡುತ್ತಿದ್ದೇವೆಂಬ ಪಾಪ ಪ್ರಜ್ಞೆ ಮತ್ತು ಅದರ ವಿಲೇವಾರಿ ಬಗ್ಗೆ ಒಂದು ಸಣ್ಣ ಯೋಜನೆ ಮತ್ತು ಯೋಚನೆಯನ್ನು ನಾವು ಮಾಡಿದ ದಿನ ಪ್ಲಾಸ್ಟಿಕ್ ಕೂಡ ನಮಗೆ ಭಯ ತರಿಸುವುದಿಲ್ಲ.

# ಮೊಹಮ್ಮದ್ ಶಮಿ ಸೇರಿದಂತೆ 26 ಅಥ್ಲೀಟ್‌ಗಳಿಗೆ ಅರ್ಜುನ ಪ್ರಶಸ್ತಿ




ಮೊಹಮ್ಮದ್ ಶಮಿ

**ನವದೆಹಲಿ:** ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು 2023ರ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಅದರಂತೆ ಟೀಂ ಇಂಡಿಯಾದ ವೇಗದ ಬೌಲರ್ ಮೊಹಮ್ಮದ್ ಶಮಿ ಸೇರಿದಂತೆ 26 ಅಥ್ಲೀಟ್‌ಗಳು ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಹಾಗೆಯೇ



ಬ್ಯಾಡ್ಮಿಂಟನ್ ಸ್ಟಾರ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಅವರಿಗೆ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಒಲಿದಿದೆ. ಇಷ್ಟು ಕ್ರೀಡಾಪಟುಗಳಿಗೆ 2024ರ ಜನವರಿ 9ರಂದು ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿಗಳು ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

**ವಿಶ್ವಕಪ್‌ನಲ್ಲಿ ಅದ್ಭುತ ಸಾಧನೆ:** ಇತ್ತೀಚೆಗಷ್ಟೇ ಭಾರತದಲ್ಲಿ ನಡೆದಿದ್ದ ಏಕದಿನ

### ಇಬ್ಬರು ಆಟಗಾರರಿಗೆ ಖೇಲ್ ರತ್ನ

ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ವೇಗಿ ಮೊಹಮ್ಮದ್ ಶಮಿ ಉತ್ತಮ ಪ್ರದರ್ಶನ ನೀಡಿದ್ದರು. ಶಮಿ 2023ರ ಏಕದಿನ ವಿಶ್ವಕಪ್‌ನ 7 ಪಂದ್ಯಗಳಲ್ಲಿ 24 ವಿಕೆಟ್‌ಗಳನ್ನು ಕಬಳಿಸಿದ್ದರು. ಈ ಮೂಲಕ 2023ರ ಏಕದಿನ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದರು. ಶಮಿ ಅವರ ಈ ಗಮನಾರ್ಹ ಪ್ರದರ್ಶನದಿಂದಾಗಿ ಟೀಂ ಇಂಡಿಯಾ ಟೂರ್ನಿಯಲ್ಲಿ ಒಂದೇ ಒಂದು ಪಂದ್ಯವನ್ನು ಸೋಲದೆ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಆದರೆ ಪ್ರಶಸ್ತಿ ಸುತ್ತಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಮುಗ್ಗರಿಸಿತ್ತು ಇನ್ನು ಭಾರತದ ಪರ ಎಲ್ಲಾ ಮೂರು ಮಾದರಿಗಳಲ್ಲಿ ಕ್ರಿಕೆಟ್ ಆಡುತ್ತಿರುವ ಶಮಿ ಅವರ ಅದ್ಭುತ ಪ್ರದರ್ಶನವನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅರ್ಜುನ ಪ್ರಶಸ್ತಿಯನ್ನು ಘೋಷಿಸಲಾಗಿದೆ.

**ಈ 26 ಆಟಗಾರರಿಗೆ ಅರ್ಜುನ್ ಪ್ರಶಸ್ತಿ:** ಓಜಸ್ ಪ್ರವೀಣ್ ದೇವತಾಳೆ: ಬಿಲ್ಲುಗಾರಿಕೆ (ಆರ್ಚರಿ), ಅದಿತಿ ಗೋಪಿಚಂದ್ ಸ್ವಾಮಿ: ಬಿಲ್ಲುಗಾರಿಕೆ (ಆರ್ಚರಿ), ಶ್ರೀಶಂಕರ್ ಎಂ: ಅಥ್ಲೆಟಿಕ್ಸ್, ಪಾರುಲ್ ಚೌಧರಿ: ಅಥ್ಲೆಟಿಕ್ಸ್, ಮೊಹಮ್ಮದ್ ಹುಸಾಮುದ್ದೀನ್: ಬಾಕ್ಸಿಂಗ್, ಆರ್ ವೈಶಾಲಿ: ಚೆಸ್, ಮೊಹಮ್ಮದ್ ಶಮಿ: ಕ್ರಿಕೆಟ್, ಅನುಷ್ ಅಗರ್ವಾಲ್: ಕುದುರೆ ಸವಾರಿ, ದಿವ್ಯಾಕೃತಿ ಸಿಂಗ್: ಈಕ್ವೆಸ್ಟ್ರಿಯನ್ ಡ್ರೆಸ್ಸೇಜ್, ದೀಕ್ಷಾ ದಾಗರ್: ಗಾಲ್ಫ್, ಕೃಷ್ಣ ಬಹದ್ದೂರ್ ಪಾಠಕ್: ಹಾಕಿ, ಪುಖ್ರಾಂಬಂ ಸುಶೀಲಾ ಚಾನು: ಹಾಕಿ, ಪವನ್ ಕುಮಾರ್: ಕಬಡ್ಡಿ, ರಿತು ನೇಗಿ: ಕಬಡ್ಡಿ, ನಸ್ರೀನ್: ಖೋ–ಖೋ, ಪಿಂಕಿ: ಲಾನ್ ಬಾಲ್ಸ್, ಐಶ್ವರ್ಯಾ ಪ್ರತಾಪ್ ಸಿಂಗ್ ತೋಮರ್: ಶೂಟಿಂಗ್, ಇಶಾ ಸಿಂಗ್: ಶೂಟಿಂಗ್, ಹರಿಂದರ್ ಪಾಲ್ ಸಿಂಗ್ ಸಂಧು: ಸ್ಕ್ವಾಷ್, ಅಹಿಕಾ ಮುಖರ್ಜಿ: ಟೇಬಲ್ ಟೆನಿಸ್, ಸುನೀಲ್‌ಕುಮಾರ್: ಕುಸ್ತಿ, ಶ್ರೀಮತಿ ಆಂಟಿಮ್: ಕುಸ್ತಿ, ನವೋರೆಮ್ ರೋಶಿಬಿನಾ ದೇವಿ: ವುಶು, ಶೀತಲ್ ದೇವಿ: ಪ್ಯಾರಾ ಆರ್ಚರಿ, ಇಲ್ಲೂರಿ ಅಜಯ್ ಕುಮಾರ್ ರೆಡ್ಡಿ: ಅಂಧರ ಕ್ರಿಕೆಟ್, ಪ್ರಾಚಿ ಯಾದವ್: ಪ್ಯಾರಾ ಕ್ಯಾನೋಯಿಂಗ್. **ಖೇಲ್ ರತ್ನ ಪ್ರಶಸ್ತಿ:** ಚಿರಾಗ್ ಶೆಟ್ಟಿ: ಬ್ಯಾಡ್ಮಿಂಟನ್, ಸಾತ್ವಿಕ್ಸಾಯಿರಾಜ್ ರಾಂಕಿರೆಡ್ಡಿ: ಬ್ಯಾಡ್ಮಿಂಟನ್

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

### ಸಂಸತ್ ಭವನದಲ್ಲಿ ಸ್ಮೋಕ್ ಬಾಂಬ್ ಸ್ಫೋಟ

# ಪ್ರಧಾನಿ, ಕೇಂದ್ರ ಗೃಹ ಸಚಿವರ ಮೌನ ಸರಿಯಲ್ಲ

## ಮೈಸೂರಲ್ಲಿ ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಬೇಸರ



ಮೈಸೂರು, ಡಿ. 20(ಆರ್‌ಕೆ)– ಸದನ ಕಲಾಪ ನಡೆಯುವಾಗಲೇ ನೂತನ ಸಂಸತ್ ಭವನಕ್ಕೆ ನುಸುಳಿ ಸ್ಮೋಕ್ ಬಾಂಬ್ ಸಿಡಿಸಿ ಆತಂಕ ಸೃಷ್ಟಿಸಿರುವ ಪ್ರಕರಣ ಕುರಿತು ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಮೌನ ವಹಿಸಿರುವುದು ಸರಿಯಲ್ಲ ಎಂದು ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸಂಸತ್ ಭವನದ ಮೇಲೆ ದಾಳಿ ನಡೆದಿರುವುದು ಭದ್ರತಾ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆಯಾದರೂ, ಇಂತಹ ಗಂಭೀರ ವಿಷಯದ ಬಗ್ಗೆ ಪ್ರಧಾನಿ, ಕೇಂದ್ರ ಗೃಹ ಸಚಿವರು ಮೌನವಾಗಿರುವುದರ ಔಚಿತ್ಯವೇನು ಎಂದು ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಮೌನಿ ಎಂದು ನಿಂದಿಸುತ್ತಿದ್ದರು. ಆದರೆ, ನಿಜವಾದ ಮೌನಿ ಈಗಿನ ಪ್ರಧಾನಿಗಳು. ಸಂಸತ್ತಿನ ಸ್ಪೀಕರ್ ಅವರು ಪ್ರಕರಣದ ತನಿಖೆ ನಡೆಸುವಂತೆ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಗೃಹ ಇಲಾಖೆ ಅಧಿಕಾರಿಗಳು ದೆಹಲಿ ಪೊಲೀಸ್ ಆಯುಕ್ತರಿಗೆ ಆದೇಶ ನೀಡಿದ್ದಾರೆಯಾದರೂ, ಅಮಿತ್ ಷಾ ಭದ್ರತಾ ಲೋಪದ ಬಗ್ಗೆ ಹೇಳಿಕೆ ನೀಡುತ್ತಿಲ್ಲ ಎಂದು ಆರೋಪಿಸಿದರು.

ಇಂಡಿಯಾ ಒಕ್ಕೂಟದ ಪಕ್ಷಗಳು ಭದ್ರತಾ ವೈಫಲ್ಯ ಪ್ರಶ್ನಿಸಿದರೆ ರಾಜಕೀಯ ಮಾಡುತ್ತಿವೆ ಎಂದು ವಿಷಯಾಂತರ ಮಾಡಲಾಗುತ್ತಿದೆ. ಇದೊಂದು ರಾಜಕೀಯ ಮೂರ್ಖತನ ಹಾಗೂ ಮೌಢ್ಯತನ. ಎಲ್ಲವೂ ರಾಜಕೀಯವೇ. ದೇಶದ ಸೈನಿಕರು ನಡೆಸಿದ ಯಶಸ್ವಿ ಕಾರ್ಯಾಚರಣೆಯನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳುವ ಪ್ರಧಾನಿಗಳು, ಈ ಪ್ರಕರಣದ ಬಗ್ಗೆ ಏನನ್ನುತ್ತಾರೆ ಎಂದು ತಿಳಿಸಿದರು.

ಸಂಸದರನ್ನು ಅಮಾನತು ಮಾಡುವ ಮೂಲಕ ಸರ್ವಾಧಿಕಾರಿ ಧೋರಣೆಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ ಎಂದು ಬಿಕೆಸಿ ನುಡಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಹಾಗೂ ಮಾಧ್ಯಮ ವಕ್ತಾರ ಕೆ.ಮಹೇಶ್ ಗೋಷ್ಠಿಯಲ್ಲಿದ್ದರು.

# ಗೃಹರಕ್ಷಕ ದಳದ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

### ಖಾಕಿ ತೊಟ್ಟ ಮೇಲೆ ಬದ್ಧತೆ ಇರಬೇಕು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧೀಕ್ಷಕಿ ಬಿ.ಟಿ.ಕವಿತಾ ಕಿವಿಮಾತು



ಮೈಸೂರು, ಡಿ.20(ಎಂಕೆ)– ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್(ಜಿಲ್ಲಾ ಸಶಸ್ತ್ರ ಮೀಸಲು ಪಡೆ) ಮೈದಾನದಲ್ಲಿ ಮೂರು ದಿನಗಳ ಗೃಹರಕ್ಷಕ ದಳದ ವಾರ್ಷಿಕ ವಲಯ ಮಟ್ಟದ ಕ್ರೀಡಾಕೂಟಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಗಾಳಿಯಲ್ಲಿ ಬಲೂನ್‌ಗಳನ್ನು ಹಾರಿಬಿಡುವ ಮೂಲಕ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧೀಕ್ಷಕಿ ಬಿ.ಟಿ. ಕವಿತಾ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇತ್ತೀಚೆಗೆ ಪೊಲೀಸರು ಸೇರಿದಂತೆ ಖಾಕಿ ತೊಟ್ಟಿರುವವರಲ್ಲಿ ವೃತ್ತಿ ಬದ್ಧತೆ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಗೃಹರಕ್ಷಕ ದಳ ಎಂದರೆ ಪೊಲೀಸರ ಮತ್ತೊಂದು ಕೈ ಆಗಿದೆ. ಗೃಹರಕ್ಷಕ ದಳ ಸಿಬ್ಬಂದಿಯಲ್ಲಿಯೂ ಶಿಸ್ತು, ಸಂಯಮ ಹಾಗೂ ಬದ್ಧತೆಯನ್ನು ಕಾಣುತ್ತೇವೆ. ಖಾಕಿ ಸೇವೆಯನ್ನು ಪ್ರತಿನಿಧಿಸುವ ಸಮವಸ್ತ್ರವಾಗಿದ್ದು, ಖಾಕಿ ಧರಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಸಿಕ್ಕಿದೆ ಎಂದರೆ ನಮ್ಮ–ನಿಮ್ಮೆಲ್ಲರ ಅದೃಷ್ಟ. ಇತ್ತೀಚೆಗೆ ಖಾಕಿ ತೊಟ್ಟವರಲ್ಲಿ ತಮ್ಮ ಕೆಲಸದ ಮೇಲಿನ ಬದ್ಧತೆ ಕಡಿಮೆಯಾಗುತ್ತಿದೆ. ಇದರ ನಡುವೆ ಗೃಹರಕ್ಷಕ ದಳದ ಸೇವೆ ಶ್ಲಾಘನೀಯ ಎಂದರು.

ನಾವು ಮಾಡುವ ವೃತ್ತಿ ಹಾಗೂ ಪಡೆಯುವ ಸಂಭಾವನೆಗೆ ಸಂಪೂರ್ಣ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಕೆಲಸದ ನಿರೀಕ್ಷೆಗೆ ತಕ್ಕಂತೆ ಅದರಲ್ಲಿ ತಲ್ಲೀನರಾಗಬೇಕು. ಕೆಲಸ ಒಪ್ಪಿಕೊಂಡ ಮೇಲೆ ಅದನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸುವ ಮನೋಭಾವನೆ ಇರಬೇಕು. ನಾವು ಮಾಡುವ ಸೇವೆಯಿಂದ ನಮ್ಮನ್ನು ಸಮಾಜದಲ್ಲಿ ಗುರ್ತಿಸುವಂತಾದರೆ ಆತ್ಮ ತೃಪ್ತಿ ದೊರೆಯಲಿದೆ ಎಂದರು.

ಪೊಲೀಸರಂತೆಯೇ ಗಾಳಿ, ಮಳೆ, ಬಿಸಿಲಿನಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕ ದಳ ಸಿಬ್ಬಂದಿ ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು. ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯವಾಗಿದ್ದರಷ್ಟೇ ಸೇವೆ ಸಲ್ಲಿಸಲು ಸಾಧ್ಯ ಎಂದರಲ್ಲದೆ ಕ್ರೀಡಾಕೂಟದಲ್ಲಿ ಪದಕ ಜಯಿಸುವುದಕ್ಕಿಂತ ಭಾಗವಹಿಸುವಿಕೆ ಮುಖ್ಯವಾಗಿದ್ದು, ವಿವಿಧ ಕ್ರೀಡೆಯಲ್ಲಿ ಭಾಗವಹಿಸುವಂತೆ ಸಲಹೆ ನೀಡಿದರು. ಬಳಿಕ ಮೈಸೂರು, ಮಂಡ್ಯ, ಚಾ.ನಗರ, ಹಾಸನ ಹಾಗೂ ಕೊಡುಗು ಜಿಲ್ಲಾ ಗೃಹರಕ್ಷಕ ಸಿಬ್ಬಂದಿ ವಿವಿಧ ಕ್ರೀಡೆಯಲ್ಲಿ ಭಾಗವಹಿಸಿ ಗಮನಸೆಳೆದರು. ಜಿಲ್ಲಾ ಗೃಹರಕ್ಷಕ ಸಮಾದೇಷ್ಟರಾದ ಡಾ.ಎಂ.ಕಾಂತರಾಜು, ಅಧಿಕಾರಿಗಳಾದ ಪುರುಷೋತ್ತಮ್, ವಿಶ್ವನಾಥ್, ನಿರೂಪಕ ಬಾಬು ಮತ್ತಿತರರಿದ್ದರು.

# ಪೌರಕಾರ್ಮಿಕರಿಗೆ ಮೆಗಾ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಡಿ. 20(ಆರ್‌ಕೆ)– ವಿಷ್ಣು ಮೂರ್ತಿ–ರೇಖಾ ಮೂರ್ತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರು ಮಹಾನಗರ ಪಾಲಿಕೆ ಸಹಯೋಗದಲ್ಲಿ ಮೈಸೂರಿನ ಪುರಭವನದಲ್ಲಿ ಇಂದು ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಾಸಕ ಕೆ. ಹರೀಶ್‌ಗೌಡ ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭ ಮಾತನಾಡಿದ ಅವರು, ಹಗಲು–ರಾತ್ರಿ ಎನ್ನದೇ ಸ್ವಚ್ಛತಾ ಕಾರ್ಯದಲ್ಲಿ ನಿರತರಾಗುವ ಪೌರಕಾರ್ಮಿಕರು, ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುತ್ತಾರೆ. ಇಡೀ ನಗರವನ್ನು ಶುಚಿಯಾಗಿಡುವ ಪೌರಕಾರ್ಮಿಕರ ಆರೋಗ್ಯ ರಕ್ಷಣೆ, ಮಕ್ಕಳ ವಿದ್ಯಾಭ್ಯಾಸ, ಆಶ್ರಯ, ಯೋಗಕ್ಷೇಮ ಕಾಪಾಡುವುದು ನಗರ ಪಾಲಿಕೆ ಜವಾಬ್ದಾರಿಯಾಗಿದೆ ಎಂದರು.

ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ತಲುಪಿಸಿ ಪೌರಕಾರ್ಮಿಕರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಅವರು ಸದೃಢವಾಗಿದ್ದರೆ, ಮೈಸೂರಿನ ನೈರ್ಮಲ್ಯ ಚೆನ್ನಾಗಿರಲು ಸಾಧ್ಯ. ಈ ನಿಟ್ಟಿನಲ್ಲಿ ವಿ.ಆರ್. ಚಾರಿಟಬಲ್ ಟ್ರಸ್ಟ್ ಉಚಿತವಾಗಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಬಿಪಿ, ಶುಗರ್, ಇಸಿಜಿ, ನೇತ್ರ ತಪಾಸಣೆ, ಫಿಸಿಯೋಥೆರಪಿ ಸೇರಿದಂತೆ ಹಲವು ಬಗೆಯ ತಪಾಸಣೆ ಮಾಡಿದ 20ಕ್ಕೂ ಹೆಚ್ಚು ವೈದ್ಯರು, ಅಗತ್ಯ ಸಲಹೆ, ಚಿಕಿತ್ಸೆ ನೀಡಿ, ಔಷಧಿಗಳನ್ನೂ ವಿತರಿಸಿದರು. ಸುಮಾರು 2000ಕ್ಕೂ ಹೆಚ್ಚು ಪೌರಕಾರ್ಮಿಕರು, ಕುಟುಂಬದ ಸದಸ್ಯರು ಶಿಬಿರದಲ್ಲಿ ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಉಪಆಯುಕ್ತ (ಆಡಳಿತ) ಜಿ.ಎಸ್.ಸೋಮಶೇಖರ್, ವಿ.ಆರ್.ಚಾರಿಟಬಲ್ ಟ್ರಸ್ಟ್‌ನ ಡಾ.ಶುಶ್ರುತಗೌಡ, ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ.ಎನ್.ಪಿ. ವೆಂಕಟೇಶ್, ವಲಯ ಆಯುಕ್ತರಾದ ಪ್ರತಿಭಾ, ಡಾ.ಬೃಂದಾ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಸೇರಿದಂತೆ ಹಲವರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

## ಇಂದು ಮೈಸೂರಲ್ಲಿ ಸ್ವಚ್ಛ ಶೌಚಾಲಯ ಅಭಿಯಾನ

ಮೈಸೂರು,ಡಿ.20(ಎಂಕೆ)– ಮೈಸೂರು ನಗರಪಾಲಿಕೆ ಡೇ–ನಲ್ಮ್ ವಿಭಾಗದ ವತಿಯಿಂದ ನಾಳೆ(ಡಿ.21) 'ಸ್ವಚ್ಛ ಶೌಚಾಲಯ ಅಭಿಯಾನ' ಹಮ್ಮಿಕೊಳ್ಳಲಾಗಿದೆ. ನಗರದೆಲ್ಲೆಡೆ ಇರುವ 69 ಸಾರ್ವಜನಿಕ ಶೌಚಾಲಯಗಳಿಗೆ ಭೇಟಿ ನೀಡುವ ಸ್ವ–ಸಹಾಯ ಸಂಘದ ಸದಸ್ಯರು ಶೌಚಾಲಯದ ಸ್ವಚ್ಛತೆ, ನೀರಿನ ಪೂರೈಕೆ ಹಾಗೂ ಶೌಚಾಲಯದ ಸ್ಥಿತಿ–ಗತಿ ಕುರಿತು ಪರಿಶೀಲನೆ ನಡೆಸಿ ಗ್ರೇಡ್ ಆಧಾರದಲ್ಲಿ ಅಂಕಗಳನ್ನು ನೀಡುವ ಮೂಲಕ ಶೌಚಾಲಯದಲ್ಲಿ ಶುಚಿತ್ವ ಕಾಪಾಡುವ ಕುರಿತು ಜಾಗೃತಿ ಮೂಡಿಸಲಿದ್ದಾರೆ.


ಸ್ವಚ್ಛ ಭಾರತ ಅಭಿಯಾನ(ನಗರ) ದಡಿಯಲ್ಲಿ ಸ್ವಚ್ಛ ಶೌಚಾಲಯ ಅಭಿಯಾನ ಕಾರ್ಯಕ್ರಮ ರೂಪಿಸಲಾಗಿದ್ದು, ಸ್ವಚ್ಛ ಶೌಚಾಲಯದ ಅರಿವು ಮೂಡಿಸಲು 'ವಾಕ್ ಥಾನ್', 'ಸ್ವಚ್ಛತಾ ಕಿಟ್ ವಿತರಣೆ', 'ಶೌಚಾಲಯ ಪ್ರವಾಸ', 'ಶೌಚಾಲಯ ದುರಸ್ತಿ ಮತ್ತು ನಿರ್ವಹಣ ಪರಿಶೀಲನೆ' ಹಾಗೂ 'ಸ್ವ–ಸಹಾಯ ಸಂಘಗಳಿಂದ ಶೌಚಾಲಯಗಳ ಶ್ರೇಣೀಕರಣ ಕಾರ್ಯಕ್ರಮ ನಡೆಯಲಿದೆ.

### ವಿದ್ಯುತ್ ಬಿಲ್ ಪಾವತಿಸದ ಹಿನ್ನೆಲೆ ಕರೆಂಟ್ ಕಟ್

# ಕತ್ತಲಲ್ಲಿ ಮೈಸೂರು ಜಿಪಂ ಇಂಜಿನಿಯರಿಂಗ್ ವಿಭಾಗ

ಮೈಸೂರು, ಡಿ.20(ಪಿಎಂ)– ವಿದ್ಯುತ್ ಬಿಲ್ ಪಾವತಿಸದ ಹಿನ್ನೆಲೆಯಲ್ಲಿ ಮೈಸೂರಿನ ಕುವೆಂಪುನಗರದಲ್ಲಿರುವ ಮೈಸೂರು ಜಿಲ್ಲಾ ಪಂಚಾಯಿತಿಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಉಪ ವಿಭಾಗದ ಕಚೇರಿಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದು, ಇಲ್ಲಿನ ಸಿಬ್ಬಂದಿ ಕತ್ತಲಿನಲ್ಲಿ ಕಾರ್ಯನಿರ್ವಹಿಸುವ ಸನ್ನಿವೇಶ ನಿರ್ಮಾಣವಾಗಿದೆ.

ಬೆಳಗಿನ ಸಮಯದಲ್ಲಿ ನೈಸರ್ಗಿಕ ಬೆಳಕು ಇದ್ದರೂ ಅದು ಕಟ್ಟಡದ ಎಲ್ಲಾ ಭಾಗಕ್ಕೂ ದೂರಕುವುದು ಬಹುತೇಕ ಕಷ್ಟವೇ. ಅಲ್ಲದೆ, ಕಚೇರಿಯಾಗಿರುವ ಕಾರಣ ಫ್ಯಾನ್, ಕಂಪ್ಯೂಟರ್ ಸೇರಿದಂತೆ ಅನೇಕ ವಿಧದ ಬಳಕೆಗೆ ವಿದ್ಯುತ್ ಅನಿವಾರ್ಯವೇ. ಇಲ್ಲಿ ವಿದ್ಯುತ್ ಇಲ್ಲದೆ, ಕೆಲಸ ಕಾರ್ಯಗಳು ಆಮೆಗತಿಯಲ್ಲಿ ಸಾಗುವಂತಾಗಿದೆ ಎಂದು ಇಲ್ಲಿಗೆ ಭೇಟಿ ನೀಡಿದ್ದ ಸಾರ್ವಜನಿಕರೊಬ್ಬರು ಬೇಸರ ವ್ಯಕ್ತಪಡಿಸಿದರು.



ಸುಮಾರು 56 ಸಾವಿರ ರೂ. ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಸದರಿ ಕಚೇರಿಯ ವಿದ್ಯುತ್ ಸಂಪರ್ಕವನ್ನು ಸೆಸ್ಕ್ (ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ) ಅಧಿಕಾರಿಗಳು ಕಡಿತಗೊಳಿಸಿದ್ದಾರೆ. ಇದರ ಪರಿಣಾಮ ಕಚೇರಿ ಒಳಗೆ ಹಾಗೂ ಹೊರಾವರಣದಲ್ಲಿ ರಾತ್ರಿ ಕಗ್ಗತ್ತಲು ಆವರಿಸುತ್ತಿದ್ದು, ಬೆಳಗಿನ ವೇಳೆಯಲ್ಲಿ ಕಚೇರಿ ಒಳಗೆ ಅಲ್ಪಸ್ವಲ್ಪ ಸೂಸುವ ಸೂರ್ಯನ ಬೆಳಕಿನಲ್ಲಿ ಕೆಲಸ ಮಾಡುವಂತಹ ದುಸ್ಥಿತಿ ನಿರ್ಮಾಣವಾಗಿದೆ.

ಈಗಾಗಲೇ ಹೇಳಿದಂತೆ ವಿದ್ಯುತ್ ಬಳಕೆ ಕೇವಲ ಬೆಳಕು ಪಡೆಯಲು ಮಾತ್ರ ಸೀಮಿತವಾಗಿಲ್ಲ. ಮನುಷ್ಯನ ದೈನಂದಿನ ಹಲವು ಚಟುವಟಿಕೆಗಳಿಗೆ ವಿದ್ಯುತ್ ಅತ್ಯಗತ್ಯವಾಗಿದೆ. ಕಟ್ಟಡದ ಒಳಭಾಗದ ಎಲ್ಲೆಡೆ ನೈಸರ್ಗಿಕ ಬೆಳಕು ಇಲ್ಲದಾಗಲೂ ವಿದ್ಯುತ್ ಅಗತ್ಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸದರಿ ಕಚೇರಿ ವಿದ್ಯುತ್ ಇಲ್ಲದೆ ಕಾರ್ಯನಿರ್ವಹಿಸುವ ಸಾಹಸ ಮೆರೆಯುತ್ತಿದೆ!

ವಿದ್ಯುತ್ ಇಲ್ಲದ ಕಾರಣ ಕಾರ್ಯನಿಮಿತ್ತ ಇಲ್ಲಿಗೆ ಭೇಟಿ ನೀಡುವ ಗುತ್ತಿಗೆದಾರರು, ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳು ತ್ವರಿತವಾಗಿ ಆಗದೇ ಬೇಸರ ವ್ಯಕ್ತಪಡಿಸುತ್ತಿದ್ದರೆ, ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಹ ಪರಿಸ್ಥಿತಿಯಲ್ಲಿ ಸಿಬ್ಬಂದಿ ಕರ್ತವ್ಯ ನಿರ್ವಹಿಸಬೇಕಾಗಿದೆ. ಬೆಳಗಿನ ಸಮಯದಲ್ಲೂ ಕಚೇರಿಯ ಹಲವು ಭಾಗಗಳಲ್ಲಿ ಕತ್ತಲೆ ಇರುವಲ್ಲಿ ಸಿಬ್ಬಂದಿ ಸೋಲಾರ್ ದೀಪಗಳ ಬೆಳಕಲ್ಲಿ ಕೆಲಸ ಮಾಡಬೇಕಾದ ಸನ್ನಿವೇಶ ಉಂಟಾಗಿದೆ. ಇನ್ನಾದರೂ ಜಿಪಂ ಆಡಳಿತವು ಶುಲ್ಕ ಪಾವತಿಗೆ ಎದುರಾಗಿರುವ ತೊಡಕುಗಳನ್ನು ನಿವಾರಿಸಿಕೊಂಡು ತನ್ನ ಅಧೀನದ ಕಚೇರಿಗೆ ವಿದ್ಯುತ್ ಮರು ಸಂಪರ್ಕ ಕೊಡಸಬೇಕೆಂಬುದು ಪ್ರಜ್ಞಾವಂತ ನಾಗರಿಕರ ಆಗ್ರಹವಾಗಿದೆ.

# ಕಾಲೇಜು ವಿದ್ಯಾರ್ಥಿಗಳಿಗೆ ನೇತ್ರ ತಪಾಸಣೆ




ಮೈಸೂರು, ಡಿ.20(ಎಂಟಿವೈ)– ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಹೊಸ ಕಟ್ಟಡದಲ್ಲಿ ಆಯೋಜಿಸಿದ್ದ ಉಚಿತ ನೇತ್ರ ತಪಾಸಣಾ ಶಿಬಿರದಲ್ಲಿ ಕಾಲೇಜಿನ 180ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೇತ್ರ ತಪಾಸಣೆ ಮಾಡಿಸಿಕೊಂಡರು.

ಮಹಾರಾಜ ಕಾಲೇಜಿನ ಯುವ ರೆಡ್ ಕ್ರಾಸ್ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಮಹಾರಾಜ ಕಾಲೇಜಿನ ನೂತನ ಕಟ್ಟಡದ ಕೊಠಡಿ ಸಂಖ್ಯೆ–1ರಲ್ಲಿ ಆಯೋಜಿಸಿದ್ದ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಮೈಸೂರು ವಿವಿ ಆರೋಗ್ಯ ಕೇಂದ್ರದ ಮುಖ್ಯ ಆರೋಗ್ಯಾಧಿಕಾರಿ ಡಾ.ಎಂ.ಎಸ್. ಬಸವರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ನೇತ್ರ ತಪಾಸಣೆ ಮಾಡಿಸಿಕೊಳ್ಳುವುದರಿಂದ ದೃಷ್ಟಿ ದೋಷವಿದ್ದರೆ ಪತ್ತೆ ಮಾಡಿ, ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗಲಿದೆ. ಆರಂಭದಲ್ಲಿಯೇ ಸಮಸ್ಯೆ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಸಮಸ್ಯೆ ಉಲ್ಬಣಗೊಳ್ಳುವುದು ತಪ್ಪುತ್ತದೆ ಎಂದು ಸಲಹೆ ನೀಡಿದರು.

ಶಿಬಿರದಲ್ಲಿ ಕಾಲೇಜಿನ ವಿವಿಧ ವಿಭಾಗಗಳ 180ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ನೇತ್ರ ತಪಾಸಣೆ ಮಾಡಿಸಿಕೊಂಡು ವೈದ್ಯರಿಂದ ಸಲಹೆ ಪಡೆದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಸೋಮಶೇಖರಪ್ಪ, ಆಡಳಿತಾಧಿಕಾರಿ ಪ್ರೊ.ವಿ. ಷಣ್ಮುಗಂ, ಯುವ ರೆಡ್‌ಕ್ರಾಸ್ ಸಮಿತಿ ಸಂಚಾಲಕರಾದ ಪ್ರೊ.ರೇಖಾ ಕೆ.ಜಾದವ್, ಉಪನ್ಯಾಸಕರಾದ ಡಾ.ರಾಘವೇಂದ್ರ, ಡಾ.ಶ್ವೇತಾ ಹುಸ್ಸ್, ಡಾ.ದಿನಮಣಿ, ಡಾ.ಕೃಷ್ಣಪ್ಪ, ಡಾ.ಮಧುಸೂದನ್, ಪುನೀತ್‌ಕುಮಾರ್, ಸಚಿನ್, ನೇತ್ರಧಾಮ ಕಣ್ಣಿನ ಆಸ್ಪತ್ರೆಯ ಡಾ.ಮಾಳವಿಕಾ, ಡಾ.ನೀರಜಾ ಇದ್ದರು.

# ತೊಟ್ಟಿಮನೆಯಲ್ಲಿ ಕಳವಿಗೆ ಯತ್ನ; ಖದೀಮನ ಹಿಡಿದು ಪೊಲೀಸರಿಗೆ ಒಪ್ಪಿಸಿದ ಗ್ರಾಮಸ್ಥರು

ಕೆ.ಎಂ.ದೊಡ್ಡಿ, ಡಿ.20–ತೊಟ್ಟಿಮನೆಯ ಹೆಂಚು ತೆಗೆದು ಒಳ ನುಗ್ಗಿ ನಗದು ಕಳವು ಮಾಡಿ ಪರಾರಿಯಾಗುತ್ತಿರುವ ಖದೀಮನನ್ನು ಗ್ರಾಮಸ್ಥರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮದ್ದೂರು ತಾಲೂಕು ಹೆಚ್.ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಇದೇ ಗ್ರಾಮದ ಮರಿಲಿಂಗಯ್ಯ ಅವರ ಪುತ್ರ ಸುರೇಶ್ (44) ಬಂಧಿತ ಖದೀಮನಾಗಿದ್ದು, ಇದೇ ಗ್ರಾಮದ ನಿಂಗಪ್ಪ ಮತ್ತು ಮಾದಶೆಟ್ಟಿ ದಂಪತಿ ಡಿ.19ರಂದು ಬೆಳಗ್ಗೆ ಕೂಲಿ ಕೆಲಸಕ್ಕೆ ಹೋಗಿದ್ದು, ಸಂಜೆ 4 ಗಂಟೆ ಸುಮಾರಿನಲ್ಲಿ ಮನೆಗೆ ಹಿಂತಿರುಗಿ ಬಾಗಿಲು ತೆರೆದಾಗ ಮನೆಯೊಳಗಿದ್ದ ಸುರೇಶ ಹೆಂಚನ್ನು ಮೇಲಕ್ಕೆತ್ತಿ ಪರಾರಿಯಾಗಲು ಪ್ರಯತ್ನಿಸಿದ್ದಾನೆ. ಈ ವೇಳೆ ದಂಪತಿ ಕೂಗಿಕೊಂಡಾಗ ಅಕ್ಕಪಕ್ಕದ ಮನೆಯವರು ಧಾವಿಸಿ ಸುರೇಶ್‌ನನ್ನು ಹಿಡಿದುಕೊಂಡು ತಪಾಸಣೆ ಮಾಡಿದಾಗ ಆತನ ಬಳಿ ನಿಂಗಮ್ಮ ಅವರು ಪಾತ್ರೆಯೊಂದರಲ್ಲಿ ಇಟ್ಟಿದ್ದ 52 ಸಾವಿರ ರೂ. ನಗದು ದೊರೆತಿದೆ. ಗ್ರಾಮಸ್ಥರು ತಮ್ಮ ವಶಕ್ಕೆ ಒಪ್ಪಿಸಿದ ಸುರೇಶನನ್ನು ಬಂಧಿಸಿರುವ ಕೆ.ಎಂ.ದೊಡ್ಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

**ಬಾಗಿಲು ಮೀಟಿ ಮನೆಯಲ್ಲಿ ಚಿನ್ನಾಭರಣ ಕಳವು**

**ಮನೆಯಲ್ಲಿ ಕಳವು:** ಮನೆಯ ಬಾಗಿಲು ಮೀಟಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮಳವಳ್ಳಿ ಟೌನ್‌ನ ಕೀರ್ತಿನಗರ ಹೊಸ ಬಡಾವಣೆಯಲ್ಲಿ ನಡೆದಿದೆ. ಇಲ್ಲಿ ವಾಸವಿರುವ ಎಸ್.ಶಾಂತರಾಜು (53) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಶಿಕ್ಷಕಿಯಾಗಿರುವ ಇವರ ಪತ್ನಿ ಹಾಗೂ ವಿದ್ಯಾರ್ಥಿಯಾಗಿರುವ ಪುತ್ರಿ ಮತ್ತು ಶಾಂತರಾಜು ಅವರು ಪ್ರತೀದಿನ ಬೆಳಗ್ಗೆ 9.30ಕ್ಕೆ ಮನೆಯಿಂದ ಹೊರಟವರು ಸಂಜೆ 4ಕ್ಕೆ ಹಿಂತಿರುಗುತ್ತಾರೆ. ಅದೇ ರೀತಿ ಡಿ.19ರಂದು ಕುಟುಂಬದವರು ಮನೆಗೆ ಹಿಂತಿರುಗಿದಾಗ ಮನೆಯ ಬಾಗಿಲು ಮತ್ತು ರೂಂನಲ್ಲಿದ್ದ ಬೀರುವಿನ ಸೇಫ್ಟಿ ಲಾಕರ್‌ಗಳನ್ನು ಮೀಟಿ 20 ಗ್ರಾಂ ತೂಕದ ಮಾಂಗಲ್ಯ ಸರ ಮತ್ತು 70 ಸಾವಿರ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮಳವಳ್ಳಿ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡರಿಗೆ ಉನ್ನತ ಸ್ಥಾನ ಕಲ್ಪಿಸುವಂತೆ ನಿರ್ಣಯ

## ● ಮೈಸೂರು ನಗರ-ಜಿಲ್ಲಾ ಕಾಂಗ್ರೆಸ್ ಮುಖಂಡರ ನಿರ್ಧಾರ ● ಮರೀಗೌಡರ ಹುಟ್ಟುಹಬ್ಬ ಅದ್ಧೂರಿ ಆಚರಣೆ; ಹಲವು ಸೇವಾ ಕಾರ್ಯ











ಕೆ.ಮರಿಗೌಡರನ್ನು ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಿನಕಲ್ ಮಂಜು, ಪ್ರಧಾನ ಕಾರ್ಯದರ್ಶಿ ಧನಗಳ್ಳಿ ಪ್ರವೀಣ್, ಪೈ. ನವೀನ್, ಇಲವಾಲ ಯುವ ಕಾಂಗ್ರೆಸ್ ಅಧ್ಯಕ್ಷ ಕಮರಹಳ್ಳಿ ಸಂತೋಷ್, ದಡದಹಳ್ಳಿ ನಿಂಗಯ್ಯ, ಜಟ್ಟಿಹುಂಡಿ ರಾಚಪ್ಪ, ದೊಡ್ಡಕಾನ್ಯ ವಿಜಿ ಅಭಿನಂದಿಸಿದರು.

ಮೈಸೂರು,ಡಿ.20(ಎಂಟಿವೈ)– ವಿವಿಧೆಡೆ ಸಮಾಜ ಸೇವಾ ಕಾರ್ಯದ ಮೂಲಕ ಜಿ.ಪಂ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಕೆ.ಮರೀಗೌಡರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜನ್ಮದಿನದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ಕೆ.ಮರೀಗೌಡರು ಬುಧವಾರ ಬೆಳಗ್ಗೆ ಪತ್ನಿ ಜಯಶ್ರೀ ಹಾಗೂ ಬೆಂಬಲಿರೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಬಿ.ಎಂ.ನಟರಾಜ್, ಗ್ರಾ.ಪಂ.ಮಾಜಿ ಅಧ್ಯಕ್ಷ ಭರತ್ ಕಾಳಯ್ಯ ಹಾಗೂ ಗ್ರಾಮಸ್ಥರು ಮರೀಗೌಡರನ್ನು ಅಭಿನಂದಿಸಿದರು.

**ವಿವಿಧೆಡೆ ಸೇವಾ ಕಾರ್ಯಕ್ರಮ:** ಜಯನಗರದಲ್ಲಿರುವ ಛಾಯಾದೇವಿ ಆಶ್ರಮದಲ್ಲಿ ಶೇಖರ ನೇತೃತ್ವದಲ್ಲಿ ಮಕ್ಕಳಿಗೆ ಉಪಾಹಾರ ಹಾಗೂ ಹಣ್ಣು ವಿತರಿಸಿದರು. ಈ ಸಂದರ್ಭದಲ್ಲಿ ಹಳೇಕಾಮನಕೊಪ್ಪಲು ಕರೀಗೌಡ, ನಾಗವಾಲ ನರೇಂದ್ರ, ಮಹದೇವ ಇತರರು ಅಭಿನಂದಿಸಿದರು.

ಮಂಡಕಳ್ಳಿಯಲ್ಲಿ ನಾಗರಾಜ್, ಕೆ. ಹೆಬ್ಬಾಳೇಗೌಡರ ನೇತೃತ್ವದಲ್ಲಿ ಕೇಕ್ ಕತ್ತರಿಸಿ ಸಿಹಿ ವಿತರಿಸಿ ಅಭಿನಂದಿಸಿದರು. ಶ್ರೀರಾಂಪುರದಲ್ಲಿರುವ ಶ್ರೀನವಚೇತನ ಬಸವೇಶ್ವರ ಬುದ್ಧಿಮಾಂದ್ಯ ಮಕ್ಕಳಿಗೆ ಕೇರ್ಗಳ್ಳಿ ಬಸವೇಗೌಡರ ವತಿಯಿಂದ ತಿಂಡಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶಿವಪ್ಪ ಡಿ.ಸಾಲುಂಡಿ ಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ರಮಾಬಾಯಿನಗರದ ಸರ್ಕಾರಿ ಶಾಲೆಯ ಮಕ್ಕಳಿಗೆ ನೋಟ್ ಪುಸ್ತಕ ವಿತರಿಸಿ ಕೇಕ್ ಕತ್ತರಿಸಲಾಯಿತು. ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಶಿವಕುಮಾರ್, ನಾರಾಯಣ ಪಾಲ್ಗೊಂಡಿದ್ದರು. ಮಹದೇವಪುರದಲ್ಲಿ ಲಕ್ಷ್ಮಣ್ ಪ್ರಭು, ಅವರಿಂದ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಪೌರಕಾರ್ಮಿಕರಿಗೆ ಬಟ್ಟೆ ವಿತರಿಸಲಾಯಿತು.

ಬಂಬೂಬಜಾರ್‌ನಲ್ಲಿರುವ ಅಂಗವಿಕಲರ ಬುದ್ಧಿಮಾಂದ್ಯ ಶಾಲೆಯಲ್ಲಿ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಯಿತು. ಈ ಸಂದರ್ಭದಲ್ಲಿ ಅರಸಿನಕೆರೆ ಸ್ವಾಮಿ, ಮಹದೇವ, ಹಿನಕಲ್ ಉದಯ್ ಇನ್ನಿತರರು ಉಪಸ್ಥಿತರಿದ್ದರು. ಭರತ್‌ನಗರದಲ್ಲಿ ಅಜ್ಮಲ್ ನೇತೃತ್ವದಲ್ಲಿ ಸೀರೆ ವಿತರಿಸಲಾಯಿತು. ನಂತರ ರಾಮಕೃಷ್ಣನಗರ ಜಿ.ಬ್ಲಾಕ್ ಹೂಟಗಳ್ಳಿ ಹೌಸಿಂಗ್ ಬೋರ್ಡ್ ಹಾಗೂ ಇಲವಾಲದಲ್ಲಿ ಅಭಿನಂದನಾ ಕಾರ್ಯಕ್ರಮಗಳು ನಡೆದವು.

**ಕಾರ್ಯಕರ್ತರಿಂದ ಅಭಿನಂದನಾ ಸಭೆ:** ವಿವಿಧೆಡೆ ಸೇವಾ ಕಾರ್ಯದ ಬಳಿಕ ಮೈಸೂರಿನ ಶ್ರೀರಾಂಪುರದ ಅಶ್ವಿನಿ ಕಲ್ಯಾಣ ಮಂಟಪದಲ್ಲಿ ರಾಜ್ಯ ಹಿಂದುಳಿದ ಜಾಗೃತಿ ವೇದಿಕೆ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಕಾಂಗ್ರೆಸ್‌ನ ವಿವಿಧ ಘಟಕ ಹಾಗೂ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಮರೀಗೌಡರಿಗೆ ಅಭಿನಂದಿಸಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಮರೀಗೌಡರು ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಾಗಿ ಪಕ್ಷ ಸಂಘಟನೆಯಲ್ಲಿ ಮುಂಚೂಣಿ ನಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸಮರ್ಥ ನಾಯಕರಾಗಿದ್ದು, ಈಗಾಗಲೇ ಶಾಸಕರಾಗಿ, ಮಂತ್ರಿಯಾಗಿರಬೇಕಾಗಿತ್ತು. ಆದರೆ ಪಕ್ಷದಿಂದ ಅವರಿಗೆ ಅನ್ಯಾಯವಾಗಿದ್ದು, ಮುಂದಿನ ದಿನಗಳಲ್ಲಿ ಅವರಿಗೆ ಉತ್ತಮ ಅವಕಾಶ ದೊರೆಯಲಿದೆ. ಇಂದು ಜಿಲ್ಲಾ ಕಾಂಗ್ರೆಸ್ ಮತ್ತು ನಗರ ಕಾಂಗ್ರೆಸ್ ವತಿಯಿಂದ ಮರೀಗೌಡರಿಗೆ ರಾಜ್ಯ ಮಟ್ಟದ ಹುದ್ದೆಯನ್ನು ಪಕ್ಷ ನೀಡಬೇಕೆಂದು ನಿರ್ಣಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಕೆ.ಮರೀಗೌಡರು ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿಯಿಂದ ಅಭ್ಯರ್ಥಿಯಾಗಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಟಿಕೆಟ್ ಬೇರೆಯವರಿಗೆ ನೀಡಲಾಯಿತು. ಆದರೂ ಬೇಸರ ಮಾಡಿಕೊಳ್ಳದೆ ಪಕ್ಷ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿದರು. ಇದು ಅವರಿಗೆ ಪಕ್ಷದ ಮೇಲಿರುವ ನಿಷ್ಠೆಯನ್ನು ತೋರಿಸುತ್ತದೆ. ಸರ್ಕಾರ ಈ ಬಾರಿ ಅವರಿಗೆ ಉನ್ನತ ಹುದ್ದೆಯನ್ನು ನೀಡುತ್ತದೆ ಎಂದರು.

ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಹಾಗೂ ನಗರದ ನೂರಾರು ಅಭಿಮಾನಿಗಳು ಮರೀಗೌಡರನ್ನು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರೊ. ಮಹೇಶ್ ಚಂದ್ರಗುರು, ರಂಗಕರ್ಮಿ ಜನಾರ್ಧನ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮುಖಂಡರಾದ ಕೆ.ಎಸ್. ಶಿವರಾಮ್, ಬುಲೆಟ್ ಮಹದೇವ್, ಜೆ.ಜೆ.ಆನಂದ, ಜವರಪ್ಪ, ಉದ್ಬೂರು ಕೃಷ್ಣ, ಸಿದ್ದರಾಮೇಗೌಡ, ಮಾರ್ಬಳ್ಳಿ ಕುಮಾರ್, ಜಿ.ಕೆ.ಬಸವಣ್ಣ, ಎಂ.ಟಿ.ರವಿಕುಮಾರ್, ನಾಡನಹಳ್ಳಿ ರವಿ, ಸೋಮಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಹೊನ್ನಪ್ಪ, ಧನಗಳ್ಳಿ ಬಸವರಾಜು, ರೇವಣ್ಣ, ಶಿವರಾಜು, ಉತ್ತನಹಳ್ಳಿ ಶಿವಣ್ಣ, ಅಕ್ಕಿ ಶಿವಣ್ಣ, ಹರೀಶ್ ಮೊಗಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಸಿದ್ದರಾಮಯ್ಯನವರು ನನ್ನ ಮನೆ ದೇವರು...

ಮೈಸೂರು, ಡಿ.20–ನಾನು ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದು, ಸಿದ್ದರಾಮಯ್ಯನವರು ನನ್ನ ಮನೆದೇವರು ಎಂದು ಭಾವಿಸಿ ಕೆಲಸ ಮಾಡುತ್ತಿದ್ದೇನೆ ಎಂದು ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡರು ತಿಳಿಸಿದರು.

ಅಭಿಮಾನಿಗಳ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಸಿದ್ದರಾಮಯ್ಯರವರು ನನ್ನನ್ನು ಗ್ರಾಪಂ ಸದಸ್ಯನಾಗಿ, ತಾಪಂ ಅಧ್ಯಕ್ಷನನ್ನಾಗಿ, ಜಿಪಂ ಉಪಾಧ್ಯಕ್ಷ, ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಅವರ ಮೇಲೆ ನನಗೆ ಅಪಾರವಾದ ನಂಬಿಕೆ ಇದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ನಿಮ್ಮೆಲ್ಲರ ಅಭಿಮಾನಕ್ಕೆ ನಾನು ಚಿರಋಣಿಯಾಗಿರುತ್ತೇನೆ ಎಂದು ಹೇಳಿದರು.

# ಸ್ಕ್ಯಾನಿಂಗ್ ಸೆಂಟರ್‌ಗಳು ಆರೋಗ್ಯ ಇಲಾಖೆ ಮಾರ್ಗಸೂಚಿ ಪಾಲಿಸಬೇಕು

## ಜಿಲ್ಲಾಧಿಕಾರಿ ಡಾ. ಕುಮಾರ್ ಸೂಚನೆ



ಮಂಡ್ಯ, ಡಿ.20– ಸ್ಕ್ಯಾನಿಂಗ್ ಸೆಂಟರ್‌ಗಳು ಗರ್ಭಿಣಿ ಮಹಿಳೆಯರ ಸ್ಕ್ಯಾನಿಂಗ್ ನಡೆಸಿದಾಗ ಆರೋಗ್ಯ ಇಲಾಖೆ ನೀಡಿರುವ ಮಾರ್ಗಸೂಚಿಯಂತೆ ನಿಗದಿತ ನಮೂನೆಯಲ್ಲಿ ದಾಖಲಿಸಿ, ದಾಖಲೆಗಳನ್ನು ಕನಿಷ್ಠ ಎರಡು ವರ್ಷ ಸಂಗ್ರಹಿಸಿಡಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚಿಸಿದರು.

ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಮಿಮ್ಸ್‌ನಲ್ಲಿ ಆಯೋಜಿಸಿದ್ದ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ತಂತ್ರ (ದುರ್ಬಳಕೆ ಮತ್ತು ತಡೆ) ಕಾಯಿದೆ 1994ರ ಕಾಯಿದೆ ಬಗ್ಗೆ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸ್ಕ್ಯಾನಿಂಗ್ ಸೆಂಟರ್ ನಡೆಸಲು ಸರ್ಕಾರದಿಂದ ನಿಗದಿಪಡಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸಬೇಕು. ಎಂಪ್ಯಾನಲ್ ಮಾಡಿಕೊಂಡಿರುವ ವೈದ್ಯರು ಮಾತ್ರ ಸ್ಕ್ಯಾನಿಂಗ್ ಕೆಲಸ ನಿರ್ವಹಿಸಬೇಕು ಎಂದರು.

ಪಿ.ಸಿ.ಪಿ.ಎನ್.ಡಿ.ಟಿ ಕಾಯ್ದೆಯಡಿ ರಚಿಸಲಾಗಿರುವ ಸಮಿತಿಯು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಪ್ರತಿ 3 ತಿಂಗಳಿಗೊಮ್ಮೆ ಅಥವಾ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಸ್ಕ್ಯಾನಿಂಗ್ ಸೆಂಟರ್‌ನವರು ಗರ್ಭಿಣಿಯರ ವಿವರವನ್ನು ಬಾಲಿಕಾ ಸಾಫ್ಟ್‌ವೇರ್‌ನಲ್ಲಿ ಅಪ್‌ಲೋಡ್ ಮಾಡಿ ನಿಗದಿಪಡಿಸಿರುವ ದಾಖಲೆ ಹಾಜರುಪಡಿಸಬೇಕು. ಇಲ್ಲವಾದಲ್ಲಿ ಕಾಯ್ದೆ ಪ್ರಕಾರ ಪರವಾನಗಿ ರದ್ದು ಮಾಡಿ, ಕ್ರಿಮಿನಲ್ ಕೇಸ್ ದಾಖಲು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅನಕ್ಷರಸ್ಥರು ಹಾಗೂ ಮೂಢ ನಂಬಿಕೆಯಿಂದ ಬಹಳಷ್ಟು ಜನರು ಭ್ರೂಣಹತ್ಯೆಯಂತಹ ಸಮಾಜಘಾತುಕ ಕೆಲಸಕ್ಕೆ ಕೈ ಹಾಕುತ್ತಾರೆ. ಆದರೆ ಸ್ಕ್ಯಾನಿಂಗ್ ಹಾಗೂ ಭ್ರೂಣಹತ್ಯೆ ಮಾಡುವವರು ವಿದ್ಯಾವಂತರು. ಇದರ ಪರಿಣಾಮ ಅವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದ ಅವರು, ಹೆಣ್ಣನ್ನು ದೇವತೆ ಎಂದು ಪೂಜಿಸುವ ಸಮಾಜ ಭ್ರೂಣದಲ್ಲೇ ಹೆಣ್ಣನ್ನು ಕೊಂದರೆ ಮಾನವೀಯ ಮೌಲ್ಯಗಳು ಸಮಾಜದಲ್ಲಿ ಉಳಿಯಲು ಸಾಧ್ಯವಿಲ್ಲ. ಗಂಡು ಮತ್ತು ಹೆಣ್ಣು ಸಮಾಜದ ಎರಡು ಮುಖಗಳಿದ್ದ ಆಗೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಹೆಚ್ಚುತ್ತಿರುವುದರಿಂದ ಅದನ್ನು ತಡೆಗಟ್ಟಲು ಈಗಾಗಲೇ ಜಿಲ್ಲೆಯಲ್ಲಿ ತಂಡ ರಚನೆಯಾಗಿದೆ, ಇಂತಹ ಅಮಾನುಷ ಕೃತ್ಯಗಳು ಎಸಗುವುದು ಕಂಡು ಬಂದರೆ ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ವಸುಂಧರ ಭೂಪತಿ, ರಾಜ್ಯ ತಪಾಸಣಾ ಮತ್ತು ಮೇಲ್ವಿಚಾರಣೆ ಸಮಿತಿಯ ಸದಸ್ಯ ವಸಂತ್ ಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್, ಮಿಮ್ಸ್ ಅಧೀಕ್ಷಕ ಡಾ.ಶ್ರೀಧರ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಳವಳ್ಳಿಯಲ್ಲಿ ಅಕ್ರಮವಾಗಿ ಸರ್ಕಾರಿ ಜಮೀನು ಕಬಳಿಕೆ: ಮಾಜಿ ಶಾಸಕ ಅನ್ನದಾನಿ ಆರೋಪ



ಮಂಡ್ಯ, ಡಿ.20– ಮಳವಳ್ಳಿ ತಾಲೂಕು ಬಿ.ಜಿ.ಪುರ ಹೋಬಳಿ ಚೊಟ್ಟನಹಳ್ಳಿ ಗ್ರಾಮದ ಸರ್ಕಾರಿ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಯಾವುದೇ ದಾಖಲೆಗಳಿಲ್ಲದಿದ್ದರೂ ಒಂದೇ ಕುಟುಂಬದವರಿಗೆ ಜಮೀನು ಹಕ್ಕು ಬದಲಾವಣೆ ಮಾಡಲಾಗಿದೆ ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿ ತಾಲೂಕಿನಲ್ಲಿ ಬಿ.ಸೋಮಶೇಖರ್ ಶಾಸಕರಾದಾಗಿನಿಂದ ಹಿಡಿದು ಇಲ್ಲಿಯವರೆಗೆ ನಡೆದಿರುವ ಎಲ್ಲಾ ಭೂ ವ್ಯವಹಾರ ಪ್ರಕರಣಗಳನ್ನು ಸಿಬಿಐ ಸೇರಿದಂತೆ ಯಾವುದೇ ಸಂಸ್ಥೆಯಿಂದಲಾದರೂ ತನಿಖೆ ನಡೆಸಲಿ? ಅದಕ್ಕೆ ನಾನು ಸಂಪೂರ್ಣ ಸಹಮತವಿದೆ ಎಂದು ಸವಾಲು ಹಾಕಿದರು.

ಮಳವಳ್ಳಿ ತಾಲೂಕು ಬಿ.ಜಿ. ಪುರ ಹೋಬಳಿ ಚೊಟ್ಟನಹಳ್ಳಿ ಗ್ರಾಮದ ಸರ್ವೆ ನಂ.103 ರಲ್ಲಿ ಒಟ್ಟು 23.5 ಎಕರೆ ಸರ್ಕಾರಿ ಖರಾಬು ಜಮೀನಿದೆ. ಆದರೆ, ಸರ್ಕಾರಿ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಯಾವುದೇ ದಾಖಲೆಗಳಿಲ್ಲದಿದ್ದರೂ ಒಂದೇ ಕುಟುಂಬದ ನಾಲ್ಕು ಜನರಿಗೆ ತಲಾ 4 ಎಕರೆಯಂತೆ 24 ಎಕರೆ ಜಮೀನನ್ನು ಹಕ್ಕು ಬದಲಾವಣೆ ಮಾಡಲಾಗಿದೆ ಎಂದು ಆರೋಪ ಮಾಡಿದರು.

ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿಯವರು ಮಳವಳ್ಳಿ ತಾಲೂಕು ಕಚೇರಿ ಪ್ರಥಮ ದರ್ಜೆ ಗುಮಾಸ್ತ ಕೆ.ಎಂ.ಪ್ರಕಾಶ್ ಎಂಬಾತನನ್ನು ಅಮಾನತುಗೊಳಿಸಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಹಕ್ಕು ಬದಲಾವಣೆಯಾಗಲು ರಾಜಸ್ವ ನಿರೀಕ್ಷಕರು, ತಹಸೀಲ್ದಾರ್ ಕೂಡ ಭಾಗಿಯಾಗಿದ್ದು ಅವರ ವಿರುದ್ಧವೂ ತಕ್ಷಣವೇ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಶಾಸಕರಾಗಿ ಬಂದ ನಂತರ ಉತ್ತಮ ಆಡಳಿತ ನೀಡುವುದಾಗಿ ಕ್ಷೇತ್ರದ ಜನರಿಗೆ ಪಿ.ಎಂ.ನರೇಂದ್ರಸ್ವಾಮಿ ನೀಡಿದ್ದ ಭರವಸೆ ಸುಳ್ಳಾಗಿದೆ. ಸರ್ಕಾರಿ ಭೂಮಿಯನ್ನೇ ಕಬಳಿಸುವ ಪ್ರಕರಣಗಳು ಹೊರಬರಲಾರಂಭಿಸಿವೆ. ತಾಲೂಕಿನಲ್ಲಿ ಆಡಳಿತ ಸಂಪೂರ್ಣವಾಗಿ ಕುಸಿದಿದೆ. ಇದರ ಬಗ್ಗೆ ಜಿಲ್ಲಾಡಳಿತ ಸಮಗ್ರ ತನಿಖೆ ನಡೆಸಿ ಸರ್ಕಾರಿ ಭೂಮಿ ಖಾಸಗಿ ವ್ಯಕ್ತಿಗಳ ಪಾಲಾಗದಂತೆ ತಡೆಯಬೇಕು. ಜೊತೆಗೆ ಒತ್ತುವರಿಯಾಗಿರುವ ಸರ್ಕಾರಿ ಜಮೀನನ್ನು ವಶಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು.

ನನ್ನ ಅವಧಿಯಲ್ಲಿ ದರಖಾಸ್ತು ಸಮಿತಿ ಅಧ್ಯಕ್ಷನಾಗಿದ್ದಾಗ ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸುವಂತೆ ಅಂದಿನ ತಹಶೀಲ್ದಾರ್ ಅವರಿಗೆ ನಿರ್ದೇಶನ ನೀಡಿದ್ದೆ. ಸರ್ಕಾರಕ್ಕೆ ಪತ್ರ ಬರೆದು ಗಮನಸೆಳೆದಿದ್ದೆ. ಅದೇ ಸಮಯಕ್ಕೆ ಚುನಾವಣೆ ಎದುರಾಗಿದ್ದರಿಂದ ಅಲ್ಲಿಗೇ ಪ್ರಕ್ರಿಯೆ ಸ್ಥಗಿತಗೊಂಡಿದೆ. ಭೂ ಅಕ್ರಮ ನಡೆಯುವುದಕ್ಕೆ ಶಾಸಕರ ಸಹಕಾರವಿದೆಯೋ, ಸರ್ಕಾರಿ ಭೂಮಿ ಖಾತೆ ಮಾಡಿಕೊಂಡಿರುವ ಖಾಸಗಿ ವ್ಯಕ್ತಿಗಳು ಶಾಸಕರ ಬೆಂಬಲಿಗರೋ, ಹಿತೈಷಿಗಳೋ ಗೊತ್ತಿಲ್ಲ. ಕೂಡಲೇ ಈ ಖಾತೆಯನ್ನು ರದ್ದುಪಡಿಸುವುದರೊಂದಿಗೆ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು. ಈ ಬಗ್ಗೆ ಸಿಐಡಿಗೆ ದೂರು ನೀಡುತ್ತೇನೆ ಎಂದರು.


ಮಳವಳ್ಳಿ ತಾಲೂಕಿನ ಹೊಸಹಳ್ಳಿ, ಅಳದಾಸನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಲ್ಲಿ ಅಕ್ರಮ ಮಣ್ಣು ದಂಧೆ ತಲೆಎತ್ತಿದೆ, ಇದಕ್ಕೆ ಲೋಡ್‌ಗಟ್ಟಲೆ ಲಾರಿಗಳಲ್ಲಿ ಮಣ್ಣು ಸಾಗಣೆಯಾಗುತ್ತಿದ್ದರೂ ಅದನ್ನು ಯಾರೂ ತಡೆಯುತ್ತಿಲ್ಲ, ಮರಳು ದಂಧೆಯೂ ಹೆಚ್ಚಿರುವುದರಿಂದಲೂ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡರಾದ ಸಿದ್ದಾಚಾರಿ, ಪ್ರಶಾಂತ್, ಕಾಂತರಾಜು, ಆನಂದ್, ಜಯರಾಮು ಇದ್ದರು.



ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ಇಲಾಖೆ ವತಿಯಿಂದ ಪಾಲಹಳ್ಳಿ ಗ್ರಾಮದಲ್ಲಿ ನಡೆದ ಜನಸಂಪರ್ಕ ಸಭೆ, ಕಂದಾಯ ಅದಾಲತ್, ಇ–ಸ್ವತ್ತು ಆಂದೋಲನ ಕಾರ್ಯಕ್ರಮವನ್ನು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಎಸಿ ನಂದೀಶ್, ಇಓ ವೇಣು, ತಹಶೀಲ್ದಾರ್ ಪರಶುರಾಮ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಿಮಲಾ, ಉಪಾಧ್ಯಕ್ಷೆ ರಕ್ಷಿತಾ, ಸದಸ್ಯರು, ಪಂಚಾಯಿತಿ ಆಡಳಿತಾಧಿಕಾರಿ, ಕಾಂಗ್ರೆಸ್ ಮುಖಂಡ ಸಿ. ದೇವರಾಜ ಹಾಗೂ ತಾಲೂಕು ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಪಾಲಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

## ನಾಗೇಶ್ ನಿಧನ

ಕೆ.ಆರ್.ಪೇಟೆ, ಡಿ.20– ಪಟ್ಟಣದ ಜಯನಗರ ಬಡಾವಣೆಯ ನಿವಾಸಿ, ನೇಕಾರ ಸಮುದಾಯದ ಹಿರಿಯ ಮುಖಂಡರಾದ ನಾಗೇಶ್ (51)ರವರು ನಿಧನ ಹೊಂದಿರುತ್ತಾರೆ.



ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಜಯನಗರ ಬಡಾವಣೆಯಲ್ಲಿರುವ ಅವರ ಜಮೀನಿನಲ್ಲಿ ನಡೆಯಿತು. ಮೃತರ ನಿಧನಕ್ಕೆ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಆರ್.ಲೋಕೇಶ್, ಪುರಸಭಾ ಸದಸ್ಯರಾದ ಪ್ರೇಮ್‌ಕುಮಾರ್, ಪದ್ಮಾರಾಜು, ಇಂದ್ರಾಣಿ ವಿಶ್ವನಾಥ್, ಪುರಸಭೆ ಮಾಜಿ ಅಧ್ಯಕ್ಷ ರಾಮಕೃಷ್ಣ, ಕೆ.ಸಿ.ವಾಸು, ಸಮಾಜದ ಮುಖಂಡರಾದ ಹೆಚ್.ಬಿ.ರಾಜೇಶ್, ಚಂದ್ರಣ್ಣ, ಹೋಟೆಲ್ ಉದ್ಯಮಿ ರಾಮಣ್ಣ, ಹಂಸ ರಮೇಶ್, ಕ್ಯಾಂಟೀನ್ ವಾಸು ಮೂರ್ತಣ್ಣ, ದೇವರಾಜು, ಪಾಪಣ್ಣ, ಗಿರೀಶ್, ವಿಶ್ವನಾಥ್ ಸೇರಿದಂತೆ ಸಮಾಜದ ಹಲವು ಗಣ್ಯರು ಸಂತಾಪ ಸೂಚಿಸಿದ್ದರು.

## ಬ್ರಹ್ಮದೇವರ ಹಳ್ಳಿಯಲ್ಲಿ ಸರಣಿ ಅಂಗಡಿ ಕಳ್ಳತನ

ನಾಗಮಂಗಲ, ಡಿ.20– ತಾಲೂಕಿನ ಹೊಣಕೆರೆ ಹೋಬಳಿಯ ಬ್ರಹ್ಮದೇವರಹಳ್ಳಿ ಗ್ರಾಮದಲ್ಲಿ ಬೇಕರಿ, ದಿನಸಿ ಅಂಗಡಿ, ಮತ್ತು ಮೆಡಿಕಲ್ ಷಾಪ್ ಸೇರಿದಂತೆ ಎಂಟು ಅಂಗಡಿಗಳ ಬಾಗಿಲು ಒಡೆದು ಸುಮಾರು ಮೂರು ಲಕ್ಷಕ್ಕೂ ಹೆಚ್ಚು ನಗದು ದೋಚಲಾಗಿದೆ.

ಘಟನೆ ಮಂಗಳವಾರ ಬೆಳಗಿನ ಜಾವ 2 ಗಂಟೆ ಸಮಯದಲ್ಲಿ ನಡೆದಿದ್ದು ಈ ಕೃತ್ಯದಲ್ಲಿ ಐದು ಮಂದಿ ಶಾಮೀಲಾಗಿದ್ದು ಅಂದು ಅವರು ಮೆಡಿಕಲ್ ಷಾಪ್‌ನ ಷಟರ್‌ನ್ನು ಹೊರಗೆಳೆದು ಒಳನುಗ್ಗಿ ಕ್ಯಾಷ್ ಕೌಂಟರ್‌ಗೆ ಕೈ ಹಾಕಿ ಅಲ್ಲಿದ್ದ ಸುಮಾರು 35 ಸಾವಿರ ರೂ.ಗಳನ್ನು ತೆಗೆದುಕೊಂಡು ನಂತರ ಯದುರಾಜ್ ಎಂಬುವವರ ಮಾಲೀಕತ್ವದ ದಾತ್ರಿ ಪ್ರಾವಿಜನ್ ಬಾಗಿಲು ಮೀಟಿ, ಒಂದು ಲಕ್ಷಕ್ಕೂ ಹೆಚ್ಚು ನಗದನ್ನು ದೋಚಿದ್ದಾರೆ. ಇದೇ ರೀತಿ ಕೊಬ್ಬರಿ ಮಂಡಿಯ ಬಾಗಿಲನ್ನು ಸಹ ಒಡೆದು 30 ಸಾವಿರ ನಗದನ್ನು ದೋಚಿದ್ದಾರೆ. ಹೀಗೆ ಐದು ಅಂಗಡಿಗಳ ಜೊತೆಗೆ ಎರಡು ಗೋದಾಮಿನ ಬಾಗಿಲು ತೆಗೆದರಾದರೂ ಯಾವುದೇ ವಸ್ತು ಮತ್ತು ನಗದಾಗಲೀ ಸಿಕ್ಕದೇ ಸಿಕ್ಕಷ್ಟನ್ನು ದೋಚಿ ಪರಾರಿಯಾಗಿದ್ದಾರೆ. ಮಂಗಳವಾರ ಬೆಳಿಗ್ಗೆ ಅದೇ ಗ್ರಾಮದವರೊಬ್ಬರು ವಾಕಿಂಗ್ ಹೋಗುವ ಸಮಯದಲ್ಲಿ ಅಂಗಡಿಗಳ ಬಾಗಿಲು ತೆರೆದಿರುವುದನ್ನು ಕಂಡು ಮಾಲೀಕರಿಗೆ ತಿಳಿಸಿದ್ದಾರೆ.

ಈ ಘಟನೆ ಮಧ್ಯರಾತ್ರಿ 2 ಗಂಟೆಯಿಂದ 3 ಗಂಟೆಯ ಆಸುಪಾಸಿನಲ್ಲಿ ನಡೆದಿರುವ ಬಗ್ಗೆ ಮೆಡಿಕಲ್ ಷಾಪಿನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದೆ.

## ಕಿಕ್ಕೇರಿ ಗ್ರಾಪಂ ಅಧ್ಯಕ್ಷರಾಗಿ ಕೆ.ಆರ್. ರಾಜೇಶ್



ಕಿಕ್ಕೇರಿ, ಡಿ.20– ಕಿಕ್ಕೇರಿ ಗ್ರಾಪಂ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಸದಸ್ಯ ಕೆ.ಆರ್. ರಾಜೇಶ್ ಅವಿರೋಧವಾಗಿ ಆಯ್ಕೆಯಾದರು.

ತಾಲೂಕಿನಲ್ಲಿಯೇ ಪ್ರತಿಷ್ಠಿತ ಕಣವಾಗಿರುವ ಈ ಗ್ರಾಪಂ ಆಡಳಿತ ಹಿಂದೆ ಕಾಂಗ್ರೆಸ್, ಜೆಡಿಎಸ್ ಮೈತ್ರಿಯಲ್ಲಿತ್ತು. ಕಳೆದ ಆರು ತಿಂಗಳ ಹಿಂದೆ ಎರಡನೆ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿ ಮುಖಂಡರು ಒಡಂಬಡಿಕೆ ಮಾಡಿಕೊಂಡು ಮೈತ್ರಿ ಮಾಡಿಕೊಂಡಿದ್ದರು. ಮೈತ್ರಿ ಪಕ್ಷದ ಮುಖಂಡರ ಒಡಂಬಡಿಕೆಯಂತೆ ಈ ಹಿಂದೆ ಅಧ್ಯಕ್ಷರಾಗಿದ್ದ ಜೆಡಿಎಸ್ ಬೆಂಬಲಿತರಾದ ತಾಯಮ್ಮ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಬಿಜೆಪಿ ಬೆಂಬಲಿತ ಸದಸ್ಯ ಕೆ.ಆರ್. ರಾಜೇಶ್ ಮಾತ್ರ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರು ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 16ಸದಸ್ಯರು ಇರುವ ಗ್ರಾಪಂ.ನಲ್ಲಿ ಕಾಂಗ್ರೆಸ್ ಬೆಂಬಲಿತ 6ಸದಸ್ಯರಾದ ಯೋಗೇಶ್, ಪುಟ್ಟೇಗೌಡ, ತೇಜಸ್ವಿಕುಮಾರ್, ಸುನೀತಾ, ಜಯಲಕ್ಷ್ಮೀ, ಪದ್ಮಾವತಿ ಗೈರಾಗಿದ್ದರು.

ಚುನಾವಣಾಧಿಕಾರಿ ತಹಸೀಲ್ದಾರ್ ನಿಸರ್ಗಪ್ರಿಯ, ಪಿಡಿಓ ಚಲುವರಾಜ್ ಕರ್ತವ್ಯ ನಿರ್ವಹಿಸಿದರು.

ಉಪಾಧ್ಯಕ್ಷೆ ಸರಸ್ವತಿ, ಸದಸ್ಯರಾದ ಎಸ್.ಕೆ. ಬಾಲಕೃಷ್ಣ, ಕೆ.ಆರ್. ಕೃಷ್ಣ, ಕೆ.ಬಿ. ಚಂದ್ರಶೇಖರ್, ಕೆ.ಜಿ. ಪುಟ್ಟರಾಜು, ತಾಯಮ್ಮ, ಜ್ಯೋತಿ, ರೇಣುಕಮ್ಮ, ಭಾರತಿ, ತಾಪಂ. ಮಾಜಿ ಉಪಾಧ್ಯಕ್ಷ ರವಿ, ಗ್ರಾಪಂ. ಮಾಜಿ ಅಧ್ಯಕ್ಷ ಕೆ.ಎನ್. ನಾಗರಾಜು, ಮುಖಂಡರಾದ ದಯಾ, ಗೋವಿಂದರಾಜು, ಪ್ರಕಾಶ್, ವಿಷಕಂಠ, ಗೋಪಾಲ್ ಉಪಸ್ಥಿತರಿದ್ದರು.



ಮೈಸೂರು ವಿಜಯನಗರ 3ನೇ ಹಂತದ ಮೈಸೂರು ಮಹಾನಗರ ಪಾಲಿಕೆ ಚುನಾವಣೆಗೆ ಸ್ಪರ್ಧಾಕಾಂಕ್ಷಿಯಾದ ಎಸ್. ಮಂಜುನಾಥ (ವಿಜಯನಗರ ಮಂಜು) ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು. ಈ ಸಂದರ್ಭದಲ್ಲಿ ವೇಣುಗೋಪಾಲ್, ನಿಂಗೇಗೌಡ, ಮಹೇಶ್, ಕುಮಾರ್, ಭದ್ರೇಗೌಡ, ಧನಂಜಯ್ಯ, ನಂದೀಶ್, ಜಗಪ್ಪ, ರವಿಪೂಜಾರಿ, ನಂದನ್, ರವಿ, ಸ್ವಾಮಿ, ವಿಜಯನಗರದ ಹಲವು ಮುಖಂಡರು ಉಪಸ್ಥಿತರಿದ್ದಾರೆ.

## ಅಪರಿಚಿತ ಶವ ಪತ್ತೆ

**ಮೈಸೂರು:** ಮಂಡ್ಯ– ಯಲಿಯೂರು ರೈಲ್ವೆ ನಿಲ್ದಾಣದ ಸಮೀಪದಲ್ಲಿ ರೈಲು ಗಾಡಿಗೆ ಸಿಲುಕಿ ಸುಮಾರು 60 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು, ಮೃತ ದೇಹವು ಮಂಡ್ಯ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿದೆ.

ಮೃತರು ನೀಲಿ ತುಂಬು ತೋಳಿನ ಶರ್ಟ್, ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಮೃತ ವ್ಯಕ್ತಿ 5.6 ಅಡಿ ಎತ್ತರವಿದ್ದು, ಗೋದಿ ಮೈಬಣ್ಣ, ಸದೃಢ ಮೈಕಟ್ಟು ಹೊಂದಿದ್ದಾರೆ. ತಲೆಯಲ್ಲಿ 8 ಇಂಚು ಉದ್ದದ ಕಪ್ಪು ಕೂದಲು ಬಿಟ್ಟಿರುತ್ತಾನೆ.

ಮೃತನ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಠಾಣೆಗೆ ಅಥವಾ ದೂ.ಸಂ:0821–2516579 ಅನ್ನು ಸಂಪರ್ಕಿಸಬಹುದು.




ಐಶ್ವರ್ಯ ಫೌಂಡೇಶನ್‌ನ ಕ್ಯಾಲೆಂಡರ್ ಅನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಬುಧವಾರ ತಮ್ಮ ಕಚೇರಿಯಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ರವಿ (ಡೆಲ್ಲಿ), ರವಿ ಮಂಚೇಗೌಡನಕೊಪ್ಪಲು, ಗೋಪಾಲ್, ನಾಗೇಶ್ ಇತರರು ಉಪಸ್ಥಿತರಿದ್ದಾರೆ.

# ನಂ.ಗೂಡಲ್ಲಿ ಶ್ರೀ ಅಯ್ಯಪ್ಪ ಸ್ವಾಮಿಯ ವೈಭವದ ರಥೋತ್ಸವ



**ನಂಜನಗೂಡು:** ನಗರದ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ 26ನೇ ವರ್ಷದ ಬ್ರಹ್ಮೋತ್ಸವ ಅಂಗವಾಗಿ ಬುಧವಾರ ನಗರದ ಪ್ರಮುಖ ಬೀದಿಗಳಲ್ಲಿ ಶ್ರೀ ಅಯ್ಯಪ್ಪಸ್ವಾಮಿ ರಥೋತ್ಸವ ಸಾಗಿತು.

ಬೆಳಿಗ್ಗೆ ಕಪಿಲಾ ನದಿ ತೀರದ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಶಬರಿಮಲೆಯ ಪ್ರಧಾನ ಅರ್ಚಕ, ತಂತ್ರಿಗಳ ಮಾರ್ಗದರ್ಶನದಲ್ಲಿ ಅಯ್ಯಪ್ಪಸ್ವಾಮಿಗೆ ತುಪ್ಪ, ಪಂಚಾಮೃತ, ವಿಭೂತಿ, ಅಭಿಷೇಕ ಹಾಗೂ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ದೇವಾಲಯವನ್ನು ವಿಶೇಷ ಹೂಗಳಿಂದ ಸಿಂಗರಿಸಲಾಗಿತ್ತು. ನಂತರ ಸಾರೋಟ್‌ನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಅಯ್ಯಪ್ಪಸ್ವಾಮಿ ಉತ್ಸವಮೂರ್ತಿಯ ಮೆರವಣಿಗೆಗೆ ದೇವಾಲಯದ ಗುರುಸ್ವಾಮಿ ಪಿ.ದೇವರಾಜ್ ಅವರು ಚಾಲನೆ ನೀಡಿದರು.

ದೇವಾಲಯದಿಂದ ಆರಂಭಗೊಂಡ ಮೆರವಣಿಗೆಯು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ ಮೂಲಕ ರಾಕ್ಷಸ ಮಂಟಪ, ರಾಷ್ಟ್ರಪತಿ ರಸ್ತೆ, ಚಿಂತಾಮಣಿ ಗಣಪತಿ ದೇವಾಲಯ, ಹುಲ್ಲಹಳ್ಳಿ ವೃತ್ತ, ಎಂಜಿಎಸ್ ರಸ್ತೆ, ಬಜಾರ್ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ಅಯ್ಯಪ್ಪಸ್ವಾಮಿ ದೇವಾಲಯದವರೆಗೆ ನಡೆಯಿತು. ಮೆರವಣಿಗೆಯಲ್ಲಿ ವೀರಗಾಸೆ, ಕಂಸಾಳೆ, ಚಂಡೆವಾದ್ಯ, ಪೂಜಾ ಕುಣಿತ, ಗಾರುಡಿಗೊಂಬೆ, ಡೊಳ್ಳು ಹಾಗೂ ತಮಟೆ ವಾದ್ಯಮೇಳ ಮತ್ತು ಮಂಗಳವಾದ್ಯ ಗೋಷ್ಠಿ ಸೇರಿದಂತೆ ವಿವಿಧ ಜಾನಪದ ಪ್ರಕಾರ ಕಲಾತಂಡಗಳ ಪ್ರದರ್ಶನವಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಭಕ್ತರು ಅಯ್ಯಪ್ಪ ಸ್ವಾಮಿರವರ ದರ್ಶನ ಪಡೆದು ಧನ್ಯತಾಭಾವ ಮೆರೆದರು.

ಇದಕ್ಕೂ ಮುನ್ನ ಮಧ್ಯಾಹ್ನ ವೇಳೆ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು. ಮಲ್ಲನಮೂಲೆ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಹಾಗೂ ಶಾಸಕ ದರ್ಶನ್ ಧ್ರುವನಾರಾಯಣ್ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗಕ್ಕೆ ಚಾಲನೆ ನೀಡಿದರು. ಅನ್ನ ಸಂತರ್ಪಣೆಯಲ್ಲಿ ಸುಮಾರು 15 ಸಾವಿರ ಭಕ್ತರು ಪ್ರಸಾದ ಸೇವಿಸಿದರು.

ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ನಾರಾಯಣ, ಟ್ರಸ್ಟಿಗಳಾದ ಎನ್.ಎಂ.ಮಂಜುನಾಥ್, ಕೆ.ಎನ್.ವೆಂಕಟೇಶ್, ಭಕ್ತವತ್ಸಲ, ಎನ್.ಟಿ.ಗಿರೀಶ್ ಇತರರಿದ್ದರು.

# ವರುಣ ಕ್ಷೇತ್ರಕ್ಕೆ 2 ಸಾವಿರ ಹೆಚ್ಚುವರಿ ಮನೆಗಳಿಗೆ ಮನವಿ



**ನಂಜನಗೂಡು:** ವರುಣ ಕ್ಷೇತ್ರಕ್ಕೆ ಸಾಕಷ್ಟು ಆಶ್ರಯ ಮನೆಗಳ ಅವಶ್ಯಕತೆಯಿರುವುದರಿಂದ ಹೆಚ್ಚುವರಿಯಾಗಿ 2 ಸಾವಿರ ಮನೆಗಳನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ ಅವಶ್ಯಕವಾಗಿರುವ ಮೂಲ ಸೌಕರ್ಯಗಳನ್ನು ಒದಗಿಸಲು ಬದ್ಧನಾಗಿದ್ದೇನೆ ಎಂದು ವರುಣ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ವರುಣ ಕ್ಷೇತ್ರದ ಬಿಳಿಗೆರೆ ಗ್ರಾಪಂ ವ್ಯಾಪ್ತಿಯ ಕಾಮಹಳ್ಳಿ, ಭೋಗಯ್ಯನಹುಂಡಿ, ಕಲ್ಲುಂದ, ಕಾಹಳ್ಳಿ ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಸಾರ್ವಜನಿಕರಿಂದ ಕುಂದುಕೊರತೆ ಆಲಿಸಿ ಮಾತನಾಡಿದರು.

ವರುಣ ಕ್ಷೇತ್ರದಲ್ಲಿ ಪ್ರತಿಬಾರಿ ಸಿದ್ದರಾಮಯ್ಯರವರನ್ನು ಗೆಲ್ಲಿಸಿಕೊಂಡು ಬರುತ್ತಿದ್ದೀರಿ, ನನ್ನನ್ನೂ ಸಹ ಒಮ್ಮೆ ಆಯ್ಕೆ ಮಾಡಿ ಶಾಸಕನನ್ನಾಗಿ ಮಾಡಿದ್ದೀರಿ. ನಿಮಗೆ ನಾವು ಎಂದಿಗೂ ಚಿರಋಣಿ. 3ನೇ ಬಾರಿಗೆ ಸಿದ್ದರಾಮಯ್ಯರವರನ್ನು ಗೆಲ್ಲಿಸಿದ ಕಾರಣ ಅವರು ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಲು ಸಾಧ್ಯವಾಗಿದೆ. ಆದ್ದರಿಂದ ವರುಣ ಕ್ಷೇತ್ರದ ಜನತೆಯ ಸಮಸ್ಯೆಗಳನ್ನು ಪರಿಹರಿಸುವುದು ನಮ್ಮ ಸರ್ಕಾರದ ಕರ್ತವ್ಯ ಎಂದ ಅವರು, ಕಳೆದ ಬಿಜೆಪಿ ಸರ್ಕಾರದಲ್ಲಿ ಅನುದಾನ ಕಡಿಮೆ ಬಂದಿದ್ದ ಕಾರಣ ನಿರೀಕ್ಷಿತ ಪ್ರಮಾಣದಲ್ಲಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗಲಿಲ್ಲ ಆದರೂ ಸಹ ಸಾಧ್ಯವಾದಷ್ಟು ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ಎಲ್ಲೆಡೆ ಮನೆ ಮಂಜೂರು ಮಾಡಿಕೊಡುವಂತೆ ಮನವಿ ಕೇಳಿ ಬರುತ್ತಿರುವ ಕಾರಣ ವರುಣ ಕ್ಷೇತ್ರಕ್ಕೆ ಹಾಲಿ ಮಂಜೂರಾಗಿರುವ ಮನೆಗಳ ಜೊತೆಗೆ ಹೆಚ್ಚುವರಿಯಾಗಿ ಇನ್ನು 2 ಸಾವಿರ ಮನೆಗಳನ್ನು ಸರ್ಕಾರ ಮಂಜೂರು ಮಾಡುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಬಿಳಿಗೆರೆ ಗ್ರಾಮದಲ್ಲಿ ದೇವಸ್ಥಾನ, ಸಮುದಾಯ ಭವನ, ಚರಂಡಿ, ಜಮೀನಿಗೆ ರಸ್ತೆಗಳು ಬಾಕಿ ಇದೆ ಎಂದು ಗೊತ್ತಿದ್ದು 4 ವರ್ಷಗಳಲ್ಲಿ ಕ್ಷೇತ್ರಕ್ಕೆ ಅವಶ್ಯವಿರುವ ಮತ್ತು ಗ್ರಾಮಸ್ಥರು ಮನವಿ ಮಾಡಿರುವ ಎಲ್ಲಾ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುತ್ತೇನೆ. ಈ ಕ್ಷೇತ್ರ ಮುಖ್ಯಮಂತ್ರಿಗಳ ತವರು ಕ್ಷೇತ್ರವಾಗಿರುವ ಕಾರಣ ಅನುದಾನಕ್ಕೆ ಕೊರತೆಯಾಗುವುದಿಲ್ಲ ಆದ್ದರಿಂದ ನೀವು ಮೂಲ ಸೌಕರ್ಯಗಳ ಬಗ್ಗೆ ಚಿಂತಿಸಬೇಕಿಲ್ಲ ಎಂದರು.

ಈ ಸಂದರ್ಭದಲ್ಲಿ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಬಿಳಿಗೆರೆ ಗ್ರಾಪಂ ಅಧ್ಯಕ್ಷ ಕುಮಾರ್, ಮುಖಂಡರಾದ ಬಿಳಿಗೆರೆ ರವಿ, ಬಿ.ಎಂ.ನಂಜುಂಡ, ಜಯಶೀಲ, ರತ್ನಶೇಖರ್, ಚಂದ್ರಶೇಖರ್ ಉಪಸ್ಥಿತರಿದ್ದರು.

# 160ಕ್ಕೂ ಹೆಚ್ಚು ವಿಕಲಚೇತನರಿಗೆ ತಪಾಸಣೆ




ಸರಗೂರು, ಡಿ.20– ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೋಮವಾರ ವಿಕಲಚೇತನರಿಗೆ ಯುಡಿಐಡಿ ಕಾರ್ಡ್ ವಿತರಣೆ, ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಸುಮಾರು 160ಕ್ಕೂ ಹೆಚ್ಚು ವಿಕಲಚೇತನರನ್ನು ತಪಾಸಣೆ ನಡೆಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳ ಕಚೇರಿ, ನಿಸರ್ಗ ಸಂಸ್ಥೆ, ಜಿಲ್ಲಾ ವಿಕಲಚೇತನರ ಕಲ್ಯಾಣ ಇಲಾಖೆ ವತಿಯಿಂದ ನಡೆದ ಶಿಬಿರಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಅಂಗವಿಕಲತೆ ಅನ್ನೋದು ಬೇಕು ಅಂತ ಪಡೆದುಕೊಳ್ಳುವ ರೋಗವಲ್ಲ. ವಿಕಲಚೇತನರು ಯಾರೂ ಸಹ ಧೈರ್ಯ ಕಳೆದುಕೊಳ್ಳಬಾರದು. ಎಲ್ಲರೂ ಮುಖ್ಯವಾಹಿನಿಗೆ ಬರಬೇಕು. ಹೊಸ ತಾಲೂಕಿನಲ್ಲಿ 1225 ಮಂದಿ ವಿಕಲಚೇತನರಿದ್ದು, ಇದರಲ್ಲಿ 925 ಮಂದಿಗೆ ಯು.ಡಿ.ಐ.ಡಿ. ಕಾರ್ಡ್ ವಿತರಣೆಯಾಗಿದೆ. ಇನ್ನೂ 160ಕ್ಕೂ ಹೆಚ್ಚು ಮಂದಿಗೆ ಯು.ಡಿ.ಐ.ಡಿ. ಕಾರ್ಡ್ ಆಗಬೇಕಾಗಿದೆ. ಹೀಗಾಗಿ ಶಿಬಿರ ಆಯೋಜಿಸಲಾಗಿದ್ದು, ಎಲ್ಲರೂ ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಅಧ್ಯಕ್ಷತೆ ವಹಿಸಿದ್ದರು. ಸಾರ್ವಜನಿಕ ಆಸ್ಪತ್ರೆ ತಜ್ಞ ವೈದ್ಯರಾದ ಡಾ.ಪ್ರಜ್ವಲ್, ಡಾ.ದಿನಕರ್, ಡಾ.ರಾಜಶೇಖರ್, ಡಾ.ಶ್ರೀನಿವಾಸ್ ಮೂರ್ತಿ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಪಾರ್ಥಸಾರಥಿ, ಪಪಂ ಸದಸ್ಯ ವೀರೇಶ್, ನಿಸರ್ಗ ಫೌಂಡೇಶನ್‌ನ ಪ್ರಭು, ಚಿಕ್ಕತಿಮ್ಮನಾಯಕ, ತಾಲೂಕು ಸಂಯೋಜಕ ಎಸ್.ಎಚ್.ದೇವರಾಜು, ಬಸವರಾಜು, ಸಂತೋಷ್, ಚಿನ್ನಪ್ಪ, ಕೆಂಡಗಣ್ಣ, ಇನ್ನಿತರರಿದ್ದರು.

# ಹೆಗ್ಗನೂರು ಶಾಲೆಯಲ್ಲಿ ಕ್ಯಾಲೆಂಡರ್ ಬಿಡುಗಡೆ



ಸರಗೂರು, ಡಿ.20– ಹೆಗ್ಗನೂರು ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಹೆಗ್ಗನೂರು ಕಾಲೋನಿ 2024ನೇ ಸಾಲಿನ ಕ್ಯಾಲೆಂಡರ್‌ನ್ನು ಹೆಗ್ಗನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹೆಚ್.ಎನ್. ಸುಧೀರ್ ಬಿಡುಗಡೆ ಮಾಡಿದರು.

ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಪ್ರಮೀಳಾ ಮಹೇಶ್ ಮತ್ತು ಮಾರಯ್ಯ ಹಾಗೂ SDMC ಅಧ್ಯಕ್ಷ ಸೋಮಶೇಖರ್ ಗೌಡ, ಉಪಾಧ್ಯಕ್ಷೆ ಅನಿತಾ ಶಿವಣ್ಣೇಗೌಡ, ಸದಸ್ಯರಾದ ಯೋಗೇಶ್ ಹೆಚ್.ಎನ್. ಚಿನ್ನಯ್ಯ ಜ್ಯೋತಿ ಚೆಲುವೇಗೌಡ, ಮುಖ್ಯ ಶಿಕ್ಷಕರಾದ ರಾಮೇಗೌಡ ಜಿ.ಎಸ್., ಸಹ ಶಿಕ್ಷಕರಾದ ಆನಂದ ಎಲ್., ಅಜಯ್ ಎಂ.ಬಿ., ಕನಕಕುಮಾರಿ. ಆಶಾ ಹೆಚ್.ಜಿ. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ರಕ್ತದಾನದ ಜಾಗೃತಿ ಮೂಡಿಸುವಲ್ಲಿ ಸಂಘಟನೆಗಳ ಪಾತ್ರ ಮಹತ್ವದ್ದಾಗಿದೆ


## ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಅಭಿಮತ



ಮೈಸೂರು, ಡಿ. 20–ರಕ್ತದಾನದ ಬಗ್ಗೆ ಜನರಲ್ಲಿ ಇನ್ನು ಹೆಚ್ಚಿನ ಜಾಗೃತಿ ಉಂಟಾಗಬೇಕು. ಈ ನಿಟ್ಟಿನಲ್ಲಿ ವಿವಿಧ ಸಂಘಟನೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಕುಮಾರ ಸ್ವಾಮಿ ತಿಳಿಸಿದ್ದಾರೆ. ಮೈಸೂರಿನ ನ್ಯೂ ಸಂಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ರಕ್ತದಾನ ಜಾಗೃತಿ ಒಳಗೊಂಡ 2024ರ ಕ್ಯಾಲೆಂಡರ್ ಅನ್ನು ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಬಿಡುಗಡೆಗೊಳಿಸಿದ ನಂತರ ಮಾತನಾಡಿದ ಅವರು, ಅನೇಕ ಸಂಘಟನೆ ಮತ್ತು ಸರಕಾರೇತರ ಸಂಘಟನೆಗಳ ಶ್ರಮದಿಂದ ಕಳೆದ ದಶಕಗಳಲ್ಲಿ ರಕ್ತದಾನದ ಮಹತ್ವದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿದೆ. ಆದರೆ ಈ ಜಾಗೃತಿ ಇನ್ನೂ ಹೆಚ್ಚು ವ್ಯಾಪಕವಾಗುವ ಅವಶ್ಯಕತೆ ಇದೆ.


ಈ ಹಿಂದಿನ ದಿನಮಾನಗಳಿಗೆ ಹೋಲಿಸಿದಲ್ಲಿ ಕಳೆದ ದಶಕದಲ್ಲಿ ರಕ್ತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿದೆ ಕಾಲೇಜುಗಳ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಕೆಡೆಟ್‌ಗಳಿಗೆ ಸೀಮಿತವಾಗಿದ್ದ ಶಿಬಿರ ಇಂದು ಅನೇಕ ಸರಕಾರೇತರ ಸಂಘಟನೆಗಳು, ಐಟಿಬಿಟಿ ಸಂಸ್ಥೆ ಹಾಗೂ ಖಾಸಗಿ ಕಾರ್ಖಾನೆಗಳಲ್ಲಿ ಸ್ವಯಂ ರಕ್ತದಾನ ಶಿಬಿರ ಆಯೋಜಿಸುತ್ತಿರುವುದು ಶ್ಲಾಘನೀಯ. ಸಂಗೀತ ಆಲಿಸುವುದು, ಪ್ರವಾಸ ಮತ್ತು ಇತರ ಹವ್ಯಾಸಗಳಂತೆ ಇತ್ತೀಚೆಗೆ ನಿಯಮಿತವಾಗಿ ರಕ್ತದಾನ ಮಾಡುವುದು ಸಹ ಕೆಲ ಯುವಕರ ಹವ್ಯಾಸವಾಗಿದೆ. ಈ ಬಗೆಯ ಸಕಾರಾತ್ಮಕ ಬೆಳವಣಿಗೆಗಳು ಆರೋಗ್ಯ ಕ್ಷೇತ್ರದ ಬಹು ದೊಡ್ಡ ಸವಾಲಾಗಿದ್ದ ರಕ್ತದ ಕೊರತೆ ನೀಗಿಸುತ್ತಿವೆ ಎಂದರು.

ಇದೇ ಸಂದರ್ಭದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ರಶ್ಮಿ, ಪ್ರಭು, ಮಹಾಂತೇಶ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರದ ದಿ ಅನಾಥಾಲಯ ಸಂಸ್ಥೆಯ ಅನ್ನಪೂರ್ಣ ನಿಲಯದಲ್ಲಿ ಸಾಹಿತ್ಯ ಸಂಘದ ವಾರ್ಷಿಕೋತ್ಸವ ಅಂಗವಾಗಿ ವಿ. ನಾರಾಯಣರಾವ್ ಸ್ಮರಣಾರ್ಥ ನಡೆದ ರಾಜ್ಯಮಟ್ಟದ ಅಂತರ ಕಾಲೇಜು 28ನೇ ವಾರ್ಷಿಕ ಚರ್ಚಾಸ್ಪರ್ಧೆಯಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ತೃತೀಯ ಬಿ.ಎಸ್ಸಿ ವಿದ್ಯಾರ್ಥಿ ಅನನ್ಯ ಆರ್.ವಿ ಪ್ರಥಮ ಸ್ಥಾನದೊಂದಿಗೆ ಪಾರಿತೋಷಕ ಪದಕ (ರೋಲಿಂಗ್ ಶೀಲ್ಡ್), ರಾಜ್ಯಮಟ್ಟದ ಮೃದಂಗವಾದನ ಸ್ಪರ್ಧೆಯಲ್ಲಿ ದ್ವಿತೀಯ ಬಿಸಿಎ ವಿದ್ಯಾರ್ಥಿ ಧೀಮಂತ ಭಟ್ಟ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ವಿಜೇತರೊಂದಿಗೆ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ ಅವರು ಹಾಗೂ ಸಾಂಸ್ಕೃತಿಕ ಸಂಚಾಲಕ ಡಾ.ಸಿ.ಆರ್.ಮಧುಸೂಧನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

# ಎಂಡಿಸಿಸಿಎ ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಕ್ಯಾಲೆಂಡರ್ ಬಿಡುಗಡೆ



**ಮೈಸೂರು, ಡಿ. 20–** ಎಂಡಿಸಿಸಿಎ ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ಬೋರ್ಡ್ ಆಫ್ ಡೈರೆಕ್ಟರ್ಸ್ "ಸನ್ಮಾರ್ಗಿ" ಮೈಸೂರು ಬಿಷಪ್ ಹೌಸ್‌ನಲ್ಲಿ ಕ್ರೈಸ್ತ ಧರ್ಮ ಕ್ಷೇತ್ರದ ಮೈಸೂರಿನ ಆಡಳಿತಾಧಿಕಾರಿ ಆರ್ಚ್ ಬಿಷಪ್ ಬರ್ನಾಡ್ ಮೋರೆಸ್ ಅವರನ್ನು ಭೇಟಿಯಾಗಿ ಹೂಗುಚ್ಛ ಮತ್ತು ಕೇಕ್ ಅನ್ನು ನೀಡಿ ಕ್ರಿಸ್ಮಸ್ ಹಬ್ಬ ಹಾಗೂ ಹೊಸ ವರ್ಷಕ್ಕೆ ಶುಭಾಶಯ ಕೋರಿದರು. ಇದೇ ಸಂದರ್ಭದಲ್ಲಿ ಎಂಡಿ ಸಿಸಿಎ ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್‌ನ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಆರ್ಚ್ ಬಿಷಪ್ ಬರ್ನಾಡ್ ಮೋರೆಸ್ ಬಿಡುಗಡೆ ಮಾಡಿದರು. ಎಂಡಿಸಿಸಿಎ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್, ಉಪಾಧ್ಯಕ್ಷರು ಎಲ್ವಿನ್, ಕಾರ್ಯದರ್ಶಿ ಅಂಬ್ರಸ್ ಜಾರ್ಜ್, ಸಹ ಕಾರ್ಯದರ್ಶಿ ಮರಿಯಾ ಫ್ರಾನ್ಸಿಸ್, ಖಜಾಂಚಿ ಜಾನ್ ಫರ್ನಾಂಡಿಸ್(ಬೆನ್ನಿ), ಬಾರ್ಬರ ಬೆಯರ್, ಮೈಕಲ್ ಸಗಾಯ್ ರಾಜ್, ಜೋಸೆಫ್ ವ್ಯಾನ್ಯುವಲ್, ಸೈಮನ್ ಉಪಸ್ಥಿತರಿದ್ದರು.

# ನಿನಾದ ಗೃಹ ಸಂಗೀತ ಸರಣಿ: ಶ್ರೀ ಸಾಯಿ ಐಶ್ವರ್ಯ ಮಹಾಶಬ್ದೆ ಗಾಯನ

ಮೈಸೂರು, ಡಿ. 20– ನಿನಾದ ಗೃಹ ಸಂಗೀತ ಮೈಸೂರು ಸರಣಿಯ 12ನೇ ಕಾರ್ಯಕ್ರಮವಾಗಿ ಡಿ. 25ರಂದು ಸಂಜೆ 6 ಗಂಟೆಗೆ ಕೇರ್ಗಳ್ಳಿಯ 'ನಿನಾದ'ದಲ್ಲಿ ಶ್ರೀ ಸಾಯಿ ಐಶ್ವರ್ಯ ಮಹಾಶಬ್ದೆ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ರಂಜನಿ ಮೆಮೋರಿಯಲ್ ಟ್ರಸ್ಟ್ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ತಬಲಾದಲ್ಲಿ ಸಾಗರ್ ಭುತ್‌ರಾಜ್ ಮತ್ತು ಹಾರ್ಮೋನಿಯಂನಲ್ಲಿ ತೇಜಸ್ ಕಾಟೋಟಿ ಸಾಥ್ ನೀಡಲಿದ್ದಾರೆ. ಸಾಯಿ ಐಶ್ವರ್ಯ, ಸಂಗೀತಗಾರರ ಕುಟುಂಬಕ್ಕೆ ಸೇರಿದವರು. ಅವರ ಅಜ್ಜ ಮನೋಹರ ಮಹಾಶಬ್ದೆ ಮತ್ತು ತಂದೆ ದಿಲೀಪ್ ಮಹಾಶಬ್ದೆ ಗಾಯಕರಾಗಿದ್ದರು. ಸಾಯಿ ಐಶ್ವರ್ಯ ಅವರು ಶ್ರೀ ಸತ್ಯಸಾಯಿ ಕಾಲೇಜ್ ಆಫ್ ಮ್ಯೂಸಿಕ್, ಮಿರ್ಪುರಿಯಲ್ಲಿ ಶ್ರೀಮತಿ ಕುಮುದಿನಿ ಮುಂಡ್ಕೂರು ಬಳಿ ಸಂಗೀತಾಭ್ಯಾಸ ನಡೆಸಿದ್ದಾರೆ. ಬಳಿಕ ಕೊಲ್ಕೊತ್ತಾದ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ಪದ್ಮಶ್ರೀ ಪಂ.ಉಲ್ಲಾಸ್ ಕಶಾಲ್‌ಕರ್ ಅವರ ಬಳಿ ಕಲಿಯುವ ಅವಕಾಶ ಅವರಿಗೆ ದೊರಕಿತು. ಸಾಯಿ ಐಶ್ವರ್ಯ ಅವರು ಸಂಸ್ಕೃತಿ ಸಚಿವಾಲಯದಿಂದ ಯುವ ಕಲಾವಿದರಿಗೆ ಕೊಡುವ ವಿದ್ಯಾರ್ಥಿವೇತನವನ್ನು ಪಡೆದಿದ್ದಾರೆ. ಅವರು ಐಟಿಸಿಯ ರೆಸಿಡೆನ್ಶಿಯಲ್ ಸ್ಕಾಲರ್ ಆಗಿದ್ದಾರೆ. ಭೋಪಾಲ್‌ನ ಕಲಾ ಪರಿಷತ್‌ನಿಂದ ಅವರಿಗೆ 'ಕಲ್ ಕೆ ಕಲಾಕಾರ್' ಪ್ರಶಸ್ತಿ ಸಂದಿದೆ.



ಮೈಸೂರು ತಾಲೂಕು ಕಡಕೊಳ ಗ್ರಾಮದಲ್ಲಿ ನಡೆದ ತುರುವಿನ ಜಾತ್ರೆಗೆ ಪಟ್ಟಣ ಪಂಚಾಯಿತಿಯಿಂದ ವಿವಿಧ ಸೌಕರ್ಯಗಳನ್ನು ಒದಗಿಸಿ, ಜಾತ್ರೆ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಕಡಕೊಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ದೀಪಾ ಅವರನ್ನು ಕಡಕೊಳ ಗ್ರಾಮದ ಮುಖಂಡರು ಸನ್ಮಾನಿಸಿದರು.

# ಸೂರಜ್ ರೇವಣ್ಣಗೆ ಬಿಗ್ ರಿಲೀಫ್

## ಎಂಎಲ್‌ಸಿ ಸ್ಥಾನದಿಂದ ಅನರ್ಹಗೊಳಿಸುವಂತೆ ಸಲ್ಲಿಸಿದ್ದ ಅರ್ಜಿ ವಜಾ



**ನವದೆಹಲಿ:** ಎಂಎಲ್‌ಸಿ ಸೂರಜ್ ರೇವಣ್ಣಗೆ ಬಿಗ್ ರಿಲೀಫ್ ದೊರೆತಿದ್ದು, ಎಂಎಲ್‌ಸಿ ಸ್ಥಾನದಿಂದ ಅನರ್ಹಗೊಳಿಸುವಂತೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ದೂರುದಾರ ವಕೀಲ ದೇವರಾಜೇಗೌಡ ಅರ್ಜಿ ಸಲ್ಲಿಕೆ ಮಾಡಿದ್ದರು. ಇದೀಗ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಪೀಠ ಅರ್ಜಿಯನ್ನು ವಜಾಗೊಳಿಸಿದೆ. ಲೋಕಸಭೆ ಚುನಾವಣೆಯಲ್ಲಿ ಅಕ್ರಮ ನಡೆಸಿದ್ದ ಆರೋಪದಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಚುನಾವಣಾ ಅಕ್ರಮದ ಕಾರಣಕ್ಕೆ ಸೂರಜ್ ರೇವಣ್ಣ ಅವರನ್ನು ಎಂಎಲ್‌ಸಿ ಸ್ಥಾನದಿಂದ ವಜಾಗೊಳಿಸಲು ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು. ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಪೀಠದಿಂದ ಆದೇಶ ಹೊರಡಿಸಲಾಗಿದೆ.

# ಈಡಿಗ ಸಮಾಜದಿಂದ ಮೈಸೂರಲ್ಲಿ ಪ್ರತಿಭಟನೆ

## ಬ್ರಹ್ಮಶ್ರೀ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಬಿಡುಗಡೆಗೆ ಆಗ್ರಹ



ಮೈಸೂರು, ಡಿ.20(ಜಿಎ)–ಬ್ರಹ್ಮಶ್ರೀ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಷ್ಟ್ರೀಯ ಈಡಿಗ ಮಹಾಮಂಡಳಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಉಪವಾಸ ಸತ್ಯಾಗ್ರಹ ನಡೆಸಲಾಯಿತು.

ಒಂದು ದಿನದ ಉಪವಾಸ ಸತ್ಯಾಗ್ರಹ ನೇತೃತ್ವ ವಹಿಸಿದ್ದ ಶ್ರೀ ಪ್ರಣವಾನಂದರಾಮ ಸ್ವಾಮಿ ಮಾತನಾಡಿ, ಹಿಂದಿನ ಸರ್ಕಾರ ಘೋಷಣೆ ಮಾಡಿದಂತೆ ಬ್ರಹ್ಮಶ್ರೀ ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ ಕೂಡಲೇ 500 ಕೋಟಿ ರೂ. ಬಿಡುಗಡೆ ಮಾಡಬೇಕು. ಕೂಡಲೇ ಈಡಿಗ ಸಮಾಜದ ಕುಲಶಾಸ್ತ್ರ ಅಧ್ಯಯನ ಮಾಡಿ, ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಕುಲಕಸುಬು ಕಳೆದುಕೊಂಡ ಈ ಸಮಾಜಕ್ಕೆ ಮರಳಿ ಕಸುಬು ನೀಡಬೇಕು. ಇಲ್ಲವಾದಲ್ಲಿ ಕಸುಬು ಕಳೆದುಕೊಂಡ ಪ್ರತಿ ಕುಟುಂಬಕ್ಕೂ ಎರಡು ಎಕರೆ ಜಮೀನು ಮಂಜೂರು ಮಾಡಬೇಕು. ರಾಜ್ಯದಲ್ಲಿ ಈಡಿಗ, ಬಿಲ್ಲವ, ನಾಮಧಾರಿ, ದೀವರ ಸಮಾಜದಲ್ಲಿ ಅತಿ ನಿರ್ಗತಿಕರಿಗೆ ಮನೆ ಹಾಗೂ ನಿವೇಶನಗಳಿಲ್ಲದ ಕುಟುಂಬಗಳಿಗೆ ಯಾವುದಾದರೂ ಯೋಜನೆ ಅಡಿಯಲ್ಲಿ 25 ಸಾವಿರ ಮನೆಗಳನ್ನು ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು.

ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿಯನ್ನು ವಿಧಾನಸೌಧದ ಮುಂಭಾಗ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾಪಿಸಬೇಕು. ಸಮುದಾಯದ ಶರಣ ಶ್ರೀ ಹೆಂಡದ ಮಾರಯ್ಯನ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕು. ಈಡಿಗ ಬಿಲ್ಲವ, ನಾಮಧಾರಿ, ದೀವರ, ಸಮಾಜದ ಮಹಿಳೆಯರ ಸ್ವಯಂ ಉದ್ಯೋಗಕ್ಕಾಗಿ ಶೂನ್ಯ ಬಡ್ಡಿಯಲ್ಲಿ ಸಾಲ ನೀಡಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಯುವಕರುಗಳಿಗೆ ಉನ್ನತ ಶಿಕ್ಷಣಕ್ಕಾಗಿ ಐಪಿಎಸ್, ಐಎಎಸ್ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಮಂಗಳೂರು–ಉಡುಪಿ–ಶಿವಮೊಗ್ಗ ಜಿಲ್ಲೆಗಳಲ್ಲಿ ನಮ್ಮ ಸಮಾಜಕ್ಕೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕು. ಮಂಗಳೂರಿನ ಕೋಟಿ ಚೆನ್ನಯ್ಯ ದೇವಸ್ಥಾನಕ್ಕೆ 2016ರಲ್ಲಿ ಘೋಷಣೆ ಮಾಡಿದ ಸಂಪೂರ್ಣ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಸರ್ಕಾರಿ ಹುಲ್ಲುಗಾವಲು, ಗೋಮಾಳ, ಜಮೀನುಗಳಲ್ಲಿ ಸರ್ಕಾರಿ ವೆಚ್ಚದಲ್ಲಿ ಈಚಲು ಮರಗಳನ್ನು ಬೆಳೆಸಬೇಕು. ನೀರಾ ಮಾರಾಟಕ್ಕಾಗಿ ರಾಜ್ಯಾದ್ಯಂತ ನಿಗಮ ಸ್ಥಾಪಿಸಬೇಕು. ಮದ್ಯ ಮಾರಾಟದಲ್ಲಿ ನಮ್ಮ ಸಮಾಜಕ್ಕೆ ಶೇ.20 ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘಟನಾ ಕಾರ್ಯದರ್ಶಿ ಎ.ವೈ.ವಸಂತ್ ಕುಮಾರ್, ಸಂತೋಷ್ ಕುಮಾರ್, ಪಿ.ವಾಸು, ಕೃಷ್ಣ, ರಘು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

# ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್



**ಬೆಂಗಳೂರು:** ವಿಧಾನಸಭೆ ಚುನಾವಣೆಗೂ ಮುನ್ನ ರಾಜ್ಯದಲ್ಲಿ ಭಾರೀ ಸದ್ದು ಮಾಡಿದ್ದ ಬಿಜೆಪಿ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ(ಕೆಎಸ್ ಡಿಎಲ್) ಟೆಂಡರ್‌ಗಾಗಿ ಲಂಚ ಪಡೆದ ಪ್ರಕರಣವನ್ನು ಕರ್ನಾಟಕ ಹೈಕೋರ್ಟ್ ಬುಧವಾರ ರದ್ದುಗೊಳಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಮಾಡಾಳ್ ವಿರೂಪಾಕ್ಷಪ್ಪ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠ, ಸ್ಪೀಕರ್ ಅನುಮತಿ ಪಡೆಯದೇ ಲೋಕಾಯುಕ್ತ ಪೊಲೀಸರಿಂದ ತನಿಖೆ ನಡೆಸಲಾಗಿದೆ ಎಂಬ ತಾಂತ್ರಿಕ ಕಾರಣದಿಂದ ಪ್ರಕರಣ ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಮಾಡಾಳ್ ವಿರೂಪಾಕ್ಷಪ್ಪ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ್ ನಾವದಗಿ ಅವರು, ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ತಡೆ ಕಾಯ್ದೆ ಸೆಕ್ಷನ್–17A ಪ್ರಕಾರ ಪ್ರಕ್ರಿಯೆ ಪಾಲಿಸಿಲ್ಲ ಮತ್ತು ತನಿಖೆಗೆ ಸ್ಪೀಕರ್ ಅನುಮತಿ ಪಡೆದಿಲ್ಲ ಎಂದು ಹೇಳಿದರು. ಆರೋಪಿ ಪರ ವಕೀಲರ ವಾದ ಪುರಸ್ಕರಿಸಿದ ಹೈಕೋರ್ಟ್, ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧದ ಪ್ರಕರಣ ರದ್ದುಗೊಳಿಸಿದೆ.

ಮಾಡಾಳ್ ಅವರ ಪುತ್ರ ಕೆಎಎಸ್ ಅಧಿಕಾರಿ ಪ್ರಶಾಂತ್ ಮಾಡಾಳ್ ಅವರು ತಂದೆಯ ಪರವಾಗಿ ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು. ಬಳಿಕ ಶಾಸಕರ ಕಚೇರಿ ಮತ್ತು ಮನೆಯಲ್ಲಿ 8 ಕೋಟಿ ರೂಪಾಯಿ ಹೆಚ್ಚು ನಗದು ಪತ್ತೆಯಾಗಿತ್ತು. ಇದರಿಂದ ಅಧಿಕಾರದಲ್ಲಿದ್ದ ಬಿಜೆಪಿಗೆ ಭಾರೀ ಮುಖಭಂಗವಾಗಿತ್ತು.

# ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಮಹಿಳೆಯ ಸರ ಕಿತ್ತುಕೊಂಡು ಪರಾರಿಯಾದ ಖದೀಮರು!

## ಮೈಸೂರಿನ ರಿಂಗ್ ರಸ್ತೆಯಲ್ಲಿ ಆಘಾತಕಾರಿ ಘಟನೆ



ಮೈಸೂರು, ಡಿ.20–ಸ್ಕೂಟರ್‌ನಲ್ಲಿ ಹಿಂಬದಿ ಸವಾರಳಾಗಿ ತೆರಳುತ್ತಿದ್ದ ಕಾರ್ಖಾನೆಯೊಂದರ ಮಹಿಳಾ ಕಾರ್ಮಿಕಳ ಮಾಂಗಲ್ಯ ಸರವನ್ನು ಸರಗಳ್ಳರು ಕಿತ್ತುಕೊಂಡು ಹೋದ ಘಟನೆ ಮೈಸೂರಿನ ರಿಂಗ್ ರಸ್ತೆಯ ಕಲ್ಯಾಣಿ ಹೋಟೆಲ್ ಮುಂಭಾಗ ನಡೆದಿದೆ. ಮೈಸೂರಿನ ಮಾದೇಗೌಡ ಸರ್ಕಲ್ ನಿವಾಸಿ ಎನ್.ಎಸ್.ಭಾಗ್ಯ (40) ಸರ ಕಳೆದುಕೊಂಡವರಾಗಿದ್ದು, ಇವರು ತಾವು ಕೆಲಸ ಮಾಡುತ್ತಿದ್ದ ಹೆಬ್ಬಾಳ್ ಕೈಗಾರಿಕಾ ಪ್ರದೇಶದ ಎಕ್ಸೆಲ್ ಫಾರ್ ಎಲೆಕ್ಟ್ರಾನಿಕ್ ಕಂಪನಿಯಿಂದ ಸಹೋದ್ಯೋಗಿ ಲಕ್ಷ್ಮಿ ಎಂಬುವವರ ಆಕ್ಟೀವಾ ಹೋಂಡಾ ಸ್ಕೂಟರ್‌ನಲ್ಲಿ (ಕೆಎ 55 ಎಲ್ 0117) ಡಿ.17ರಂದು ಸಂಜೆ 5.50ರ ಸುಮಾರಿನಲ್ಲಿ ರಿಂಗ್ ರಸ್ತೆಯ ಕಲ್ಯಾಣಿ ಹೋಟೆಲ್ ಮುಂಭಾಗ ಬರುತ್ತಿದ್ದಾಗ ನಂಬರ್ ಪ್ಲೇಟ್ ಇಲ್ಲದ ಸ್ಕೂಟರ್‌ನಲ್ಲಿ ಬಂದ ಇಬ್ಬರು ಖದೀಮರ ಪೈಕಿ ಹಿಂಬದಿ ಸವಾರ ಭಾಗ್ಯ ಅವರ ಕತ್ತಿನಲ್ಲಿದ್ದ 35 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತರಳಬಾಳು ಶಿಕ್ಷಣ ಕೇಂದ್ರದ ವಾರ್ಷಿಕೋತ್ಸವ

ಮೈಸೂರು, ಡಿ. 20– ಮೈಸೂರಿನ ಟಿ.ಕೆ. ಬಡಾವಣೆಯಲ್ಲಿರುವ ತರಳಬಾಳು ಶಿಕ್ಷಣ ಕೇಂದ್ರದಲ್ಲಿ ಡಿ. 22 ರಂದು ಬೆಳಗ್ಗೆ 9.30ಕ್ಕೆ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳೇ ಸಿದ್ಧಪಡಿಸಿದ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ. ಇಸ್ರೋ ನಿವೃತ್ತ ಪರಿಸರ ವಿಜ್ಞಾನ ಡಾ.ವಿ. ಜಗನ್ನಾಥ್ ವಸ್ತುಪ್ರದರ್ಶನ ಉದ್ಘಾಟಿಸುವರು. ವಸ್ತು ಪ್ರದರ್ಶನ ವೀಕ್ಷಿಸಲು ಬೆ.11 ರಿಂದ ಮ. 3 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಡಿ.24ರಂದು ಬೆಳಗ್ಗೆ 9.30ಕ್ಕೆ ಕಲಾ ಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಹಾಗೂ ಸಾಕ್ಷರತಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ. ಪಾಂಡು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸುವರು. ಸಂಜೆ 4ಕ್ಕೆ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭದ ಮುಖ್ಯ ಅತಿಥಿಗಳಾಗಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ.ಮರಿಸ್ವಾಮಿ ಭಾಗವಹಿಸಲಿದ್ದು, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಸಮಾರೋಪ ಭಾಷಣ ಮಾಡುವರು. ತರಳಬಾಳು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ. ನಾಗೇಂದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

# ಡಿ.23, ಮೈಸೂರಲ್ಲಿ ಒಡಿಸ್ಸಿ ಉತ್ಸವ



ಮೈಸೂರು, ಡಿ.20(ಜಿಎ)–ಭುವನೇಶ್ವರದ ಅಂತಾರಾಷ್ಟ್ರೀಯ ಒಡಿಸ್ಸಿ ಸಂಸ್ಥೆ ವತಿಯಿಂದ ಡಿ.23ರಂದು ಸಂಜೆ 6ಕ್ಕೆ ಮೈಸೂರಿನ ರಾಮಕೃಷ್ಣ ನಗರದ ರಮಾ ಗೋವಿಂದ ಸಭಾಂಗಣದಲ್ಲಿ ಒಡಿಸ್ಸಿ ಉತ್ಸವ ಆಯೋಜಿಸಲಾಗಿದೆ ಎಂದು ನೃತ್ಯಗುರು ಸಿಂಧು ಕಿರಣ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಉತ್ಸವದಲ್ಲಿ ದೇಶದ ವಿವಿಧೆಡೆ ಗಳಿಂದ ಆಗಮಿಸುವ ಖ್ಯಾತ ಒಡಿಸ್ಸಿ ನೃತ್ಯ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ಪುರಿಜಗನ್ನಾಥ ಸಾಂಸ್ಕೃತಿಕ ಹಾಗೂ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಘನಶ್ಯಾಮ ಪ್ರಧಾನ್, ನಗರದ ಶ್ರೀಕೃಷ್ಣ ಸೇವಾ ಸಮಿತಿಯ ಕಾರ್ಯದರ್ಶಿ ಭಾರತಿ ಶ್ರೀಧರ ರಾಜ ಅರಸ್, ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಬಿ.ಪಿ.ಮೂರ್ತಿ ಇನ್ನಿತರರು ಅತಿಥಿಗಳಾಗಿರುವರು. ಈ ಭಾಗದಲ್ಲಿಯೂ ಒಡಿಸ್ಸಿ ಜನಪ್ರಿಯಗೊಳಿಸಲು ಈ ಒಡಿಸ್ಸಿ ಉತ್ಸವ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪತ್ರಕರ್ತ ವೈದ್ಯನಾಥ್ ಉಪಸ್ಥಿತರಿದ್ದರು.

# ಡಿ.23ಕ್ಕೆ ಮೈಸೂರಲ್ಲಿ 'ಮಾದಿಗರ ಮುನ್ನಡೆ' ಸಮಾವೇಶ

## ಇದು ರಾಜಕೀಯ ಸಭೆಯಲ್ಲ. ಸಮುದಾಯದ ಸಭೆ: ಕೋಟೆ ಎಂ.ಶಿವಣ್ಣ



ಮೈಸೂರು, ಡಿ.20(ಜಿಎ)–ಮೈಸೂರಿನ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪ ದಲ್ಲಿ ಡಿ.23ರಂದು ಬೆಳಗ್ಗೆ 10.30ಕ್ಕೆ 'ಮಾದಿಗರ ಮುನ್ನಡೆ' ಜಿಲ್ಲಾ ಮಟ್ಟದ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಕೋಟೆ ಎಂ. ಶಿವಣ್ಣ ತಿಳಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ತಿಂಗಳ 29 ರಂದು 31 ಜಿಲ್ಲೆಗಳ ಮಾದಿಗ ಸಮುದಾಯದ ಮುಖಂಡರು ಪಾಲ್ಗೊಂಡಿದ್ದ ಬೃಹತ್ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಜಿಲ್ಲಾ ಮಟ್ಟದ ಸಮಾವೇಶ ನಡೆಯುತ್ತಿದೆ ಎಂದರು.

ಸಮಾವೇಶದಲ್ಲಿ ಚಿತ್ರದುರ್ಗದ ಬಸವ ಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಸಿ.ರಮೇಶ್, ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್.ಅನಿಲ್‌ಕುಮಾರ್ ಹಾಗೂ ರಾಜ್ಯ ಮಟ್ಟದ ಐವರ ತಂಡ ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದು, ಇದು ರಾಜಕೀಯ ಪಕ್ಷದ ಸಭೆಯಲ್ಲ. ಸಮುದಾಯದ ಸಭೆ ಆಗಿದೆ. ಆದ್ದರಿಂದ ಸಮುದಾಯದವರು ಪಕ್ಷಾತೀತವಾಗಿ ಆಗಮಿಸಬೇಕೆಂದು ಮನವಿ ಮಾಡಿದರು.

ರಾಜ್ಯದಲ್ಲಿ ಪರಿಶಿಷ್ಟ ಸಮುದಾಯದವರ ಸಂಖ್ಯೆ 1.4 ಕೋಟಿಗಳಷ್ಟಿದೆ. ಇದರಲ್ಲಿ ಮಾದಿಗ ಮತ್ತು ಉಪ ಜಾತಿಗಳು ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ತೀರಾ ಹಿಂದುಳಿದಿವೆ. ಆದ್ದರಿಂದ 101 ಪರಿಶಿಷ್ಟ ಜಾತಿಗಳಲ್ಲಿ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ನೀಡಬೇಕೆಂದು ನಡೆಸಿದ ಹೋರಾಟದ ಫಲವಾಗಿ ಎಸ್.ಎಂ. ಕೃಷ್ಣ ಅವರು ಸಿಎಂ ಅವಧಿಯಲ್ಲಿ ಸದಾಶಿವ ಆಯೋಗ ರಚನೆ ಮಾಡಲಾಯಿತು. ನಂತರ ಬಿ.ಎಸ್. ಯಡಿಯೂರಪ್ಪ ಇದಕ್ಕೆ 11 ಕೋಟಿ ಅನುದಾನ ನೀಡಿದರು. ಸದಾನಂದಗೌಡ ಸಿಎಂ ಆಗಿದ್ದಾಗ ವರದಿ ಸಲ್ಲಿಕೆ ಆಯಿತು. ಬಳಿಕ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದ ವೇಳೆ ಕೆಲವರ ಒತ್ತಡದಿಂದ ವರದಿಗೆ ಅಸಡ್ಡೆ ತೋರಲಾಯಿತೆಂದು ಆರೋಪಿಸಿದರು.

ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದ ವೇಳೆ ಪರಿಶಿಷ್ಟ ಜಾತಿಯ ಮೀಸಲಾತಿ ಶೇ.15 ರಿಂದ 17ಕ್ಕೆ ಏರಿಸಿ ಕೇಂದ್ರಕ್ಕೆ ಶಿಫಾರಸು ಮಾಡಿದರು. ಆದರೆ ತಮ್ಮನ್ನು ಎಸ್‌ಸಿ ಪಟ್ಟಿಯಿಂದ ತೆಗೆದು ಹಾಕಲಾಗುತ್ತದೆ ಎಂಬ ತಪ್ಪು ಗ್ರಹಿಕೆಯಿಂದ ಲಂಬಾಣಿ, ಕೊರಮ, ಕೊರಚ ಸಮುದಾಯಗಳು ವಿರೋಧಿಸುತ್ತಿವೆ. ಇದು ಸರಿಯಲ್ಲ. ಈ ಎಲ್ಲ ಅಂಶಗಳ ಬಗ್ಗೆ ನಗರದಲ್ಲಿ ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ವಕೀಲ ಅರುಣ್‌ಕುಮಾರ್ ಅರಕಲವಾಡಿ ನಾಗೇಂದ್ರ, ದಾಸಯ್ಯ, ಉಡಾ ನಾಗರಾಜು ಉಪಸ್ಥಿತರಿದ್ದರು.

# ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ಘಟಕ ಡಿ.23ಕ್ಕೆ ಉದ್ಘಾಟನೆ

ಮೈಸೂರು, ಡಿ.20(ಜಿಎ)–ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಘಟಕದ ಉದ್ಘಾಟನಾ ಸಮಾರಂಭ ಡಿ.23ರ ಸಂಜೆ 5ಕ್ಕೆ ಸ್ಟರ್ಲಿಂಗ್ ಚಿತ್ರಮಂದಿರ ರಸ್ತೆಯ ಎಂಬಿಸಿಟಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಕವಿ ಜಯಪ್ಪ ಹೊನ್ನಾಳಿ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ ವೈ.ಕೆ. ಮುದ್ದುಕೃಷ್ಣ ಉದ್ಘಾಟಿಸುವರು, ಘಟಕದ ನೂತನ ಅಧ್ಯಕ್ಷ ನಾಗರಾಜ್ ವಿ.ಬೈರಿ ಅಧ್ಯಕ್ಷತೆ ವಹಿಸುವರು. ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಬಿ.ವಿ.ಪ್ರವೀಣ್, ಪ್ರಶಾಂತ್ ಉಡುಪ, ಕೆ.ಟಿ. ಹನುಮಂತು, ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಡೇವಿಡ್ ಪ್ರತಿಭಾಂಜಲಿ, ಎ.ಡಿ. ಶ್ರೀನಿವಾಸ್, ಎನ್. ನಾಗರಾಜು ವೇದಿಕೆಯಲ್ಲಿರುವರು. ಅನಕ್ಷರಸ್ಥರಿಗೂ ಕವಿ, ಕಾವ್ಯವನ್ನು ಸಹಜ, ಸುಂದರವಾಗಿ, ಸುಲಭವಾಗಿ ಜೊತೆಗೆ ಅತ್ಯಂತ ಪರಿಣಾಮಕಾರಿಯಾಗಿ ತಲುಪಿಸುವ ಕೆಲಸ ಸಂಸ್ಥೆ ಮಾಡುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಖೆ ಅಧ್ಯಕ್ಷ ನಾಗರಾಜ್ ವಿ.ಬೈರಿ, ಡೇವಿಡ್ ಪ್ರತಿಮಾಂಜಲಿ, ಉಮೇಶ್, ಗಣೇಶ್‌ಭಟ್ ಉಪಸ್ಥಿತರಿದ್ದರು.

# ಸಂಸದರ ಅಮಾನತು ಖಂಡಿಸಿ ಮೈಸೂರಲ್ಲಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪ್ರತಿಭಟನೆ




ಮೈಸೂರು, ಡಿ.20(ಜಿಎ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 141 ವಿಪಕ್ಷದ ಸಂಸದರನ್ನು ಅಮಾನತುಗೊಳಿಸಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದೆ ಎಂದು ಆರೋಪಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಲೋಕಸಭೆಯ ಸುಮಾರು ಶೇ.70 ವಿರೋಧ ಪಕ್ಷದ ಚುನಾಯಿತ ಪ್ರತಿನಿಧಿಗಳನ್ನು ಅಮಾನತು ಮಾಡಿರುವ ಕ್ರಮ ನಿರಂಕುಶ ಪ್ರಭುತ್ವದ ಪರಮಾವಧಿ ಮತ್ತು ಪ್ರಜಾಪ್ರಭುತ್ವದ ಹತ್ಯೆ. ದೇಶದ ಅತಿದೊಡ್ಡ ಪಂಚಾಯತ್ ಎಂದು ಕರೆಯಲ್ಪಡುವ ಸಂಸತ್ತಿನ ಒಳಗೆ ನಿರಾಯಾಸವಾಗಿ ಅಪರಿಚಿತರು ಪ್ರವೇಶ ಮಾಡಿ ಹೊಗೆ ಬಾಂಬ್ ಸ್ಫೋಟಿಸಿರುವುದು ಮೋದಿ ಸರ್ಕಾರದ ವೈಫಲ್ಯ. ಆ ಕುರಿತು ಸಂಸತ್ತಿನಲ್ಲಿ ದೇಶದ ಗೃಹಮಂತ್ರಿ ಹೇಳಿಕೆ ನೀಡಬೇಕಾದ್ದು ಅವರ ಪ್ರಾಥಮಿಕ ಕರ್ತವ್ಯ. ಆದರೆ, ಸರ್ವಾಧಿಕಾರಿ ಧೋರಣೆಯ ಈ ಸರ್ಕಾರ ಹೇಳಿಕೆ ನೀಡುವ ಬದಲು ಈ ವಿಚಾರದಲ್ಲಿ ಸಂಸತ್‌ನಲ್ಲಿ ಚರ್ಚೆಗೆ ಒತ್ತಾಯಿಸಿದ ವಿಪಕ್ಷದ ಸಂಸದರನ್ನು ಅಮಾನತು ಮಾಡುವ ಮೂಲಕ ವಿಪಕ್ಷದ ಬಾಯಿಯನ್ನು ಮಾತ್ರವಲ್ಲ, ಇಡೀ ದೇಶದ ಬಾಯಿ ಮುಚ್ಚಿಸುವ ಪ್ರಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು. ಇದು ದೇಶದಲ್ಲಿ ಅಘೋಷಿತ ತುರ್ತುಸ್ಥಿತಿಯ ವಾತಾವರಣ ಹಾಗೂ ಮೋದಿ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನಡೆಯನ್ನು ತೋರಿಸುತ್ತದೆ.

ಸದನದಲ್ಲಿ ಬಹುತೇಕ ಎಲ್ಲ ವಿಪಕ್ಷ ಸದಸ್ಯರು ಅಮಾನತಾಗಿ ಹೊರಗುಳಿದಿರುವ ಸಂದರ್ಭದಲ್ಲಿ ಭಾರತದ ನ್ಯಾಯ ಸಂಹಿತೆಗಳನ್ನು ಮರು ವ್ಯಾಖ್ಯಾನ ಮಾಡುವಂತಹ ಬಹುಮುಖ್ಯ ಕಾಯಿದೆಯನ್ನು ಮಂಡಿಸಿ ಅದನ್ನು ಅಂಗೀಕರಿಸುವ ಸಂಚು ಮಾಡಲಾಗಿದೆ. ಈ ಅಮಾನತುಗಳ ಹಿಂದೆ ಈ ಮಸೂದೆಗೆ ಎದುರಾಗಬಹುದಾದ ಆಕ್ಷೇಪಣೆ ಮತ್ತು ವಿರೋಧವನ್ನು ಇಲ್ಲವಾಗಿಸುವುದೇ ಆಗಿದೆ. ಬಿಜೆಪಿ ಮತ್ತು ಮೋದಿಯವರು ತಮ್ಮ ಈ ಸಂವಿಧಾನ ವಿರೋಧಿ ನಡವಳಿಕೆಯನ್ನು ತಿದ್ದಿಕೊಂಡು ವಿಪಕ್ಷದ ಎಲ್ಲ ಸದಸ್ಯರ ಅಮಾನತು ವಾಪಸ್ ಪಡೆದು ಪ್ರಜಾಪ್ರಭುತ್ವದ ಗೌರವವನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ರಫತ್ ಖಾನ್, ಮಾಜಿ ನಗರ ಪಾಲಿಕೆ ಸದಸ್ಯ ಸ್ವಾಮಿ, ದಸಂಸ ಚೋರನಹಳ್ಳಿ ಶಿವಣ್ಣ, ಶಫಿವುಲ್ಲಾ ಮನ್ಸೂರ್ ಖಾನ್, ಅಲ್ತಾಫ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

## ಜ.26ರಿಂದ ರಾಜಾಸೀಟ್‌ನಲ್ಲಿ ಫಲಪುಷ್ಪ ಪ್ರದರ್ಶನ

ಮಡಿಕೇರಿ, ಡಿ.20–ನಗರದ ರಾಜಸೀಟ್ ಉದ್ಯಾನದಲ್ಲಿ ಜ.26ರಿಂದ ಮೂರು ದಿನ ಫಲಪುಷ್ಪ ಪ್ರದರ್ಶನ ಆಯೋಜಿಸಲು ರಾಜಸೀಟ್ ಅಭಿವೃದ್ಧಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ರಾಜಸೀಟ್ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಮಾತನಾಡಿದ ಡಿಸಿ ವೆಂಕಟ್‌ರಾಜಾ, ಮಡಿಕೇರಿಗೆ ಭೇಟಿ ನೀಡುವ ಪ್ರತಿ ಪ್ರವಾಸಿಗರು ರಾಜಾಸೀಟ್‌ಗೆ ಆಗಮಿಸಲಿದ್ದಾರೆ. ಆದ್ದರಿಂದ ರಾಜಾಸೀಟ್ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕಿದೆ. ಆ ನಿಟ್ಟಿನಲ್ಲಿ ಅಗತ್ಯ ಮೂಲಸೌಕರ್ಯ ಒದಗಿಸುವುದು ಸೇರಿದಂತೆ ಮತ್ತಿತರ ಸಂಬಂಧ ವಿಶೇಷ ಗಮನಹರಿಸುವಂತೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಿಗೆ ಸೂಚಿಸಿದರು.

ರಾಜಾಸೀಟ್ ಮಾರ್ಗ ರಸ್ತೆಯನ್ನು ಸರಿಪಡಿಸಬೇಕು. ರಾಜಾಸೀಟ್ ಉದ್ಯಾನದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುವ ನೀರು ಪೂರೈಕೆ ಮತ್ತು ಲೈಟಿಂಗ್ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ರಾಜಾಸೀಟ್‌ನ ಫೌಂಟೇನ್ (ಕಾರಂಜಿ) ಅನ್ನು ಉತ್ತಮವಾಗಿ ನಿರ್ವಹಣೆ ಮಾಡುವಂತೆ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಎಚ್.ಆರ್.ಯೋಗೇಶ್ ಮಾತನಾಡಿ, ಫಲಪುಷ್ಪ ಪ್ರದರ್ಶನ ಏರ್ಪಡಿಸುವ ಸಂಬಂಧ ಕೊಡಗು ಜಿಲ್ಲೆಯ ಕಲೆ, ಸಂಸ್ಕೃತಿ, ಪರಿಸರ ಮತ್ತಿತರ ವಿಷಯಗಳ ಕುರಿತು ಮಾಹಿತಿ ನೀಡಬಹುದು ಎಂದರು. ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಅನಿತಾ ಭಾಸ್ಕರ್ ರಾಜಾಸೀಟ್ ಮುಂಭಾಗದ ರಸ್ತೆಬದಿ ರೈಲಿಂಗ್ಸ್ ನಿರ್ಮಾಣ ಹಾಗೂ ರಾಜಾಸೀಟ್ ಬಳಿ ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳ ಸಂಬಂಧ ಮಾಹಿತಿ ಫಲಕ ಅಳವಡಿಸುವುದು ಅಗತ್ಯ ಎಂದು ತಿಳಿಸಿದರು. ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮುತ್ತಪ್ಪ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಸಿದ್ದೇಗೌಡ, ಕೆಆರ್‌ಐಡಿಎಲ್ ಕಾರ್ಯಪಾಲಕ ಇಂಜಿನಿಯರ್ ಸುರೇಶ್, ಜಿಪಂ ಸಹಾಯಕ ಕಾರ್ಯದರ್ಶಿ ಜೀವನ್ ಕುಮಾರ್, ನಗರಸಭೆ ಪರಿಸರ ಇಂಜಿನಿಯರ್ ಸೌಮ್ಯ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್ ಇತರರು ಇದ್ದರು.

## ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

ಕುಶಾಲನಗರ, ಡಿ.20–ಜೀವನದಲ್ಲಿ ಜಿಗುಪ್ಸೆಗೊಂಡು ವ್ಯಕ್ತಿಯೊಬ್ಬ ಮರಕ್ಕೆ ನೇಣು ಬಿಗಿದುಗೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಇಲ್ಲಿನ ಕಾವೇರಿ ನಿಸರ್ಗಧಾಮದ ಕಾವೇರಿ ನದಿ ಮಧ್ಯದ ಗುಡ್ಡದಲ್ಲಿ ನಡೆದಿದೆ.

ಮೂಲತಃ ಚಾಮರಾಜನಗರದ ಸತ್ಯರಾಜ್ (21) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಸುಂಟಿಕೊಪ್ಪದ ಬೇಕರಿಯೊಂದರಲ್ಲಿ ಕಲಸ ಮಾಡುತ್ತಿದ್ದ. ಆದರೆ, ಈತ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿರುತ್ತಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಮೋಹನ್ ರಾಜ್ ಸ್ಥಳಕ್ಕೆ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಬೈಕ್‌ಗಳ ಮುಖಾಮುಖಿ ಡಿಕ್ಕಿ: ಉದ್ಯಮಿ ಸಾವು

ಕುಶಾಲನಗರ, ಡಿ.20–ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಉದ್ಯಮಿ ಮೃತಪಟ್ಟಿರುವ ಘಟನೆ ಸಮೀಪದ ತೊರೆನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಳುವಾರ ಗ್ರಾಮದ ಬಳಿ ಮಂಗಳವಾರ ರಾತ್ರಿ ನಡೆದಿದೆ.



ಕುಶಾಲನಗರದ ಥಾಮಸ್ ಮ್ಯಾಥ್ಯೂ (50) ಮೃತಪಟ್ಟಿದ್ದು, ಈತ ಸಿದ್ದಲಿಂಗಪುರದಲ್ಲಿರುವ ತಮ್ಮ ಮದ್ಯದ ಅಂಗಡಿಯನ್ನು ಮುಚ್ಚಿ ದ್ವಿಚಕ್ರ ವಾಹನದಲ್ಲಿ ರಾತ್ರಿ ಮನೆಗೆ ಬರುತ್ತಿದ್ದರು. ಈ ವೇಳೆ ಅಳುವಾರ ಗ್ರಾಮದ ಬಳಿ ಎದುರುಗಡೆಯಿಂದ ಬಂದ ಮತ್ತೊಂದು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಥಾಮಸ್ ಮ್ಯಾಥ್ಯೂ ಅವರ ತಲೆಗೆ ಗಂಭೀರ ಗಾಯವಾಗಿದೆ.

ತಕ್ಷಣ ಅವರನ್ನು ಕುಶಾಲನಗರ ಸಮುದಾಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗದ ಮಧ್ಯೆ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಮತ್ತೊಂದು ಬೈಕ್‌ನ ಇಬ್ಬರನ್ನು ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ಮೃತ ಥಾಮಸ್‌ಗೆ ಪತ್ನಿ, ಇಬ್ಬರು ಪುತ್ರಿ ಹಾಗೂ ಒಬ್ಬ ಪುತ್ರ ಇದ್ದಾರೆ. ಈ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗೋಣಿಕೊಪ್ಪ, ಸೋ.ಪೇಟೆಯಲ್ಲಿ ರೈತರ ಪ್ರತಿಭಟನೆ

**• ವಿದ್ಯುತ್ ಬಿಲ್ ಪಾವತಿಗೆ ಅಸಮಾಧಾನ • ಆದೇಶದ ಪ್ರತಿಗೆ ಬೆಂಕಿ ಹಚ್ಚಿ ಆಕ್ರೋಶ**





ಗೋಣಿಕೊಪ್ಪ/ಸೋಮವಾರಪೇಟೆ, ಡಿ.20–ರೈತರ 10 ಹೆಚ್‌ಪಿ ಕೃಷಿ ಪಂಪ್ ಸೆಟ್‌ಗಳಿಗೆ ಕೊಡಗು ಮತ್ತು ಮಲೆನಾಡು ಭಾಗದಲ್ಲಿ ಡಿಬಿಟಿ ಯೋಜನೆಯಡಿ ವಿದ್ಯುತ್ ಬಿಲ್ ಪಾವತಿ ಮಾಡುವಂತೆ ರಾಜ್ಯ ಸರ್ಕಾರದ ಆದೇಶ ಕ್ರಮವನ್ನು ವಿರೋಧಿಸಿ ರೈತ ಸಂಘದ ಕಾರ್ಯಕರ್ತರು ಬುಧವಾರ ಗೋಣಿಕೊಪ್ಪ ಹಾಗೂ ಸೋಮವಾರಪೇಟೆಯಲ್ಲಿ ಪ್ರತಿಭಟನೆ ನಡೆಸಿದರು.

ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಗೋಣಿಕೊಪ್ಪಲಿನ ಸೆಸ್ಕ್ ಉಪ ವಿಭಾಗ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಸರ್ಕಾರದ ಡಿಬಿಟಿ ಆದೇಶದ ಪ್ರತಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ ಇತರ ಭಾಗಗಳಂತೆ ಕೊಡಗಿನ ರೈತರಿಗೂ 10 ಹೆಚ್‌ಪಿ ಪಂಪ್‌ಸೆಟ್‌ಗಳ ವಿದ್ಯುತ್ ಉಚಿತವಾಗಿ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ 5 ತಾಲೂಕುಗಳಲ್ಲಿ ಬರಗಾಲದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಲ್ಲದೇ ವನ್ಯಪ್ರಾಣಿಗಳ ಹಾವಳಿಯಿಂದಾಗಿ ಬೆಳೆ ನಷ್ಟದಿಂದ ಕಂಗಾಲಾಗಿದ್ದಾರೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಡಿಬಿಟಿ ಯೋಜನೆಯಡಿ ಬಿಲ್ ಪಾವತಿ ಮಾಡುವಂತೆ ಆದೇಶ ಹೊರಡಿಸುವ ಮೂಲಕ ರೈತರ ಮೇಲೆ ಒತ್ತಡ ಹೇರಲಾಗುತ್ತಿದೆ. ಇದನ್ನು ಕೈಬಿಟ್ಟು ಸರ್ಕಾರವೇ ಸೆಸ್ಕ್‌ಗೆ ಹಣ ಪಾವತಿಸಬೇಕು. ತಪ್ಪಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಸಂಚಾಲಕ ಸುಭಾಷ್ ಸುಬ್ಬಯ್ಯ, ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜಯ್ ಬೋಪಯ್ಯ, ವಿರಾಜಪೇಟೆ ತಾಲೂಕು ಅಧ್ಯಕ್ಷ ಭವಿಕುಮಾರ್, ಖಜಾಂಚಿ ಇಟ್ಟೀರ ಸಬೀತ, ಕಾರ್ಯದರ್ಶಿ ಅಜ್ಜಮಾಡ ಚಂಗಪ್ಪ, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಅಲೆಮಾಡ ಮಂಜುನಾಥ್, ಅಮ್ಮತ್ತಿ ಹೋಬಳಿ ಅಧ್ಯಕ್ಷ ಮಂಡೇಪಂಡ ಪ್ರವೀಣ್, ಶ್ರೀಮಂಗಲ ಹೋಬಳಿ ಅಧ್ಯಕ್ಷ ಕಂಬ ಕಾರ್ಯಪ್ಪ, ಬಾಳಲೆ ಹೋಬಳಿ ಅಧ್ಯಕ್ಷ ಕಿಸ ಮಾಚಯ್ಯ, ನಲ್ಲೂರು ಗ್ರಾಮದ ಅಧ್ಯಕ್ಷ ತೀತರಮಾಡ ರಾಜ ಕರುಂಬಯ್ಯ, ತಿತಿಮತಿ ಅಧ್ಯಕ್ಷ ಚೆಪ್ಪುಡೀರ ಕಾರ್ಯಪ್ಪ, ಪೊನ್ನಂಪೇಟೆ ಅಧ್ಯಕ್ಷ ಚೊಟ್ಟೆಕಾಳಪಂಡ ಮನು, ಮಾಯಮುಡಿ ಗ್ರಾಮ ಅಧ್ಯಕ್ಷ ರಾಯ್ ಮಾದಪ್ಪ, ಹುದಿಕೇರಿಯ ಹಿರಿಯ ಮುಖಂಡರಾದ ಚೆಕ್ಕೇರ ಕಾಳಯ್ಯ ಮತ್ತಿತರರು ಪಾಲ್ಗೊಂಡಿದ್ದರು.

**ಸೋಮವಾರಪೇಟೆ:** ಇಲ್ಲಿನ ಖಾಸಗಿ ಬಸ್ ನಿಲ್ದಾಣದ ಪುಟ್ಟಪ್ಪ ವೃತ್ತದಲ್ಲಿ ಜಮಾಯಿಸಿದ ಸೋಮವಾರಪೇಟೆ ತಾಲೂಕು ರೈತ ಸಂಘದ ಕಾರ್ಯಕರ್ತರು ಹಾಗೂ ಕಾಫಿ ಬೆಳೆಗಾರರು, ಸರ್ಕಾರದ ದ್ವಿಮುಖ ವಿದ್ಯುತ್ ನಿಯಮವಾದ ಡಿಬಿಟಿ ಹಾಗೂ ಸೆಸ್ಕ್ ದಬ್ಬಾಳಿಕೆ ನೀತಿ ಖಂಡಿಸಿ ಪ್ರತಿಭಟನೆ ನಡೆಸಿದರು. ಸರ್ಕಾರದ ಆದೇಶದ ಪ್ರತಿ ಹಾಗೂ ವಿದ್ಯುತ್ ಬಿಲ್ ಮತ್ತು ಮೀಟರ್‌ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ರೈತ ಸಂಘದ ಅಧ್ಯಕ್ಷ ಕೆ.ಎಂ.ದಿನೇಶ್ ಮಾತನಾಡಿ, ಸರ್ಕಾರ ಇತರ ಬೆಳೆಗಾರರಿಗೆ ನೀಡಿರುವಂತೆ ಕಾಫಿ ಬೆಳೆಗಾರರ 10 ಹೆಚ್‌ಪಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕು. ಕಾಫಿ ಬೆಳೆಗಾರರಿಂದ ವಿದೇಶಿ ವಿನಿಮಯ ಪಡೆಯುವ ಸರ್ಕಾರ ರೈತರ ಸಣ್ಣ ಮೊತ್ತದ ಬಾಕಿಯನ್ನು ಮನ್ನಾ ಮಾಡಲು ಮೀನಾಮೇಷ ಎಣಿಸುತ್ತಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕು ರೈತ ಸಂಘ ಉಪಾಧ್ಯಕ್ಷ ಜಿ.ಎಂ.ಹೂವಯ್ಯ ಹಾಗೂ ಕಾರ್ಮಿಕ ಮುಖಂಡ ಹೆಚ್.ಎಂ.ಸೋಮಪ್ಪ ಮಾತನಾಡಿ, ರೈತರಿಗೆ ವಿದ್ಯುತ್ ನೀಡದಿದ್ದರೆ ಕಾರ್ಮಿಕರು ಸಂಕಷ್ಟ ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ತನ್ನ ಧೋರಣೆಯನ್ನು ಬದಲಿಸಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡರಾದ ಮಚ್ಚಂಡ ಅಶೋಕ್, ಕುಶಾಲಪ್ಪ, ರಾಜೇಶ್, ಸುಬ್ಬಯ್ಯ, ಬೆಳೆಗಾರರಾದ ಅನಿಲ್‌ಕುಮಾರ್, ಚಂದ್ರಶೇಖರ್, ಸುನಿಲ್‌ಗೌಡಳ್ಳಿ, ದಿವಾಕರ್, ಕೂಗೇಕೋಡಿ ಶಿವಪ್ಪ, ಹೊನ್ನವಳ್ಳಿ ಚಂದ್ರು, ರವಿ ಮಳ್ತೆ, ಬಿ.ಎಂ.ಸುರೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


## 2ನೇ ಬಾರಿ ಅಪ್ಪಂಡೇರಂಡ ತಂಡ ಚಾಂಪಿಯನ್



ಪೊನ್ನಂಪೇಟೆ, ಡಿ.20–ಬಿಟ್ಟಂಗಾಲ ಸಮೀಪದ ಕಂಡಂಗಾಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕ್ರೀಡಾ ಸಮಿತಿ ವತಿಯಿಂದ ಶಾಲಾ ಮೈದಾನದಲ್ಲಿ ಕಳೆದ 4 ದಿನಗಳಿಂದ ನಡೆಯುತ್ತಿದ್ದ ಮೂರುನಾಡು ವ್ಯಾಪ್ತಿಯ 2ನೇ ವರ್ಷದ ಕೌಟುಂಬಿಕ ಹಾಕಿ ಪಂದ್ಯಾವಳಿ ಮುಕ್ತಾಯಗೊಂಡಿದ್ದು, ಕಳೆದ ಬಾರಿ ಚಾಂಪಿಯನ್ ಆಗಿದ್ದ ಕಂಡಂಗಾಲದ ಅಪ್ಪಂಡೇರಂಡ ತಂಡ 2ನೇ ಬಾರಿಗೆ ವಿನ್ನರ್ಸ್ ಪ್ರಶಸ್ತಿ ಪಡೆಯುವ ಮೂಲಕ ಚಾಂಪಿಯನ್ ಪಟ್ಟ ಉಳಿಸಿಕೊಂಡಿದೆ.

ಫೈನಲ್‌ನಲ್ಲಿ 5–3 ಗೋಲಿನ ಅಂತರದಿಂದ ಮದ್ರೀರ ತಂಡವನ್ನು ಮಣಿಸಿದ ಅಪ್ಪಂಡೇರಂಡ ತಂಡ ಸತತ 2ನೇ ಬಾರಿಗೆ ವಿಜಯದ ಮಾಲೆಯನ್ನು ತನ್ನ ಕೊರಳಿಗೇರಿಸಿಕೊಂಡಿತು. ಪಂದ್ಯದ ಆರಂಭದಿಂದಲೇ ಬಿರುಸಿನ ಆಟಕ್ಕೆ ಒತ್ತು ನೀಡಿದ ಅಪ್ಪಂಡೇರಂಡ ತಂಡ, ಎದುರಾಳಿ ಆಟಗಾರರ ವಿರುದ್ಧ ರಕ್ಷಣಾತ್ಮಕ ಮತ್ತು ಸಂಘಟಿತವಾದ ಆಟವಾಡಿ ಪ್ರಶಸ್ತಿ ಗೆದ್ದುಕೊಂಡಿತು. ಅಪ್ಪಂಡೇರಂಡ ತಂಡದ ಆಟಗಾರರು ಇಡೀ ಪಂದ್ಯಾವಳಿ ಯುದಕ್ಕೂ ಪ್ರೇಕ್ಷಕರ ಗಮನ ಸೆಳೆದು, ತಂಡದ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ವಿಜೇತ ತಂಡದ ಲಿಖಿತ್ 2 ಗೋಲು, ಆಭರಣ ಸುಧೀವ್, ನಿತಿನ್ ಮತ್ತು ಭರತ್ ತಲಾ ಒಂದು ಗೋಲು ಹೊಡೆದರು. ತಂಡದ ವಿರುದ್ಧ ದಾಖಲಾಗಬಹುದಾಗಿದ್ದ ಸಾಕಷ್ಟು ಗೋಲುಗಳನ್ನು ತಡೆಗೋಡೆಯಂತೆ ನಿಂತು ತಡೆದ ಅಪ್ಪಂಡೇರಂಡ ತಂಡದ ಗೋಲ್ ಕೀಪರ್ ಕೌಶಿಕ್ ಸುಬ್ರಮಣಿ ಪಂದ್ಯಾವಳಿಯ ಸರಣಿ ಪುರುಷೋತ್ತಮ ವಿಶೇಷ ಪ್ರಶಸ್ತಿಗೆ ಪಾತ್ರರಾದರು. ಅಪ್ಪಂಡೇರಂಡ ಯಶ್ವಂತ್ ಕಾಳಪ್ಪ ತರಬೇತಿದಾರರಾಗಿ ಮತ್ತು ಅಪ್ಪಂಡೇರಂಡ ಸುರೇಶ್ ತಂಡದ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದರು.

## ಹೋಂ ಸ್ಟೇ ನೋಂದಣಿ ಪ್ರಮಾಣಪತ್ರ ವಿತರಣೆ



ಮಡಿಕೇರಿ, ಡಿ.20– ಜಿಲ್ಲೆಯ ಎಲ್ಲಾ ಹೋಂ ಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿದ್ದು, ಈ ಸಂಬಂಧ ಪ್ರವಾಸೋದ್ಯಮ ಇಲಾಖೆಯ ಆನ್‌ಲೈನ್ ಪೋರ್ಟಲ್‌ನಲ್ಲಿ ನೂತನವಾಗಿ ನೋಂದಣಿಗೊಂಡಿರುವ ಹೋಂ ಸ್ಟೇ ಮಾಲೀಕರಿಗೆ ಶಾಸಕ ಡಾ.ಮಂತರ್‌ಗೌಡ ಮಂಗಳವಾರ ಕುಶಾಲನಗರದ ತಮ್ಮ ಕಚೇರಿಯಲ್ಲಿ ಪ್ರಮಾಣಪತ್ರ ವಿತರಿಸಿದರು.

ಜಿಲ್ಲೆಯ ಹೋಂ ಸ್ಟೇಗಳು ಕಡ್ಡಾಯವಾಗಿ ನೋಂದಣಿಗೊಳ್ಳುವ ಮೂಲಕ ಉತ್ತಮ ಆದಾಯ ಗಳಿಸಲು ಮತ್ತು ಸುಸ್ಥಿರ ಮತ್ತು ಜವಾಬ್ದಾರಿ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು. ಹೋಂ ಸ್ಟೇ, ಹೋಟೆಲ್ ಮತ್ತು ರೆಸಾರ್ಟ್‌ಗಳು ಕೂಡ ನಿಯಮ ಪಾಲಿಸಿ ಪ್ರವಾಸೋದ್ಯಮ ಇಲಾಖೆಯ ಕೆಟಿಟಿಎಫ್ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವಂತೆ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಅನಿತಾ ಭಾಸ್ಕರ್ ಹಾಗೂ ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕ ಜತೀನ್ ಬೋಪಣ್ಣ ಉಪಸ್ಥಿತರಿದ್ದರು.

# ಚಾ.ನಗರ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣ ಶೂನ್ಯ

**• ಗಡಿಯಂಚಿನ ಗ್ರಾಮ, ಚೆಕ್‌ಪೋಸ್ಟ್‌ನಲ್ಲಿ ತೀವ್ರ ತಪಾಸಣೆ • ಡಿಎಚ್‌ಓ ಡಾ.ಚಿದಂಬರ ಮಾಹಿತಿ**



ಚಾಮರಾಜನಗರ, ಡಿ.20–ಜಿಲ್ಲೆಯಲ್ಲಿ ಶೂನ್ಯ ಕೋವಿಡ್ ಪ್ರಕರಣಗಳಿದ್ದು, ಜಿಲ್ಲೆಯ ಜನರು ಕೋವಿಡ್ ರೂಪಾಂತರಿಯ ಬಗ್ಗೆ ಯಾವುದೇ ಆತಂಕಪಡುವ ಅಗತ್ಯವಿಲ್ಲ. ಬದಲಿಗೆ ಜಾಗೃತಿಯಿಂದ ಇರಬೇಕು ಎಂದು ಜಿಲ್ಲಾ ಆರೋಗ್ಯ ಇಲಾಖೆ ಮನವಿ ಮಾಡಿದೆ.

ಕೇರಳದಲ್ಲಿ ರೂಪಾಂತರಿ ಕೋವಿಡ್ ಪ್ರಕರಣ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಆರೋಗ್ಯಾಧಿಗಾರಿ ಡಾ.ಚಿದಂಬರ, ಕೇರಳದಲ್ಲಿ ಕೋವಿಡ್ ರೂಪಾಂತರಿ ತಳಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದರಿಂದ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ನಿಗಾ ವಹಿಸಿದೆ. ಗಡಿಯಂಚಿನ ಗ್ರಾಮ ಹಾಗೂ ಚೆಕ್‌ಪೋಸ್ಟ್‌ನಲ್ಲಿ ಬುಧವಾರದಿಂದ ತೀವ್ರ ತಪಾಸಣೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಠಿಣ ಸಂದರ್ಭ ಎದುರಿಸಲು ಜಿಲ್ಲಾ ಆರೋಗ್ಯ ಇಲಾಖೆಯ ಸನ್ನದ್ಧವಾಗಿದ್ದು, ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳಿಲ್ಲ. ಹೀಗಾಗಿ ಜನರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ಕೋವಿಡ್ ರೂಪಾಂತರಿ ತಳಿ ಕುರಿತು ರಾಜ್ಯ ಸರ್ಕಾರದಿಂದ ಮುಜಾಗ್ರತಾ ಕ್ರಮವಹಿಸುವಂತೆ ಸೂಚನೆ ಬಂದಿದ್ದು, ಈ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಕೋವಿಡ್ ಲಕ್ಷಣಗಳು ಕಂಡು ಬಂದರೆ ಕೂಡಲೇ ಸಮೀಪದ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಳ್ಳುವಂತೆ ಮನದಟ್ಟು ಮಾಡಲು ಆರೋಗ್ಯ ಇಲಾಖೆಯಿಂದ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ತಿಳಿಸಿದರು.

**ಗಡಿಯಲ್ಲಿ ಕಟ್ಟೆಚ್ಚರ:** ಜಿಲ್ಲೆಯ ತಮಿಳುನಾಡು ಹಾಗೂ ಕೇರಳ ಗಡಿಯಲ್ಲಿ ಆರೋಗ್ಯ ಇಲಾಖೆಯಿಂದ ಕಟ್ಟೆಚ್ಚರ ವಹಿಸಲಾಗುತ್ತಿದ್ದು, ಹೊರ ರಾಜ್ಯದಿಂದ ಜಿಲ್ಲೆಗೆ ಪ್ರವಾಸಿಸುವ ಪ್ರಯಾಣಿಕರ ಆರೋಗ್ಯ ತಪಾಸಣೆ, ಸ್ಕ್ರೀನಿಂಗ್ ನಡೆಸಲಾಗುತ್ತಿದೆ. ಕೋವಿಡ್ ಲಕ್ಷಣ ಕಂಡು ಬಂದವರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲು ಸಿದ್ಧತೆ ಕೈಗೊಳ್ಳಲಾಗಿದೆ.

ಕೇರಳ ಗಡಿಯಂಚಿನಲ್ಲಿರುವ ಗ್ರಾಮಗಳಲ್ಲೂ ಆರೋಗ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ, ಕೆಮ್ಮು, ನೆಗಡಿ, ಜ್ವರ ಮುಂತಾದ ಕೋವಿಡ್ ಲಕ್ಷಣದಿಂದ ಬಳಲುತ್ತಿರುವವರ ತಪಾಸಣೆ ನಡೆಸಲಾಗುತ್ತಿದ್ದು, ಜಾಗೃತಿ ಮೂಡಿಸಲಾಗುತ್ತಿದೆ.

ಆಶಾ ಕಾರ್ಯಕರ್ತೆಯರಿಗೆ ಸ್ಥಳೀಯ ಜನರ ಆರೋಗ್ಯದ ಮೇಲೆ ನಿಗಾ ವಹಿಸಬೇಕು. ಕೋವಿಡ್ ಲಕ್ಷಣ ಕಂಡು ಬಂದವರ ಮಾಹಿತಿ ರವಾನೆ ಮಾಡುವಂತೆ ಸೂಚಿಸಲಾಗಿದೆ ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

> ‘ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ಶೂನ್ಯವಾಗಿದ್ದು, ಯಾವುದೇ ಆತಂಕಪಡುವ ಅಗತ್ಯವಿಲ್ಲ. ಮುಂಜಾಗ್ರತವಾಗಿ ಜಿಲ್ಲೆಯಲ್ಲಿ 1049 ಆಮ್ಲಜನಕ ಸಿಲಿಂಡರ್, 4 ಪಿಎಸ್‌ಐ ಪ್ಲಾಂಟ್, ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ 2, ಪೈಪ್‌ಲೈನ್ ಆಕ್ಸಿಜನ್ ವ್ಯವಸ್ಥೆ 4 ಆಸ್ಪತ್ರೆಗಳಲ್ಲಿವೆ. ಒಂದು ವೇಳೆ ಕೊರತೆಯಾದರೂ ತ್ವರಿತ ಪೂರೈಕೆಗೆ ಎಲ್ಲಾ ತಯಾರಿ ನಡೆಸಲು ಕ್ರಮ ಕೈಗೊಳ್ಳಲಾಗುವುದು.
>
> -ಡಾ.ಚಿದಂಬರ, ಡಿಹೆಚ್‌ಓ

# ಕೋವಿಡ್ ಎಚ್ಚರ ವಹಿಸಲು ಸೂಚನೆ

**ಸಿಮ್ಸ್ ಆಸ್ಪತ್ರೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ವೈದ್ಯರ ಸಭೆ**



ಚಾಮರಾಜನಗರ, ಡಿ.20–ನಗರದ ಹೊರವಲಯದ ಸಿಮ್ಸ್ ಆಸ್ಪತ್ರೆಯಲ್ಲಿ ಬುಧವಾರ ಕೋವಿಡ್ ಸೋಂಕು ತಡೆಗೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ವೈದ್ಯರ ಸಭೆ ನಡೆಯಿತು.

ಜಿಲ್ಲೆಯಲ್ಲಿ ಕೋವಿಡ್ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಹಿಂದೆ ನಡೆದಂತಹ ಆಕ್ಸಿಜನ್ ದುರಂತ ಯಾವುದೇ ಕಾರಣಕ್ಕೂ ಮರುಕಳಿಸಬಾರದು ಎಂದು ಶಾಸಕರು ವೈದ್ಯರಿಗೆ ಸೂಚಿಸಿದರು. ಕೋವಿಡ್ ಸೋಂಕಿತರಿಗೆ ಪ್ರತ್ಯೇಕ ವಾರ್ಡ್, ಹಾಸಿಗೆ ಸಿದ್ಧಪಡಿಸಬೇಕು. ಆಕ್ಸಿಜನ್ ಘಟಕ, ಸಿಲಿಂಡರ್‌ಗಳು ಭರ್ತಿಯಾಗಿರಬೇಕು. ಐಸೋಲೇಷನ್ ವಾರ್ಡ್ ಸಜ್ಜಾಗಿರಬೇಕು. ಔಷಧ ಸಂಗ್ರಹಿಸಿ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ತಿಳಿಸಿದರು.

ಸಿಮ್ಸ್ ಡೀನ್ ಡಾ.ಮಂಜುನಾಥ್ ಮಾತನಾಡಿ, ಸಾಕಷ್ಟು ಆಕ್ಸಿಜನ್ ಹಾಗೂ ಸಿಲಿಂಡರ್‌ಗಳಿವೆ. ಆಸ್ಪತ್ರೆಗೆ ದಾಖಲಾಗುವ ಸೋಂಕಿತರಿಗೆ ಚಿಕಿತ್ಸೆ ನೀಡಲು ಎಲ್ಲಾ ತಯಾರಿ ಮಾಡಲಾಗಿದೆ. ಸಿಮ್ಸ್ ಮತ್ತು ನಗರದ ಜಿಲ್ಲಾಸ್ಪತ್ರೆಯಲ್ಲಿ ತಲಾ ಒಂದೊಂದು ಆಕ್ಸಿಜನ್ ಘಟಕಗಳಿದ್ದು, ಸಾಕಷ್ಟು ಸಂಗ್ರಹವಿದೆ. ಆಕ್ಸಿಜನ್ ಸಿಲಿಂಡರ್‌ಗಳ ಕೊರತೆ ಇಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಸಭೆ ಬಳಿಕ ಶಾಸಕರು, ಆಸ್ಪತ್ರೆಯ ಐಸಿಯು ಘಟಕ, ಎಂಆರ್‌ಐ ಸ್ಕ್ಯಾನಿಂಗ್ ಯಂತ್ರೋಪಕರಣ ಸ್ಥಾಪಿಸಲು ಉದ್ದೇಶಿಸಲು ಸ್ಥಳ ಪರಿಶೀಲಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸರ್ಜನ್ ಕೃಷ್ಣಪ್ರಸಾದ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ ಹಾಗೂ ವೈದ್ಯರು ಹಾಜರಿದ್ದರು.

## ಮಹಿಳೆಯ ಚಿನ್ನದ ಸರ, ಓಲೆ ಕಸಿದ ಕಳ್ಳರು



ಗುಂಡ್ಲುಪೇಟೆ, ಡಿ.20– ತಾಲೂಕಿನ ವೀರನಪುರ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ಜಮೀನಿನಿಂದ ಮನೆಗೆ ಬರುತ್ತಿದ್ದ ಮಹಿಳೆಯ ಚಿನ್ನದ ಸರ ಹಾಗೂ ಓಲೆಗಳನ್ನು ಕಳ್ಳರು ಕಿತ್ತುಕೊಂಡು ಹೋಗಿರುವ ಘಟನೆ ನಡೆದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಗ್ರಾಮದ ನಾಗಮ್ಮ ಎಂಬುವರು ತಮ್ಮ ಜಮೀನಿನಿಂದ ಮನೆಗೆ ಬರುತ್ತಿರುಗುವಾಗ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕತ್ತಿನಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನದ ಸರ ಹಾಗೂ ಓಲೆಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ನಾಗಮ್ಮ ಅವರ ಕಿವಿ ಹಾಗೂ ಕುತ್ತಿಗೆಗೆ ಗಾಯಗಳಾಗಿದ್ದು, ಅವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಪೊಲೀಸರು ಸ್ಥಳಕ್ಕೆ ತೆರಳಿ ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗುಂಡ್ಲುಪೇಟೆ: ಜೂಜಾಡುತ್ತಿದ್ದ ಐವರ ಬಂಧನ

ಗುಂಡ್ಲುಪೇಟೆ, ಡಿ.20–ಬೆಟ್ಟಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಮಂಗಳವಾರ ರಾತ್ರಿ ಜೂಜಾಟದಲ್ಲಿ ತೊಡಗಿದ್ದ ಐವರನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಸ್ ನಿಲ್ದಾಣ ಬಳಿ ಜೂಜಾಡುತ್ತಿರುವ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಐವರನ್ನು ಬಂಧಿಸಿ, ಪಣಕ್ಕಿಟ್ಟಿದ್ದ 8 ಸಾವಿರ ರೂ. ನಗದನ್ನು ವಶಪಡೆದುಕೊಂಡರು. ಪೊಲೀಸರನ್ನು ಕಂಡ ಕೆಲವರು ಓಡಿಹೋದರು.

**ಲಾಟರಿ ಮಾರಾಟಗಾರದ ಬಂಧನ:** ಕೇರಳ ಲಾಟರಿ ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮದ್ದೂರು ಚೆಕ್‌ಪೋಸ್ಟ್ ಸಮೀಪ ಕೇರಳದ ಲಾಟರಿ ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿದ್ದ ಹೊಸೂರು ಬಡಾವಣೆಯ ನಿವಾಸಿಗಳಾದ ಪ್ರತಾಪ್ ಮತ್ತು ಮಹೇಶ್‌ನನ್ನು ಪೊಲೀಸರು ಬಂಧಿಸಿ, 25 ಸಾವಿರ ರೂ. ಬೆಲೆಯ ಲಾಟರಿಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಠಾಣೆ ಪೊಲೀಸರು, ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಚಾಮರಾಜನಗರ, ಡಿ.20–ವೇತನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಘಟಕದ ವತಿಯಿಂದ ಬುಧವಾರ ನಗರದಲ್ಲಿ ಪ್ರತಿಭಟನೆ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಘೋಷಣೆ ಕೂಗಿ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ ಕವಿತಾ ಮಾತನಾಡಿ, ಕೇಂದ್ರ ಸರ್ಕಾರ ಹಿಂದಿನ ಸರ್ಕಾರಗಳು ಅನುಸರಿಸಿದ ನೀತಿಗಳನ್ನು ಜಾರಿಗೊಳಿಸಿದೆ. ಅದರಲ್ಲೂ ದುಡಿಯುವವರ ಜೀವನವನ್ನು ಇನ್ನಷ್ಟು ಸಂಕಟಕ್ಕೆ ತಳ್ಳಿದೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ದುಡಿಯುವವರು ತೊಂದರೆ ಅನುಭವಿಸುವಂತಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮರ್ಜಿಗೆ ಒಳಗಾಗಿ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಳ ಮಾಡಿವೆ. ಎಲ್ಲಾ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿಗೊಳಿಸಿ, ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದೆ ಎಂದು ದೂರಿದರು.

ತಿಂಗಳಿಗೆ ವೇತನವನ್ನು ಕನಿಷ್ಠ 28,000 ರೂ.ಗೆ ಹೆಚ್ಚಿಸಬೇಕು. ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಎಲ್ಲಾ ಗುತ್ತಿಗೆ ಕಾರ್ಮಿಕರ ಸೇವೆಗಳನ್ನು ಕಾಯಂಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತ ಖಾತ್ರಿ ಪಡಿಸಿ, ಉದ್ಯೋಗಗಳ ಗುತ್ತಿಗೀಕರಣವನ್ನು ನಿಲ್ಲಿಸಬೇಕು. ಕಾರ್ಮಿಕ ವಿರೋಧಿ 4 ಲೇಬರ್ ಕೋಡ್‌ಗಳನ್ನು ರದ್ದು ಗೊಳಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷರಾದ ರಾಣಿ ಸುಲೋಚನಾ, ಮಂಜುಳಾ, ಚೆನ್ನಾಜಮ್ಮ, ಉಮಾ, ಕಾಯದರ್ಶಿಗಳಾದ ಶಶಿಕಲಾ, ಶಮ್ಮಾ ಇತರರು ಭಾಗವಹಿಸಿದ್ದರು.

# ಕೇಂದ್ರ ಸರ್ಕಾರದ ವಿರುದ್ಧ ಎಸ್‌ಡಿಪಿಐ ಆಕ್ರೋಶ




ಚಾಮರಾಜನಗರ, ಡಿ.20–141 ಸಂಸತ್ ಸದಸ್ಯರನ್ನು ಅಮಾನತುಗೊಳಿಸುವ ಮೂಲಕ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹತ್ಯೆಗೈದಿದೆ. ಇದು ನಿರಂಕುಶ ಪ್ರಭುತ್ವದ ಪರಮಾವಧಿ ಎಂದು ಆರೋಪಿಸಿ ಬುಧವಾರ ನಗರದಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭಿತ್ತಿಪತ್ರ ಹಿಡಿದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಜಿಲ್ಲಾ ಉಪಾಧ್ಯಕ್ಷ ಸೈಯದ್ ಅರೀಫ್ ಮಾತನಾಡಿ, ಸಂಸತ್ ಪ್ರಜಾಪ್ರಭುತ್ವದ ಆತ್ಮ. ಅಲ್ಲಿ ಆಡಳಿತ ಪಕ್ಷ ಎಷ್ಟು ಮುಖ್ಯವೋ, ಅಷ್ಟೇ ವಿಪಕ್ಷದ ಅವಶ್ಯಕತೆಯೂ ಮುಖ್ಯವಾಗಿರುತ್ತದೆ. ವಿಪಕ್ಷವಿಲ್ಲದ ಪ್ರಜಾಪ್ರಭುತ್ವ ಆತ್ಮವಿಲ್ಲದ ದೇಹವಿದ್ದ ಹಾಗೇ. ಮೋದಿ ಸರ್ಕಾರ ಸುಮಾರು 141 ವಿಪಕ್ಷದ ಸಂಸತ್ ಸದಸ್ಯರನ್ನು ಅಂದರೆ, ಸುಮಾರು ಶೇ.70ರಷ್ಟು ವಿರೋಧ ಪಕ್ಷದ ಚುನಾಯಿತ ಪ್ರತಿನಿಧಿಗಳನ್ನು ಅಮಾನತುಗೊಳಿಸಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಮಹೇಶ್, ನಗರಸಭಾ ಸದಸ್ಯರಾದ ಖಲೀಲ್ ಉಲ್ಲಾ, ಮೊಹಮ್ಮದ್ ಅಮೀಕ್, ಜಿಲ್ಲಾ ಸಮಿತಿ ಸದಸ್ಯರಾದ ಸಿ.ಕೆ.ನಯಾಜ್ ಉಲ್ಲಾ, ಇಸ್ತಾರ್ ಪಾಷ, ದಲಿತ ಮುಖಂಡರಾದ ಸಂಘಸೇನಾ ಇತರರು ಇದ್ದರು.

## ನಾಳೆ ಚಾ.ನಗರದಲ್ಲಿ ಕಾರ್ಯಾಗಾರ

ಚಾಮರಾಜನಗರ, ಡಿ.20–ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದೊಂದಿಗೆ ಪೋಕ್ಸೋ, ಕಡ್ಡಾಯ ಶಿಕ್ಷಣ ಹಕ್ಕು, ಬಾಲ್ಯವಿವಾಹ ನಿಷೇಧ, ಬಾಲನ್ಯಾಯ ಕಾಯ್ದೆ ಕುರಿತು ತರಬೇತಿ ಕಾರ್ಯಾಗಾರವನ್ನು ಡಿ.22ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದ ಹಳೆಯ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

## ಸಿ.ಬಿ.ರಾಜೇಂದ್ರ ಕುಮಾರ್ ನಿಧನ



ಚಾಮರಾಜನಗರ, ಡಿ.20– ನಗರದ ಪದ್ಮಾಂಬ ಟ್ರೇಡರ್ಸ್ ಮಾಲೀಕ ಹಾಗೂ ಜೈನ ಸಮಾಜದ ಮಾಜಿ ಅಧ್ಯಕ್ಷ ಸಿ.ಬಿ. ರಾಜೇಂದ್ರಕುಮಾರ್ (ಬ್ರಹ್ಮ ದೇವಯ್ಯ 87) ಅನಾರೋಗ್ಯದಿಂದ ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರನ್ನು ಅಗಲಿದ್ದಾರೆ. ನಗರದಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ರಾಮಮಂದಿರ ವಿನ್ಯಾಸದಲ್ಲಿ 5,000 ವಜ್ರಖಚಿತ ಹಾರ ವ್ಯಾಪಾರಿಯಿಂದ ಅಯೋಧ್ಯಾ ರಾಮನಿಗೆ ಡೈಮಂಡ್ ನೆಕ್ಲೇಸ್ ಸಮರ್ಪಣೆ




**ಉತ್ತರ ಪ್ರದೇಶ:** ಅಯೋಧ್ಯೆಯಲ್ಲಿ ವಿಶ್ವದಾದ್ಯಂತ ಕೋಟ್ಯಾಂತರ ಜನರ ಕನಸು ನನಸಾಗುವ ಹಂತ ಸಮೀಪಿಸಿದೆ. ರಾಮಮಂದಿರ ನಿರ್ಮಾಣ ಬಹುತೇಕ ಪೂರ್ಣಗೊಂಡಿದ್ದು, ಶ್ರೀರಾಮನ ಪ್ರತಿಮೆ ಸ್ಥಾಪನೆಗೆ ಸಮಯ ನಿಗದಿಪಡಿಸಲಾಗಿದೆ. ಜನವರಿ 22ರಂದು ಅಭಿಜಿತ್ ಲಗ್ನ, ಮೃಗಶಿರ ನಕ್ಷತ್ರದಲ್ಲಿ 12:20ಕ್ಕೆ ಶ್ರೀರಾಮನ ಮೂರ್ತಿಯ ಪ್ರತಿಷ್ಠೆ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಚಲನಚಿತ್ರ, ರಾಜಕೀಯ, ಕ್ರೀಡಾ ಕ್ಷೇತ್ರದ ಗಣ್ಯರು, ಸಂತರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಳ್ಳಲಿದ್ದಾರೆ. ಸಂಭ್ರಮ ಸಮೀಪಿಸುತ್ತಿದ್ದಂತೆ ಗುಜರಾತಿನ ವಜ್ರದ ವ್ಯಾಪಾರಿಯೊಬ್ಬರು ಅಯೋಧ್ಯೆಯ ರಾಮ ಮಂದಿರ ವಿನ್ಯಾಸವನ್ನು ಹೋಲುವ ವಜ್ರದ ನೆಕ್ಲೇಸ್ ಒಂದನ್ನು ತಯಾರಿಸಿದ್ದಾರೆ. ಈ ವಜ್ರದ ನೆಕ್ಲೇಸ್ ಅನ್ನು ಜ.22 ರಂದು ಅಯೋಧ್ಯೆ ದೇವಸ್ಥಾನ ಸಮಿತಿಗೆ ಹಸ್ತಾಂತರಿಸಲಾಗುವುದು ಎಂದು ಮೂಲಗಳಿಂದ ತಿಳಿದುಬಂದಿದೆ.

**ಹಾರದ ವಿಶೇಷತೆ:** ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಶ್ರೀರಾಮನ ಮೂರ್ತಿಗೆ ಆಭರಣವಾಗಿ ಈ ವಜ್ರದ ನೆಕ್ಲೇಸ್ ಅನ್ನು ತಯಾರಿಸಲಾಗಿದೆ. ಈ ವಜ್ರದ ಹಾರ ತಯಾರಿಕೆಯಲ್ಲಿ 5 ಸಾವಿರ ಅಮೆರಿಕನ್ ವಜ್ರಗಳು ಮತ್ತು 2 ಕೆಜಿ ಬೆಳ್ಳಿಯನ್ನು ಬಳಸಲಾಗಿದೆ. ಇದಲ್ಲದೇ ದೇವಾಲಯದ ಮಾದರಿಯ ವಿನ್ಯಾಸಕ್ಕೆ 3 ಸಾವಿರ ವಜ್ರಗಳನ್ನು ಬಳಸಿದ್ದು, ಇದರೊಂದಿಗೆ ರಾಮ, ಲಕ್ಷ್ಮಣ, ಸೀತೆ ಮತ್ತು ಹನುಮಂತನ ವಿಗ್ರಹಗಳನ್ನೂ ಕೂಡ ಕಾಣಬಹುದು. ಒಟ್ಟು 40 ಕುಶಲಕರ್ಮಿಗಳು 35 ದಿನಗಳಲ್ಲಿ ವಿನ್ಯಾಸವನ್ನು ಪೂರ್ಣಗೊಳಿಸಿದ್ದಾರೆ. ವಜ್ರದ ನೆಕ್ಲೇಸ್ ಅನ್ನು ಜನವರಿ 22 ರಂದು ಅಯೋಧ್ಯೆ ದೇವಸ್ಥಾನ ಸಮಿತಿಗೆ ಹಸ್ತಾಂತರಿಸಲಾಗುವುದು ಎಂದು ತಿಳಿದುಬಂದಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**WANTED**
Telecallers (Female)
10th and above, salary 7000+ Incentives up to 12k, Timings - 9.30am to 6.00 Pm, MR Associates-HDFC Life Customer care service, Saraswathipuram, Mysore. Contact
PH: 9900844455

**COMMERCIAL SPACE & SHOPS FOR RENT**
Ground & First Floor
Space For Super Market
Bank, Finance, Study Centre Etc,
Shops For: Provision Store, beauty Parlor, Zerox & Stationery etc..
Shardadevinagara, Vivekanda Road,
9980976912
9483577892

**MUDA APPROVED SITES FOR SALE**
50X80, 4000 SQFT Muda approved Sites with all Documents clear at Hootagalli Housing Board and Vijayanagar 4th Stage near
9008052734

Sudarshan Saur SOLAR WATER HEATER
ATTRACTIVE OFFER
ಸೇಲ್ಸ್ & ಸರ್ವಿಸ್


Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

**SITE FOR SALE**
40x60, Vijayanagar, 4th Stage, 2nd Phase, Site No. 11838,
Mob. 8618626897

**ಬೇಕಾಗಿದ್ದಾರೆ**
ಟೀಮ್ ಲೀಡರ್ (ಸಂಬಳ = 13000), ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.(ಕನ್ನಡ ಮಾತನಾಡಬಲ್ಲವರು) ಸ್ಥಳ – ಚಾಮುಂಡಿಪುರಂ ಮತ್ತು ಎನ್.ಆರ್ ಮೊಹಲ್ಲಾ, ಸಂಬಳ 8000 – 11000 ರವರೆಗೆ
8150005111

**ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್**
9591012944

**40×60 SITE for SALE**
MUDA - NORTH Facing
Rajeev Nagar 2nd Stage
Near Gupta Store, MYSORE
Rs. 1 Crore
Call : 9845286583
Immediate Settlement

**ತರಬೇತಿ**
ನಿಮಿಷಾಂಬ ವಾಸ್ತು 23, 24 ಮತ್ತು 25 ರಂದು ವಾಸ್ತು ತರಗತಿ ಇಂಡಿಯನ್ ವಾಸ್ತು ಹಾಗೂ ಚೀನಾದ ವಾಸ್ತು ಶಾಸ್ತ್ರ
9342101507
9945698086

**Aquaguard & Kent Sales and Service**
Service Charge : 300/-
9901200444

**DTCP SITES FOR SALE**
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

**ಉಚಿತ ತರಬೇತಿ**
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್**
Mob: 8880558064

**ಬೋಳು ತಲೆಯ ಸಮಸ್ಯೆಯೇ?**

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

**'R' ರಿಯಲ್ ಎಸ್ಟೇಟ್**
ಸೈಟು ಮಾರಾಟಕ್ಕಿದೆ
ಹೆಚ್.ವಿ.ರಾಜೀವ್ ಟೌನ್‌ಶಿಪ್ (ಜ್ಞಾನಗಂಗಾ) ಬಡಾವಣೆ
30x40 MUDA APPROVED
MOUNT LITRA ZEE SCHOOL
ಹತ್ತಿರ ಶ್ರೀರಾಂಪುರ ರಿಂಗ್ ರಸ್ತೆಯಿಂದ 7 ಕಿ.ಮೀ. ಬೆಲೆ. 18 ಲಕ್ಷ
9538412881

**CAR FOR SALE**
Baleno White Color
Single Owner
52000 km
Price: 6.50 to 7 Lakh (Negotiable)
Contact Customer Only
(Broker Excuse)
7829015666

**ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್**
Mob: 9108566022

**WANTED FOR**
Bhaskar Heart Centre

| Post | Qualification |
|---|---|
| Receptionist | Degree / PUC |
| Marketing / PRO (M) | Degree / PUC |
| Staff Nurses (F) | GNM / ANM |
| Pharma Aid | PUC / Degree |
| Office Boy | SSLC |

0821-2499188 / 9880186386

**ಉದ್ಯೋಗ ಅವಕಾಶ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಬೇಕಾಗಿದ್ದಾರೆ**
ಸೆಕ್ಯೂರಿಟಿಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್, ಕಿಚನ್ ಸ್ಟೀವರ್ಡ್ (kst) ಬೇಕಾಗಿದ್ದಾರೆ. ಊಟ, ತಿಂಡಿ, & ವಸತಿ ಸೌಲಭ್ಯವಿದೆ. ESI, PF ಇದೆ. ಆಕರ್ಷಕ ಸಂಬಳ ದೊರೆಯುತ್ತದೆ.
6364560079
6364448999

1) 30x50 HD kote road 60 feet road
2) 6, 10, 20 Guntas Farm Land @ KRS backwater.
3) 30x40 Narasipura road
4) s/commercial 40@60 satagalli
5) 40x70 house vidyaranya puram
6) 30x40 Jnanabarathi lyt JP Nagar
20x30 G+1 Srirampura
New and old house city surrounding
Prakruthi Properties
9538690359,9035990359

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್, ಹೌಸ್‌ಕೀಪಿಂಗ್ ಸೂಪರ್‌ವೈಸರ್, ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ ಉತ್ತಮ ಸಂಬಳ +ESI+EPF ಕೆಲವು ಕಡೆ ಊಟ ವಸತಿ ಇರುತ್ತದೆ.
8884286321,8884286123
8884339446

**WANTED**
ACCOUNTANT (FEMALE)
(Min. 2-3 years exp. in Auditor office)
ELECTRICAL ENGINEER (Female only)
(2 years + experience in handling ESCOM, GK, WS and Linkline works)
Civil Engineer (Female only). (Min. 2-3 years exp. as Civil Engineer).
Contact: Mob: 6366366388
Call between 9.30 am to 5.30 pm.
Mail your CV : acpltd123@gmail.com

**Staff Required**
Wanted Telecallers - Male / Female part time / Full time. Marketing Executives - only male part time /full time.
* Students also can apply. Interested candidates can send your resume to: wwesomys@gmail.com. Phone / Whatsapp:
9611777102, 7760495155
Worldwide Education & Careers, near Gnanaganga School, Kuvempunagar, Mysuru-570 023.

**House for Sale**
30x40, West face site, North face door, newly constructed, G+2, Dattagalli, Somanathanagar, Mysore. Contact:
9738884777, 9900251194
30x40 house for sale, ground floor, near J.P. Nagar.

**ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್**
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

**ಮನೆ ಕಟ್ಟಿಸುವವರ ಗಮನಕ್ಕೆ**
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟವುಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ Rs. 1670/- ರಂತೆ ಕಟ್ಟಿಕೊಡಲಾಗುವುದು. ಮುಂಗಡ ಹಣ ಪಾವತಿ ಮಾಡುವಂತಿಲ್ಲ. ಸಾಲದ ಸೌಲಭ್ಯ ಒದಗಿಸಲಾಗುವುದು.
Mob: 94821-27279

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ವಿದ್ಯಾರ್ಹತೆ 7, 10, ಎಸ್ಎಸ್ಎಲ್‌ಸಿ, ಐಟಿಐ, ಪಿಯುಸಿ, ಡಿಪ್ಲೋಮಾ ಯಾವುದೇ ಡಿಗ್ರಿ (ಪಾಸ್/ಫೇಲ್), ಸಂಬಳ: 18000, ರಿಂದ 30000/-, ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ, ತರಬೇತಿ ಸಮಯದಲ್ಲಿ ವೇತನ ಕೊಡಲಾಗುವುದು. ವಯಸ್ಸು 35ವರ್ಷ ಕೆಳಗಿನವರು, ಸಂಪರ್ಕಿಸಿ:
9880151303, 8762361391

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಗೋಕುಲಂ, ಹೆಬ್ಬಾಳು, ಬೆಳವಾಡಿ, ರಾಮಕೃಷ್ಣನಗರ, ವಿದ್ಯಾರಣ್ಯಪುರಂ, ಏರಿಯಾದಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
1) ಸೆಕ್ಯೂರಿಟಿ ಗಾರ್ಡ್‌ಗಳು
2) ಹೌಸ್‌ಕೀಪಿಂಗ್‌ಗಳು
ವಿದ್ಯಾರ್ಹತೆ: SSLC & ಮೇಲ್ಪಟ್ಟು
ಸಂಬಳ: 11000 ರಿಂದ 16535
ವಯೋಮಿತಿ: 50 ವರ್ಷದೊಳಗೆ
ESI & PF ಸೌಲಭ್ಯ ಇರುತ್ತದೆ.
9739199355
9844235981

**WANTED**
TECHNICIANS & HELPER BOYS
Freshers preferred
Age 18-25 years
Two Wheeler is must
Saraswathipuram, Mysuru
98808 28999

**ಸೈಟುಗಳು ಮಾರಟಕ್ಕಿದೆ**
ನಂಜನಗೂಡಿನಲ್ಲಿ ಅಲಿನೇಷನ್ ಆಗಿ ನಿರ್ಮಾಣಕ್ಕೆ ಸಿದ್ಧವಾಗಿರುವ ಬಡಾವಣೆಯಲ್ಲಿ 50 ಸೈಟು ಮುಗಂಡ (ಬಲ್ಕ್)ಬುಕಿಂಗ್/ ಸಂಘ ಸಂಸ್ಥೆಗಳಿಗೆ ರಿಯಾಯಿತಿಯಲ್ಲಿ ಲಭ್ಯವಿದೆ. ಕೊಡುಗೆ ಸೀಮಿತ ಅವಧಿಗೆ ಮಾತ್ರ ಲಭ್ಯ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9880059793

**PART TIME JOBS**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೊರಿಯರ್ ಸೌಲಭ್ಯವಿದೆ)
9148733213

**Ads Posting Job**
No Registration Fees
ನಿಮ್ಮ ಮನೆಯಿಂದ ನಿಮ್ಮ ಮೊಬೈಲ್ ಫೋನ್ ಮೂಲಕ ತಿಂಗಳಿಗೆ 20,000/– ರಿಂದ 30,000/– ಗಳಿಸಿ.
9731891409

**Document Lost**
M.A. Jafarsadikh, #130, 13th Cross, Ghousiya Nagar, Mysuru-570 019, have lost my house document No. 1173, LIG 1, 4th Stage, Kalyanagiri, Mysuru.
Finders please contact:
Mob: 9900971350

**ಬೇಕಾಗಿದ್ದಾರೆ [WANTED]**
ಮೈಸೂರಿನಲ್ಲಿ ಕಾಳಿದಾಸ ರೋಡ್‌ನಲ್ಲಿ ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ, ಅನುಭವವುಳ್ಳ .
(1)ಸೌತ್ ಆಸಿಸ್ಟೆಂಟ್ (ಸಹಾಯಕ) Cutting , Grinding (2) Tandoori Roti ತಂದೂರಿ ರೋಟಿ ಮಾಡುವ (3) ಕೌಂಟರ್ counter (4) Waiter ವೇಟರ್‌ಗೆ. 5. ಪಾತ್ರೆ ತೊಳೆಯುವ ಕೆಲಸಕ್ಕೆ. ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ
7338392631

**SITE FOR SALE**
30X40 East Facing Site
KBL Gardenia, Vijayanagar 4th Stage,
9686779810

**ಪ್ರಮಾಣ ಪತ್ರ**
ಸವಿತ ಬಿ., ಕೋಂ ದಿ. ರಮೇಷ್‌ಕುಮಾರ್ (ಆಧಾರ್ 360317338934) ನಂ. 36, ಗಿರಿದರ್ಶಿನಿ ಬಡಾವಣೆ, ಮೈಸೂರು, ಪ್ರಮಾಣೀಕರಿಸುವುದೇನೆಂದರೆ, ಸವಿತ ಬಿ, ಸವಿತ ಬೋರೇಗೌಡ ಮತ್ತು ಸವಿತ ರಮೇಷ್‌ಕುಮಾರ್ ಒಂದೇ ಹೆಸರಿನ ಸೂಚಕಗಳಾಗಿವೆ.
ಸಹಿ/– ಸವಿತ ಬಿ.

**ಕಳೆದಿದೆ**
ಎಸ್‌ಡಿ. ಶೇಷಣ್ಣ, ಸಿಂಧುವಳ್ಳಿ ಗ್ರಾಮ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಇವರ ಧರ್ಮಪತ್ನಿ ಶ್ರೀಮತಿ ಲೋಕೇಶ್ವರಿ ರವರ ಬಾಬ್ತು ಹುಲ್ಲಹಳ್ಳಿ ಗ್ರಾಮ ಪಂಚಾಯ್ತಿಯ ನಮೂನೆ 11ಬಿ ಸ್ವತ್ತಿನ ಸಂಖ್ಯೆ 15220053504–2003099 ಸದರಿ ಸ್ವತ್ತಿನ ಸಂಖ್ಯೆ 1067/2947/2899 ರ ವಿಸ್ತೀರ್ಣದ 9.1448 X 11.5824 ಮೀಟರ್ ವುಳ್ಳ ಸ್ವತ್ತಿನ ದಾನ ಪತ್ರವು ಜೆರಾಕ್ಸ್ ಮಾಡಿಸುವಾಗ ಸಿಂಧುವಳ್ಳಿ ಗ್ರಾಮದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 8549027447

**HOUSE FOR SALE**
Vijayanagar 4th Stg.
3 BHK Duplex New House, MUDA, E/F Door, Near Marimallappa School,
Price: 82 Lakhs / 1.55 Cr.
8660105902

**SITES FOR SALE**
30x40 - 33 Lakhs
20x40 - 22 Lakhs
Bank loan upto 80%,
Near Gurur Bus Stop, Ramabainagar, Mysore.
DTCP Approved
(Corporation limits)
1.5 Kms from JP Nagar Ring Road
Mob: 8660105902

**SITE FOR SALE**
Vijayanagar 3rd Stage
40x60, North Facing, MUDA Site, 40 Feet Road,
Near Clear Medi Hospital
8660105902

**ಜಮೀನು ಮಾರಾಟಕ್ಕಿದೆ**
ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ನರಸೀಪುರ ಮುಖ್ಯ ರಸ್ತೆ 11 ಗುಂಟೆ ಜಮೀನು ಮಾರಾಟಕ್ಕಿದೆ ಇದು ಮುಳ್ಳೂರು ಗೇಟ್ ಬಳಿ ವಾಣಿಜ್ಯ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುತ್ತದೆ.
ಸಂಪರ್ಕಿಸುವ ದೂರವಾಣಿ ನಂ.:
9845246549
6363015322

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್ ರಿಸೆಪ್ಷನ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವವುಳ್ಳವರು ಮಾತ್ರ ಊಟ ಮತ್ತು ವಸತಿ ಸೌಲಭ್ಯವಿದೆ.
MYSURU
9901369901
08213548781

**SITE FOR SALE**
Sardhar Vallabhai Patel Nagara 40x60 Beside 80 Ft Road Rs. 4,800/- Sqft
(Brokers Excuse)
9742737383
9880368141

**WANTED BRIDE**
Shivaji Maratna Bride
age B/w 21 to 25
Contact Numbers
7483979486

**TELECOM LAYOUT KUBERANANDA SAGARA LAYOUT**
30x40, W/F, 20 Laks
32x40, S/E Corner 32 Lakhs
Ready For Registration & Construction with bank Loan Available
7795609173

**ಬೇಕಾಗಿದ್ದಾರೆ**
ಮೈಸೂರಿನ ದೇವೇಗೌಡ ಸರ್ಕಲ್ ಹಾಗೂ ಶ್ರೀರಾಂಪುರ ಸರ್ಕಲ್ & ಪಿರಿಯಾಪಟ್ಟಣದಲ್ಲಿ ಕೆಲಸ ಮಾಡಲು 45 ವರ್ಷದೊಳಗಿನ ವ್ಯಕ್ತಿಗಳು ಬೇಕಾಗಿದ್ದಾರೆ. ಉಚಿತ ಊಟ ವಸತಿಯೊಂದಿಗೆ ಆಕರ್ಷಕ ವೇತನ ಸಂಪರ್ಕಿಸಿ:
9535784363
9901236401

**ಬೇಕಾಗಿದ್ದಾರೆ**
ಸಾತಗಳ್ಳಿ ಬಳಿಯ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಸಿಬ್ಬಂದಿ ಬೇಕಾಗಿದ್ದಾರೆ.
9972959742

**COMMERCIAL SPACE FOR RENT**
Retail - Offices, Multiplex & Educational Institutions
Area - 540 Sqft
Available in Udayagiri, Mysore-19
7406686748

**ಕಳೆದಿದೆ**
ಮೈಸೂರು ನಗರ–570015, 2ನೇ ಈದ್ಗಾ, ಆನೆಗುಂದಿರಸ್ತೆ, ಮನೆ ನಂ. 3325/23ರಲ್ಲಿ ವಾಸವಾಗಿರುವ ಶ್ರೀ ಮೊಹಮ್ಮದ್ ಖಾನ್ ರವರ ಮಗನಾದ ಶ್ರೀ ಉಬೇದುಲ್ಲಾ ಖಾನ್ ಆದ ನಾನು ಈ ಪ್ರಕಟಣೆ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಅಣ್ಣನಾದ ಮೊಹಮ್ಮದ್ ಜಫ್ರುಲ್ಲಾ ರವರ ಹೆಸರಿಗೆ ನನ್ನ ಸ್ವತ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿದ್ದ 2 ಜಿ.ಪಿ.ಎ ಮೂಲ ಪ್ರತಿಗಳು ಕಳೆದು ಹೋಗಿರುತ್ತದೆ. ಇದುವರೆವಿಗೂ ಸಿಕ್ಕಿರುವುದಿಲ್ಲ. ಈ ಸಂಬಂಧ ಎನ್.ಆರ್.ಮೊಹಲ್ಲಾ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ಸದರಿ ನನ್ನ ದಾಖಲೆ ಪತ್ರಗಳು ಯಾರಿಗಾದರೂ ಸಿಕ್ಕಿದಲ್ಲಿ ನನ್ನ ಮೇಲ್ಕಂಡ ವಿಳಾಸಕ್ಕೆ / ಪೊಲೀಸ್ ಠಾಣೆಗೆ ತಂದು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇದ್ದೇನೆ. ಮೊ: 8147028167

ನಿಮ್ಮ ಅದ್ಭುತ ಜೀವನಕ್ಕೆ ಒಂದು ಸುವರ್ಣಾವಕಾಶ ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿರುವ ರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗಾವಕಾಶವಿದೆ. ರಾಜ್ಯ ಸರ್ಕಾರಿ/ಕೇಂದ್ರಸರ್ಕಾರಿ ನಿವೃತ್ತ/ಸ್ವಯಂ ನಿವೃತ್ತಿ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ, ಆಸಕ್ತಿಯುಳ್ಳ ಅಭ್ಯರ್ಥಿಗಳಿಗೆ ಅವಕಾಶವಿದೆ.
9110676257,9739239004

**ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ**
LIFE PARTNER ಆಗಲು ವಿಚ್ಛೇದಿತೆಗೆ ವರ ಬೇಕು.
BA, BSC, B.Com, MA, M.Com, MSC, MBA, MBBS, BE, M.Tech, B.Ed, D.Ed, M.Ed
ಮೊದಲನೇ ಹಾಗೂ 2ನೇ ಮದುವೆಯಾಗುವ ವಧು–ವರರು ಫೋಟೋ ಹಾಗೂ ವಿವರ, ವಾಟ್ಸ್‌ಪ್ ಮಾಡಿ ನೇರವಾಗಿ ಸಂಪರ್ಕಿಸಿ:
8951241381

**AFFIDAVIT**
I, Sharath Satish S/o Satish Chandra Babu aged about 25 years R/A at No.10, 22nd Block, Madhuvana Layout, Srirampura 2nd Stage, Mysore-570023, to here by Solemnly Affirm that my name is mentioned in Aadhar is SHARATH SATISH But in My Driving Licence eroneously mentioned as SHARATH S. I am swearing the affidavit to furnish my name reflected as SHARATH SATISH in my Driving Licence No. KA4120170077023 this is vide affidavit sworn before Notary Smt. Kamala dt. 12 Dec 2023. Place : Mysore

**ಇಂದೇ ಸಂಪರ್ಕಿಸಿ**
ಮೈಸೂರಿನ ಪ್ರತಿಷ್ಠಿತ ಕಂಪನಿಗೆ, ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದರೆ. Any Qualification 7th, 10th, PUC, ITI, Any Degree, Pass/Fail, ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ ಸಂಬಳ: 15000–35000 (ESI+PF+OT) ಸೇರಿ.
9743889239
9164052361

**ಬೇಕಾಗಿದ್ದಾರೆ**
ಕಂಪನಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
9845028614

**ಡ್ರೈವರ್‌ಗಳು ಬೇಕಾಗಿದ್ದಾರೆ**
ಗೂಡ್ ವಾಹನಕ್ಕೆ ಡ್ರೈವರ್‌ಗಳು ಬೇಕಾಗಿದ್ದಾರೆ. ವಯಸು 30 ವರ್ಷದೊಳಗೆ ವಸತಿ ಉಚಿತ
ಸಂಬಳ: 12000–15000
8884179981

**WANTED**
A lady Helper for Looking after 6 months Baby from 8am to 8pm in Lakshmipuram
9632866616

**ಸುವರ್ಣ ಯಾತ್ರ**
1) 05–01–24 ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗ ದರ್ಶನದೊಂದಿಗೆ 3 ದಿನಗಳು
2) 05–01–24 ಉಜ್ಜಯಿನಿ ಮಹಕಾಳೇಶ್ವರ ಹಾಗೂ ಓಂಕಾರೇಶ್ವರ ಪ್ರವಾಸ 4 ದಿನಗಳು
3) 24–01–24 ನೇಪಾಳ ಪ್ರವಾಸ 9 ದಿನಗಳು (ಮುಕ್ತಿನಾಥ, ಪಶುಪತಿನಾಥ, ಕಠ್ಮಂಡು, ಮನೋಕಾಮನ, ಲುಂಬಿನಿ, ಪೊಕ್ರ, ಜನಕಪುರ)
ಕರೆ ಮಾಡಬೇಕಾದ ನಂಬರ್ :
9008381022,9019462508

**ಮನೆ ಮಾರಾಟಕ್ಕಿದೆ**
EWS N/F ಮನೆ ಗಂಗೋತ್ರಿ ಬಡಾವಣೆ 9ನೇ ಕ್ರಾಸ್ ಮನೆ ನಂ. 242 ಮಾರಾಟಕ್ಕಿದೆ
8088584803

**WANTED**
Front Office Assistant for a Wellness Centre in Gokulam Female with Basic Degree & Excellent English Communication Can Whatsapp Resume to
8105912167

**WANTED SITES & OLD HOUSES**
@ Dattagalli, K.M.Puram, Kuvempunagar, Jayanagar, Saraswathipuram & Mysore-Surroundings
Quick Regn.
9342125252

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ. ಬೆಳಿಗ್ಗೆ 8 ರಿಂದ 3 ಗಂಟೆಯವರೆಗೆ ಒಂಟಿಕೊಪ್ಪಲ್, ಗೋಕುಲಂ, ಪಡುವಾರಹಳ್ಳಿ ಸುತ್ತಮುತ್ತ ಇರುವವರಿಗೆ ಮೊದಲ ಆದ್ಯತೆ
9916623340

**ಕೆಲಸಕ್ಕೆ ಬೇಕಾಗಿದ್ದಾರೆ**
Non Veg ಹೋಟೆಲ್‌ಗೆ ಕ್ಲೀನರ್, ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ.
ಕೆ.ಆರ್.ಆಸ್ಪತ್ರೆ ರಸ್ತೆ, ಮೈಸೂರು
8861673397
8970856325

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
(ಹುಡುಗರು, ಯುವತಿಯರು) ಕ್ಲೀನಿಂಗ್, (ಕಿಚನ್ ಅಸಿಸ್ಟೆಂಟ್‌ರು) ಸಪ್ಲೈಯರ್ ದೇವೇಗೌಡ ಸರ್ಕಲ್ ಬನ್ನೂರು ರಿಂಗ್ ರಸ್ತೆ, ಮೈಸೂರು
8088950055

**40X60**
SITE FOR SALE
NEAR RING ROAD VIJAYANAGAR 4TH STAGE, 2ND PHASE (NEAR SANKALPA APARTMENTS)
8884133677

**BUSINESS OPPORTUNITY**
Are you planning to start a business and be an independent in your life.
Here is an opportunity to get a suggestion as per your need
INTERESTED CAN Contact For An APPOINTMENT
SANJEEVINI ORGANICS
J.P.Nagar, Mysore-31
7406910389

**ಬೇಕಾಗಿದ್ದಾರೆ**
ಫೀಲ್ಡ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಹೊರಗಿನವರಿಗೆ ವಸತಿ ಮತ್ತು ಊಟ ಉಚಿತವಾಗಿರುತ್ತದೆ. ಸಂಬಳ: ರೂ.10,000–12,000 ರವರೆಗೆ ಸಂಪರ್ಕಿಸಿ:
9343550005

**100% TEAK WOOD FACTORY FINISH DOORS**
@ DEPOT RATES

10 YEARS WARRANTY
www.ssbuildmart.com
9901291267
9845426862

**ಮೈಸೂರು ಮಿತ್ರ**
**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಒಂದನೇ ಪುಟದಿಂದ

## ಆದರೆ ಮುನ್ನೆಚ್ಚರಿಕೆ ವಹಿಸಿ

ಉಸಿರಾಟದ ಸಮಸ್ಯೆಯಂತಹ ಲಕ್ಷಣಗಳಿದ್ದವರು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಮೈಸೂರು ನಗರದ ಕೆ.ಆರ್, ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ವಾಬ್ ಟೆಸ್ಟ್ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಕೊರೊನಾ ಟೆಸ್ಟ್ ಮಾಡಿಸಿ ಕೊಂಡು ಸೋಂಕಿರುವುದು ದೃಢಪಟ್ಟವರು ಆಸ್ಪತ್ರೆಗಳಿಗೆ ದಾಖಲಾಗಬೇಕು. ಸೋಂಕಿನ ಲಕ್ಷಣಗಳಿದ್ದು, ನೆಗೆಟೀವ್ ಬಂದರೂ ಅಂತಹವರು ಮನೆಯಲ್ಲಿ ಪ್ರತ್ಯೇಕವಾಗಿರಬೇಕು.

ಲಕ್ಷಣಗಳಿಲ್ಲದಿದ್ದರೂ ಪಾಸಿಟಿವ್ ಬಂದಿದ್ದರೆ ಕೋವಿಡ್ ಮಾರ್ಗಸೂಚಿ ಅನುಸರಿಸುವುದು ಒಳಿತು ಎಂದು ತಿಳಿಸಿದರು. ಮೈಸೂರು ಜಿಲ್ಲಾಡಳಿತವು ಕೋವಿಡ್–19 ಪರಿಸ್ಥಿತಿ ಎದುರಿಸಲು ಸರ್ವ ರೀತಿಯಲ್ಲಿ ಸಜ್ಜಾಗಿರುವುದರಿಂದ ನಾಗರಿಕರು ಆತಂಕಪಡಬೇಕಾಗಿಲ್ಲ. ಆದರೆ, ಮುಂಜಾಗ್ರತಾ ಎಚ್ಚರ ವಹಿಸುವುದು ಅಗತ್ಯ. ನಿರ್ಲಕ್ಷ್ಯ ತೋರದೇ ಕೋವಿಡ್ ಮಾರ್ಗಸೂಚಿ ಪಾಲಿಸಿದರೆ ಮಾತ್ರ ಈ ಸೋಂಕು ತಗುಲದಂತೆ ತಡೆಗಟ್ಟಬಹುದು ಎಂದು ಅವರು ತಿಳಿಸಿದರು.

ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಾಬ್ ಟೆಸ್ಟ್ ಮಾಡಲು ವ್ಯವಸ್ಥೆ ಕಲ್ಪಿಸಿ, ಶೀಘ್ರ ಆಸ್ಪತ್ರೆಗಳ ಪಟ್ಟಿ ಬಿಡುಗಡೆ ಮಾಡುತ್ತೇವೆ. ಒಳರೋಗಿಗಳಾಗಿ ದಾಖಲಿಸಿಕೊಳ್ಳುವ ಆಸ್ಪತ್ರೆಗಳಲ್ಲಿ ಲಿಕ್ವಿಡ್ ಮೆಡಿಕಲ್ ಆಕ್ಸಿಜನ್, ಜನರೇಷನ್, ಐಸಿಯು, ಎಂಐಸಿಯು ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಲಾಗಿದೆ. ಪಿಎಸ್ಎ ಘಟಕ, ಎಲ್ಎಂಓ ಘಟಕ, ಐಸಿಯು ವೆಂಟಿಲೇಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು, ಆಕ್ಸಿಜನ್ ಕಾನ್ಸಂಟ್ರೇಟರ್‌ಗಳು, ಮೆಡಿಕಲ್ ಗ್ಯಾಸ್ ಪೈಪ್‌ಲೈನ್‌ಗಳನ್ನು ಕೋವಿಡ್ ವಾರ್ಡ್‌ಗಳಿಗೆ ಸಂಪರ್ಕ ಕಲ್ಪಿಸಿ, ಅಣಿಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ರಾಜ್ಯದಲ್ಲಿ ಸೋಂಕಿನ ಪ್ರಕರಣ ಹೆಚ್ಚಾಗುತ್ತಿದ್ದು, ಆರೋಗ್ಯ ಸಚಿವರ ನಿರ್ದೇಶನದಂತೆ ಗಡಿಭಾಗದ ಚೆಕ್‌ಪೋಸ್ಟ್‌ಗಳಲ್ಲಿ ಕೇರಳ, ತಮಿಳುನಾಡು ಕಡೆಯಿಂದ ಬರುವವರನ್ನು ಸ್ವಾಬ್ ಪರೀಕ್ಷೆಗೊಳಪಡಿಸಲಾಗುತ್ತಿದ್ದು, ಸೋಂಕಿನ ಲಕ್ಷಣಗಳಿದ್ದರೆ, ಆಸ್ಪತ್ರೆಗೆ ದಾಖಲಿಸಲು ಆರೋಗ್ಯ ಇಲಾಖೆ ಅಧಿಕಾರಿಗಳು ತಯಾರಿ ನಡೆಸಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

## ಕಾರ್ಯಕರ್ತರಿಗೆ ಅಧಿಕಾರ

ಕಾರ್ಯಕರ್ತರ ಶ್ರಮವೂ ಕಾರಣ. ಶಾಸಕರ ಜತೆಗೆ ಕಾರ್ಯಕರ್ತರಿಗೂ ಅಧಿಕಾರ ನೀಡಬೇಕು. ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳುಗಳು ಉಳಿದಿವೆ. ಈ ಹಂತದಲ್ಲಿ ಕಾರ್ಯಕರ್ತರಿಗೆ ಅಧಿಕಾರ ನೀಡದಿದ್ದರೆ ತಪ್ಪು ಸಂದೇಶ ಹೋಗುತ್ತದೆ. ಹೀಗಾಗದಂತೆ ಎಚ್ಚರ ವಹಿಸಿ ಎಂದು ರಾಹುಲ್ ಕಿವಿಮಾತು ಹೇಳಿದರು ಎಂದು ಗೊತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬುಧವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಸಿದ್ದರಾಮಯ್ಯ, 'ನಾವು ಅಖೈರುಗೊಳಿಸಿದ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ನೀಡಿದ್ದೇವೆ. ಪಟ್ಟಿಯನ್ನು ಇನ್ನೂ ನೋಡಿಲ್ಲ ಎಂದು ಖರ್ಗೆಯವರು ತಿಳಿಸಿದ್ದಾರೆ. ನೋಡಿ ತಿಳಿಸುವುದಾಗಿ ಭರವಸೆ ನೀಡಿದ್ದಾರೆ' ಎಂದರು. ಶಿವಕುಮಾರ್ ಸಹ ಇದಕ್ಕೆ ಧ್ವನಿಗೂಡಿಸಿದರು. ಈ ಪಟ್ಟಿಗೆ ಒಂದೆರಡು ದಿನಗಳಲ್ಲಿ ವರಿಷ್ಠರ ಒಪ್ಪಿಗೆ ಸಿಕ್ಕರೂ ಸಿಗಬಹುದು. ಇಲ್ಲದಿದ್ದರೆ 15 ದಿನಗಳೂ ಆಗಬಹುದು ಎಂದು ರಾಜ್ಯದ ಉನ್ನತ ನಾಯಕರೊಬ್ಬರು ತಿಳಿಸಿದರು.

## ಮಾಜಿ ಸಿಎಂ ಕುಮಾರಸ್ವಾಮಿ ಚರ್ಚೆ

ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಆರ್‌ಎಸ್‌ಎಸ್ ಮುಖಂಡರನ್ನು ಭೇಟಿ ಮಾಡಲಿದ್ದಾರೆ. ಈ ಎಲ್ಲಾ ಮುಖಂಡರ ಭೇಟಿ ಸಂದರ್ಭದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಉಪಸ್ಥಿತರಿರಲಿದ್ದಾರೆಂದು ಪಕ್ಷದ ಮೂಲಗಳು ತಿಳಿಸಿವೆ.

ಪ್ರಧಾನಿ ಭೇಟಿ ಸಂದರ್ಭದಲ್ಲಿ ಸಿದ್ದರಾಮಯ್ಯ ಆಡಳಿತದಲ್ಲಿ ನಡೆದಿದೆ ಎನ್ನಲಾದ ಹಗರಣಗಳು, ಭೂ ವ್ಯವಹಾರಕ್ಕೆ ಸಂಬಂಧಿಸಿದ ಆರೋಪಗಳ ದಾಖಲೆಗಳನ್ನು ನೀಡಲಿದ್ದಾರಂತೆ.

ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈ ಹಗರಣಗಳನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವ ತಂತ್ರಗಾರಿಕೆಯೂ ಇದೆ ಎನ್ನಲಾಗಿದೆ.

ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಮತ್ತು ಮತದಾರರ ನಾಡಿಮಿಡಿತದ ಬಗ್ಗೆ ಬಿಜೆಪಿ ನಡೆಸಿರುವ ಚುನಾವಣಾ ಪೂರ್ವ ಸಮೀಕ್ಷೆಗಳು ವರಿಷ್ಠರ ಕೈ ಸೇರಿವೆ. ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಸೀಟು ಹೊಂದಾಣಿಕೆ ಆಗಲಿದೆ. ಇದಕ್ಕೆ ಕುಮಾರಸ್ವಾಮಿ ಅವರು ಸಹಮತ ವ್ಯಕ್ತಪಡಿಸಲಿದ್ದಾರೆ.

ಕರ್ನಾಟಕದಲ್ಲಿ ಮೈತ್ರಿಕೂಟ ಹೆಚ್ಚು ಸ್ಥಾನ ಗಳಿಸಬೇಕು ಎಂಬ ಉದ್ದೇಶ ಎರಡೂ ಪಕ್ಷದ ನಾಯಕರಲ್ಲಿದೆ. ಜೆಡಿಎಸ್ 4 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಲಿದ್ದು, ಉಳಿದ ಕ್ಷೇತ್ರಗಳನ್ನು ಬಿಜೆಪಿಗೆ ಬಿಟ್ಟುಕೊಡಲಿದ್ದಾರೆ.

ನಾಲ್ಕು ಕ್ಷೇತ್ರಗಳ ಬಗ್ಗೆ ಈ ಭೇಟಿ ಸಂದರ್ಭದಲ್ಲೇ ಅಂತಿಮ ನಿರ್ಧಾರವಾಗಲಿದೆ. ಸೀಟು ಹಂಚಿಕೆಯ ಜೊತೆಗೆ ಸಮೀಕ್ಷೆಯನ್ನು ಮುಂದಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಪ್ರಾಥಮಿಕ ಹಂತದ ಚರ್ಚೆಯೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೊಂದಿಗೆ ನಡೆಯಲಿದೆ.

## ತಾಯಿ ಪರಾರಿ

ಮಾರ್ಗದರ್ಶನದಲ್ಲಿ ಪಟ್ಟಣದ ಸಿಎಂಎಸ್ ಮಕ್ಕಳ ನಿಲಯದಲ್ಲಿ ಪಾಲನೆ ಮಾಡಲಾಗುತ್ತಿದೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಮಗುವಿನ ತಾಯಿಯ ಪತ್ತೆಗಾಗಿ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಸುತ್ತಮುತ್ತಲ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯದ ಮಾಹಿತಿ ಕಲೆ ಹಾಕುತ್ತಿದ್ದಾರೆ.

### ಬೆಂಗಳೂರು ಸುರಂಗ ಯೋಜನೆ

# ನಿರ್ಮಲಾ ಸೀತಾರಾಮನ್‌ರಿಂದ 30 ಸಾವಿರ ಕೋಟಿ ರೂ. ನೆರವು ಕೋರಿದ ಡಿಕೆಶಿ



**ಬೆಂಗಳೂರು:** ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ದೆಹಲಿಯಲ್ಲಿ ಕೇಂದ್ರ ಹಣ ಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಸಭೆ ನಡೆಸಿದರು. ಈ ವೇಳೆ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ ನೆರವು ನೀಡುವಂತೆ ಕೋರಿದರು. ಶಿವಕುಮಾರ್ ಅವರು ಕರ್ನಾಟಕದ ಜಲ ಸಂಪನ್ಮೂಲ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ, ಮಾರ್ಗದರ್ಶನ ಮತ್ತು ಬೆಂಬಲವನ್ನು ಕೋರಿದ್ದಾರೆ.

ಸಭೆಯಲ್ಲಿ ಸೀತಾರಾಮನ್ ಅವರಿಗೆ ಸಲ್ಲಿಸಿದ ಪತ್ರದಲ್ಲಿ, ಬೆಂಗಳೂರನ್ನು ವಿಶ್ವದ ಅತ್ಯಂತ ವಾಸಯೋಗ್ಯ ನಗರಗಳಲ್ಲಿ ಒಂದನ್ನಾಗಿ ಮಾಡಲು ರಾಜ್ಯ ಸರ್ಕಾರ ಶ್ರಮಿಸುತ್ತಿದೆ. ಆದಾಗ್ಯೂ, ಹಣ, ಸಂಪನ್ಮೂಲಗಳು ಮತ್ತು ವಿವಿಧ ಸಂಸ್ಥೆಗಳೊಂದಿಗಿನ ಸಮನ್ವಯಕ್ಕೆ ಸಂಬಂಧಿಸಿದಂತೆ ಹಲವಾರು ಸವಾಲುಗಳು ಮತ್ತು ನಿರ್ಬಂಧಗಳನ್ನು ಎದುರಿಸುತ್ತಿದ್ದೇವೆ ಎಂದಿದ್ದಾರೆ.

ಮುಂದುವರಿದು, ನಗರದಲ್ಲಿನ ಸಂಚಾರ ದಟ್ಟಣೆ ನಿವಾರಿಸಲು ಸುರಂಗಗಳ ನಿರ್ಮಾಣ ಮಾಡಲು, ವಿಶ್ವಬ್ಯಾಂಕ್ ನಿಧಿಯ ಮೂಲಕ ಸಾರ್ವಜನಿಕ ಸಾರಿಗೆಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಬೆಂಗಳೂರು ಮೆಟ್ರೋ ರೈಲು ನಿಗಮದ ರೈಲು ಜಾಲ ವಿಸ್ತರಣೆಗೆ ಮತ್ತು ಪ್ರವಾಹದ ಪರಿಣಾಮವನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳಲು ಆರ್ಥಿಕ ನೆರವನ್ನು ಒದಗಿಸುವಲ್ಲಿ ನಿಮ್ಮ ಮಧ್ಯಸ್ಥಿಕೆ ಮತ್ತು ಸಹಾಯವನ್ನು ನಾವು ಬಯಸುತ್ತೇವೆ ಎಂದು ಅವರು ಹೇಳಿದರು.

ನಗರದಲ್ಲಿ ನಾವು 60 ಕಿಮೀ ಉದ್ದದ ಸುರಂಗವನ್ನು ನಿರ್ಮಿಸಲು ಪ್ರಸ್ತಾಪಿಸಿದ್ದೇವೆ. ಇದು ನಗರದೊಳಗೆ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣ ಕಾರಿಡಾರ್ ಅನ್ನು ರಚಿಸುತ್ತದೆ. ಪ್ರಮುಖ ರಸ್ತೆಗಳನ್ನು ಸಂಪರ್ಕಿಸುತ್ತದೆ ಮತ್ತು ಮೇಲ್ಮೈ ದಟ್ಟಣೆಯನ್ನು ನಿವಾರಿಸುತ್ತದೆ' ಎಂದು ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಯೋಜನೆಯ ಅಂದಾಜು ವೆಚ್ಚ 30,000 ಕೋಟಿ ರೂ. ಆಗಿದ್ದು, ಪ್ರತಿ ಕಿಮೀಗೆ 500 ಕೋಟಿ ರೂ. ತಗಲುತ್ತದೆ. ಈ ಸುರಂಗವು ಭೂಗತವಾಗಿರುತ್ತದೆ, ಮೇಲ್ಮೈ ಜಾಗವನ್ನು ಮತ್ತು ಸೌಂದರ್ಯವನ್ನು ಉಳಿಸುತ್ತದೆ. ಈ ಯೋಜಿತ ಯೋಜನೆಯು NH 7 ಅನ್ನು NH 14 ನೊಂದಿಗೆ ಸಂಪರ್ಕಿಸುವುದರಿಂದ, ಇದನ್ನು ಎನ್‌ಎಚ್‌ಎಐ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರ ಕೈಗೆತ್ತಿಕೊಳ್ಳಬಹುದಾಗಿದೆ. ಅಗತ್ಯವಿರುವ ಹಣವನ್ನು ಕರ್ನಾಟಕ ಸರ್ಕಾರ ಮತ್ತು ಎನ್‌ಎಚ್‌ಎಐ ಎರಡಕ್ಕೂ ಕೇಂದ್ರ ಬಜೆಟ್‌ನಿಂದ ದಯೆಯಿಂದ ಮಂಜೂರು ಮಾಡಬಹುದು ಎಂದಿದ್ದಾರೆ.

ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಪರಿಶೀಲಿಸಲು ಮತ್ತು ಮೌಲ್ಯಮಾಪನ ಮಾಡಲು ಜಲಶಕ್ತಿ ಸಚಿವಾಲಯದ ಅಧಿಕಾರಿಗಳಿಗೆ ನಿರ್ದೇಶಿಸಲು ಮತ್ತು ಕಾವೇರಿ ಜಲವಿವಾದಗಳ ನ್ಯಾಯಮಂಡಳಿಯ (ಸಿಡಬ್ಲ್ಯುಡಿಟಿ) ಸಂಬಂಧಿಸಿದ ಮಾರ್ಗಸೂಚಿಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಅನುಮೋದಿಸಲು ವಿನಂತಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಇದರೊಂದಿಗೆ, ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಕೇಂದ್ರದ ನೆರವು ಮತ್ತು ಅದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೋರಿದ್ದಾರೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ 9,177.32 ಕೋಟಿ ರೂ. ಅನುದಾನ ನೀಡುವಂತೆಯೂ ಮನವಿ ಮಾಡಿದ್ದಾರೆ.

# ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

### ಬರ ಪರಿಹಾರ ಕಲ್ಪಿಸಲು ಶೀಘ್ರ ಕ್ರಮ ಕೈಗೊಳ್ಳುವಂತೆ ಮನವಿ



ಬೆಂಗಳೂರು, ಡಿ. 20(ಕೆಎಂಶಿ)– ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಇಂದಿಲ್ಲಿ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕದಲ್ಲಿನ ಬರ ಪರಿಸ್ಥಿತಿಯ ಬಗ್ಗೆ ಮನವಿ ಸಲ್ಲಿಸಿ, ಶೀಘ್ರ ಪರಿಹಾರ ಬಿಡುಗಡೆ ಮಾಡುವಲ್ಲಿ ಪ್ರಕೃತಿ ವಿಕೋಪ ಕುರಿತ ಉನ್ನತ ಮಟ್ಟದ ಸಮಿತಿ ಸಭೆಯನ್ನು ಕೂಡಲೇ ಕರೆದು, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ತಲೆದೋರಿದ್ದು, ರೈತರು, ಅದರಲ್ಲೂ ಸಣ್ಣ ಮತ್ತು ಅತೀ ಸಣ್ಣ ಕೃಷಿಕರು ತೀವ್ರ ಸಂಕಷ್ಟದಲ್ಲಿದ್ದಾರೆ. ಆಸ್ತಿ ವಿಭಜನೆ ಮತ್ತಿತರ ಕಾರಣಗಳಿಂದ ಸಣ್ಣ ಮತ್ತು ಅತೀ ಸಣ್ಣ ರೈತರ ಸಂಖ್ಯೆ 83 ಲಕ್ಷಕ್ಕೆ ಹೆಚ್ಚಿದೆ. 236 ತಾಲೂಕುಗಳ ಪೈಕಿ 223 ತಾಲೂಕುಗಳು ಬರ ಪೀಡಿತವಾಗಿವೆ.

ಸುಮಾರು 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ. ಕೂಡಲೇ ಉನ್ನತ ಮಟ್ಟದ ಸಮಿತಿ ಸಭೆ ನಡೆಸಿ, 18,177.44 ಕೋಟಿ ರೂ. ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಪಿಎಂ–ಕಿಸಾನ್ ಯೋಜನೆಯಡಿ ಬೆಳೆ ಪರಿಹಾರ ವಿತರಣೆಗೆ ಫ್ರೂಟ್ಸ್‌ನಲ್ಲಿನ ದತ್ತಾಂಶ ಪರಿಗಣಿಸುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ತುರ್ತು ಪರಿಹಾರದ ಮೊತ್ತ 12, 577.86 ಕೋಟಿ ರೂ. ಆಗಿದ್ದು, ನವೆಂಬರ್ 4 ರಂದು ಹೆಚ್ಚುವರಿಯಾಗಿ 7 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪೂರಕ ಮನವಿಯೊಂದಿಗೆ ಕೇಂದ್ರದಿಂದ 18,177.44 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದಿದ್ದಾರೆ. ಈ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉಪಸ್ಥಿತರಿದ್ದರು.

# ಸಿರಿಧಾನ್ಯ ಬಳಸಿ ಆರೋಗ್ಯ ಕಾಪಾಡಿಕೊಳ್ಳಿ; ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು

### ಮೇಳದಲ್ಲಿ ಸಿರಿಧಾನ್ಯ ಖರೀದಿಸಿ ಬೆಳೆಗಾರರಿಗೆ ಪ್ರೋತ್ಸಾಹಿಸಿದ ಶಾಸಕರು

ಮೈಸೂರು,ಡಿ.20(ಪಿಎಂ)– ರಾಸಾಯನಿಕ ಗೊಬ್ಬರದಿಂದ ಬೆಳೆಯುವ ಆಹಾರ ಪದಾರ್ಥಗಳನ್ನು ತಿರಸ್ಕರಿಸಿ, ನೈಸರ್ಗಿಕವಾಗಿ ಬೆಳೆದ ಸಿರಿಧಾನ್ಯ ಪದಾರ್ಥಗಳನ್ನು ಬಳಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಮಾಲ್‌ನಲ್ಲಿ ದೊರೆಯುವ ವಿದೇಶಿ ಉತ್ಪನ್ನಗಳಿಗೆ ಮಾರು ಹೋಗದೆ ದೇಶಿಯ ಪದಾರ್ಥಗಳನ್ನು ಉಪಯೋಗಿಸಲು ಮುಂದಾಗಬೇಕು ಎಂದು ಮಾಜಿ ಸಚಿವರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಸಲಹೆ ನೀಡಿದರು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧಿ–ಸಾವಯವ ಕೃಷಿಕರ ಬಳಗ, ಕೃಷಿ ಇಲಾಖೆ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ (ಡಿ.19ರಿಂದ 21) ಸಿರಿಧಾನ್ಯ ಸಂಭ್ರಮ ಶೀರ್ಷಿಕೆಯ ಮೇಳಕ್ಕೆ ಬುಧವಾರ ಭೇಟಿ ನೀಡಿ ಸಿರಿಧಾನ್ಯ ಉತ್ಪನ್ನಗಳನ್ನು ವೀಕ್ಷಿಸಿ ಬಳಿಕ ಅವರು ಮಾತನಾಡಿದರು.

ಬಸವಣ್ಣನವರ 'ಕಾಯಕವೇ ಕೈಲಾಸ' ನುಡಿಯಂತೆ ರೈತರು ಕಾಯಕ ಜೀವಿಗಳು. ಧಾರವಾಡ, ಗುಲ್ಬರ್ಗಾ, ವಿಜಯಪುರ, ಮೈಸೂರು, ಶಿವಮೊಗ್ಗ, ಕೋಲಾರ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ರೈತರು ಸಿರಿಧಾನ್ಯ ಬೆಳೆಯುತ್ತಿದ್ದಾರೆ. ಇದರಿಂದ




ನಗರ ಪ್ರದೇಶದ ಜನರಿಗೆ ಸಿರಿಧಾನ್ಯ ದೊರೆಯುಂತಾಗಿದೆ ಎಂದು ಹೇಳಿದರು.

ರಾಸಾಯನಿಕ ಗೊಬ್ಬರ ಬಳಸುತ್ತಿರುವುದರಿಂದ ಮಣ್ಣಿನ ಫಲವತ್ತತೆ, ಸಾರಾಂಶ ಹಾಳಾಗುತ್ತಿದೆ. ಇದರಿಂದ ಉತ್ತಮ ಬೆಳೆ ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗಾಗಿ ರೈತರು ರಾಸಾಯನಿಕ ಗೊಬ್ಬರದಿಂದ ಮುಕ್ತರಾಗಿ ಸಿರಿಧಾನ್ಯಗಳನ್ನು ಬೆಳೆಯಬೇಕು. ಇಂದು ದೇಶವಲ್ಲದೆ ಹೊರ ದೇಶಗಳಲ್ಲೂ ಸಿರಿಧಾನ್ಯಗಳಿಗೆ ಬೇಡಿಕೆ ಹೆಚ್ಚಿರುವ ಕಾರಣ ಅತೀ ಹೆಚ್ಚು ರೈತರು ಇವುಗಳನ್ನು ಬೆಳೆಯುತ್ತಿದ್ದಾರೆ. ಆ ಮೂಲಕ ಉತ್ತಮ ಆದಾಯ ಕಂಡುಕೊಳ್ಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಿರಿಧಾನ್ಯ ಬೆಳೆಯು ರೈತರ ಪ್ರಮಾಣ ಹೆಚ್ಚಾಗಬೇಕಿದೆ ಎಂದು ನುಡಿದರು.

**ದೇಶದ ಕೃಷಿ ಉಳಿಸಬೇಕು:** ನಗರ ಪ್ರದೇಶಗಳ ಜನ ಮಾಲ್‌ಗಳಲ್ಲಿ ದೊರೆಯುವ ಪದಾರ್ಥಗಳಿಗೆ ಮಾರು ಹೋಗುತ್ತಿದ್ದಾರೆ. ಈ ಪದಾರ್ಥಗಳಿಂದ ಆರೋಗ್ಯ ಹದಗೆಡಲಿದೆ. ಬದಲಿಗೆ ನಮ್ಮ ರೈತರು ಬೆಳೆಯುವ ಸಿರಿಧಾನ್ಯ ಬಳಸಬೇಕು. ನಮ್ಮ ಮಣ್ಣಲ್ಲಿ ಬೆಳೆದು ಮಾರಾಟ ಮಾಡುವ ವಸ್ತುಗಳನ್ನು ಕೊಂಡು ಬಳಸಿ ಆರೋಗ್ಯ ಕಾಪಾಡಿಕೊಳ್ಳಬೇಕು. ಸ್ವಾತಂತ್ರ್ಯ ಚಳವಳಿ ಮಾದರಿ ವಿದೇಶಿ ಆಹಾರ ಕಂಪನಿಗಳಿಂದ ದೂರವಾಗಿ ಸ್ವದೇಶಿ ಪದಾರ್ಥಗಳನ್ನು ಉಪಯೋಗಿಸಿದರೆ ಈ ರಾಷ್ಟ್ರದ ಕೃಷಿ ಉಳಿಯಲಿದೆ ಎಂದು ಹೇಳಿದರು. ರಾಸಾಯನಿಕ ಗೊಬ್ಬರದಿಂದ ಬೆಳೆದ ಆಹಾರ ಪದಾರ್ಥಗಳಿಂದ ಕ್ಯಾನ್ಸರ್, ಹೃದಯಾಘಾತ ಸೇರಿದಂತೆ ಅನೇಕ ಕಾಯಿಲೆಗಳು ಬರುತ್ತಿವೆ. ಇಂತಹ ರೋಗಗಳಿಂದ ಪಾರಾಗಲು ಪೌಷ್ಠಿಕಾಂಶವಿರುವ ಸಿರಿಧಾನ್ಯ ಉತ್ತಮ ಆಹಾರ. ಸಣ್ಣ ಸಣ್ಣ ರೈತರು ಇಂದು ಸಿರಿಧಾನ್ಯ ಬೆಳೆಯುತ್ತಿದ್ದಾರೆ. ಇದಲ್ಲದೆ ಬೇರೆಯವರಿಗೂ ಸಸಿ, ಬಿತ್ತನೆ ಬೀಜಗಳನ್ನು ನೀಡಿ ಪ್ರೋತ್ಸಾಹ ನೀಡುತ್ತಿದ್ದಾರೆ. ಸಿರಿಧಾನ್ಯ ವರ್ಷವೆಂದು ಕೇಂದ್ರ ಸರ್ಕಾರ ಘೋಷಿಸಿದ ಬಳಿಕ ಅನೇಕ ರಾಷ್ಟ್ರಗಳು ನಮ್ಮ ಕಡೆಗೆ ತಿರುಗಿ ನೋಡುವಂತಾಗಿದೆ. ಸಿರಿಧಾನ್ಯವನ್ನು ಬೇಡಿಕೆಗೆ ತಕ್ಕಂತೆ ಪೂರೈಕೆ ಮಾಡಬೇಕಿದೆ ಎಂದು ತಿಳಿಸಿದರು.

> **“ನಾನು ಪ್ರಗತಿಪರ ಕೃಷಿಕನಾಗಿದ್ದೇನೆ. 1965ರಲ್ಲಿ ಸ್ವತಃ ಉತ್ತು ಬಿತ್ತನೆ ಮಾಡಿ ಬೆಳೆಯುತ್ತಿದ್ದೆ. ಅಂದು 11ಕೆಜಿ ಬಾಳೆಗೋನೆ ಬೆಳೆದಿದ್ದೆ. ಪಪ್ಪಾಯಿ, ಅವರೇಕಾಯಿ ಬೆಳೆದಿದ್ದರಿಂದ ಪ್ರಗತಿಪರ ಕೃಷಿಕ ಎನ್ನುವ ಪ್ರಶಸ್ತಿ ಬಂದಿತ್ತು ಕೃಷಿ ನಂಬಿದವರಿಗೆ ಭೂತಾಯಿ ಎಂದಿಗೂ ಕೈ ಬಿಡಲ್ಲ ಎನ್ನುವುದಕ್ಕೆ ನಾನೇ ಉದಾಹರಣೆಯಾಗಿದ್ದೇನೆ.**
> **–ಜಿ.ಟಿ.ದೇವೇಗೌಡ, ಶಾಸಕರು.**

**ಸಿರಿಧಾನ್ಯ ಉತ್ತೇಜಿಸಲು ಸಹಕಾರ:** ಸಿರಿಧಾನ್ಯ ಬೆಳೆಯುವ ರೈತರು ಸಾಧಕರು, ನಿಜವಾದ ದೇಶ ಸೇವಕರು ಎಂದರೆ ಉತ್ಪ್ರೇಕ್ಷೆಯಲ್ಲ. ಅವರು ಜನರ ಆರೋಗ್ಯ ಕಾಪಾಡಲು ಸಿರಿಧಾನ್ಯ ಬೆಳೆಯುತ್ತಿದ್ದಾರೆ. ಸಹಜ ಸಮೃದ್ಧ ಬಳಗದ ಕೆಲಸ ಬಗ್ಗೆ ನನಗೆ ಹೆಚ್ಚು ಮಾಹಿತಿ ಇರಲಿಲ್ಲ. ಈಗ ನನ್ನೊಂದಿಗೆ ಸಂಪರ್ಕ ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ಸಿರಿಧಾನ್ಯಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಹಾಗೂ ರೈತರಿಗೆ ಪ್ರೋತ್ಸಾಹಿಸುವ ಕೆಲಸಕ್ಕೆ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು. ಸಹಜ ಸಮೃದ್ಧಿ ಬಳಗದ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಸೇರಿದಂತೆ ಸಿರಿಧಾನ್ಯ ಬೆಳೆಗಾರರು ಹಾಜರಿದ್ದರು.

# ಅವರದು ಸನ್ಯಾಸಿಯಂತಹ ಬದುಕು

ಹಾಗೂ ವಿದೇಶಕ್ಕೂ ಸರಬ ರಾಜಾಗಬೇಕು. ಇನ್ನಷ್ಟು ಜನರಿಗೆ ಸರ್ ಎಂ.ವಿಶ್ವೇಶ್ವರಯ್ಯ ಅವರ ಸಾಧನೆ ಪಸರಿಸಬೇಕು ಎಂದರು.

**ಮಿಲಿಯನ್‌ಗಟ್ಟಲೆ ರಾಯಲ್ಟಿ ಪಡೆಯ ಬಹುದಾಗಿತ್ತು:** ಕೆಆರ್‌ಎಸ್ ಅಣೆಕಟ್ಟು ಕಟ್ಟುವ ವೇಳೆ ವಿಶ್ವೇಶ್ವರಯ್ಯ ಸ್ವಯಂಚಾಲಿತ ಕ್ರೆಸ್ಟ್‌ಗೇಟ್ ನಿರ್ಮಿಸಿದ್ದಾರೆ. ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಾಗ ಹಾಗೂ ಅಪಾಯದ ಮಟ್ಟ ತಲುಪಿದಾಗ ಈ ಕ್ರೆಸ್ಟ್‌ಗೇಟ್ ತಾನಾಗಿಯೇ ತೆರೆದುಕೊಂಡು ನೀರು ಹೊರಗೆ ಬರುತ್ತದೆ. ಈ ಟೆಕ್ನಾಲಜಿಗೆ ವಿಶ್ವೇಶ್ವರಯ್ಯ ಪೇಟೆಂಟ್ ತೆಗೆದುಕೊಂಡಿದ್ದರೆ ಮಿಲಿಯನ್ ಡಾಲರ್ ರಾಯಲ್ಟಿ ಪಡೆಯಬಹುದಾಗಿತ್ತು. ಉತ್ತರ ಹಾಗೂ ದಕ್ಷಿಣ ಅಮೆರಿಕಾದ ನಡುವೆ ಹಾದು ಹೋಗುವ ನದಿಗೆ ಕೆಆರ್‌ಎಸ್ ಜಲಾಶಯದ ಸ್ವಯಂಚಾಲಿತ ಗೇಟ್ ಅಳವಡಿಸಲಾಯಿತು. ಈ ತಂತ್ರಜ್ಞಾನದ ಹಕ್ಕುಸ್ವಾಮ್ಯತೆ ತೆಗೆದುಕೊಳ್ಳುವಂತೆ ಸಾಕಷ್ಟು ಜನ ವಿಶ್ವೇಶ್ವರಯ್ಯ ಅವರಿಗೆ ಹೇಳಿದರೂ, ಅವರು ತೆಗೆದುಕೊಳ್ಳಲಿಲ್ಲ. ಬದಲಾಗಿ ಜ್ಞಾನ ಇಡೀ ಪ್ರಪಂಚಕ್ಕೆ ಸಲ್ಲಬೇಕು. ಅದನ್ನು ನಾನು ಮಾರಿಕೊಳ್ಳುವುದಿಲ್ಲ ಎಂದು ಹೇಳಿದ್ದರು.

**ಸರ್ ಎಂವಿಗಿತ್ತು ಅಪಾರ ಜನ ಮನ್ನಣೆ:** ವಿಶ್ವೇಶ್ವರಯ್ಯ ಒಂದು ರೀತಿಯಲ್ಲಿ ಸನ್ಯಾಸಿ. ಮೆಚ್ಚುಗೆ, ಲಾಭವನ್ನು ನಿರೀಕ್ಷಿಸಲಿಲ್ಲ. ಉದಾ: ಭದ್ರಾವತಿ ಕಬ್ಬಿಣ ಕಾರ್ಖಾನೆ, ಪೇಪರ್ ಮಿಲ್ ಆರಂಭಿಸಿದಾಗ ವಿಶ್ವೇಶ್ವರಯ್ಯ ಹೆಸರು ನಾಮಕರಣಕ್ಕೆ ಮಹಾರಾಜರು ಮುಂದಾದಾಗ ನಿರಾಕರಿಸಿದರು. ಒಮ್ಮೆ ಪತ್ರಿಕೆಯವರು ಕರ್ನಾಟಕದಲ್ಲಿ ಜನರ ಪ್ರೀತಿ ಸಂಪಾದಿಸಿದ ವ್ಯಕ್ತಿಗಳ ಕುರಿತು ಸರ್ವೆ ನಡೆಸಿದರು. ಆ ಸಂದರ್ಭದಲ್ಲಿ ವರನಟ ಡಾ.ರಾಜಕುಮಾರ್ ಅವರಷ್ಟು ಜನಗಳ ಪ್ರೀತಿ, ಆಕರ್ಷಣೆ ಪಡೆದವರು ಬೇರೆ ಯಾರೂ ಇರಲಿಲ್ಲ. ಆದರೆ, ಸರ್ವೆಯಲ್ಲಿ ಡಾ. ರಾಜಕುಮಾರ್ ಅವರಿಗೆ ಶೇ.21 ಮತ ಬಂದರೆ, ವಿಶ್ವೇಶ್ವರಯ್ಯ ಅವರಿಗೆ ಶೇ.51 ಮತ ಬಂದಿತು. ಅಲ್ಲದೆ, ರಾಷ್ಟ್ರ ಮಟ್ಟದಲ್ಲಿ ನಡೆದ ಸರ್ವೆಯಲ್ಲೂ ಇದು ಪುನರಾವರ್ತನೆಯಾಯಿತು ಎಂದು ವಿವರಿಸಿದರು.

**ಭಾರತ ರತ್ನ ಸ್ವೀಕರಿಸ್ತೇನೆ; ನಿಮ್ಮ ಆರ್ಥಿಕತೆ ಬೆಂಬಲಿಸಲ್ಲ:** ದೇಶದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ ಭಾರತ ರತ್ನ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡುವುದಾಗಿ ವಿಶ್ವೇಶ್ವರಯ್ಯ ಅವರಿಗೆ ಹೇಳಿದಾಗ, ಪ್ರಶಸ್ತಿ ಸ್ವೀಕರಿಸುತ್ತೇನೆ. ಹಾಗಂತ ನಿಮ್ಮ ಆರ್ಥಿಕ ನೀತಿಗಳನ್ನು ಬೆಂಬಲಿಸುತ್ತೇನೆಂದು ತಿಳಿಯಬಾರದು ಎಂದು ನೇರವಾಗಿ ಪ್ರತಿಕ್ರಿಯಿಸಿದ್ದರು. ಏಕೆಂದರೆ ನೆಹರೂ ಅವರದ್ದು ಕಮ್ಯುನಿಸ್ಟ್ ಏಕನಾಮಿಯಾಗಿತ್ತು. ದೇಶದಲ್ಲಿ ಈಗಲೂ ವಂಶಪಾರಂಪರ್ಯ ಆಡಳಿತವೇ ಇದೆ. ಹೀಗಾಗಿಯೇ ಮಹಾತ್ಮಗಾಂಧಿ, ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಸಮಾಧಿ ಸ್ಥಳದ ಸಾಲಿನಲ್ಲಿ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರಿಗೆ ಜಾಗ ಸಿಗಲಿಲ್ಲ. ನರಸಿಂಹರಾವ್ ಅವರು ನಿಧನರಾದಾಗ ಆಂಧ್ರದ ಮುಖ್ಯಮಂತ್ರಿಗೆ ದೂರವಾಣಿ ಕರೆ ಮಾಡಿ, ನರಸಿಂಹರಾವ್ ಆಂಧ್ರದವರು. ಅವರ ಸಮಾಧಿ ಆಂಧ್ರದಲ್ಲೇ ಆಗಬೇಕು ಎಂದು ಹೇಳಿಕೆ ಕೊಡಿಸಿ, ರಾತ್ರೋರಾತ್ರಿ ವಿಶೇಷ ವಿಮಾನದಲ್ಲಿ ಮೃತದೇಹವನ್ನು ದೆಹಲಿಯಿಂದ ಆಂಧ್ರಪ್ರದೇಶಕ್ಕೆ ಕೊಂಡೊಯ್ಯಲಾಯಿತು. ಎಲ್ಲಿಯವರೆಗೂ ವಂಶಪಾರಂಪರ್ಯ ರಾಜಕಾರಣವಿರುತ್ತದೆಯೋ ಅಲ್ಲಿಯವರೆಗೂ ನಿಜವಾದ ಪ್ರಜಾಪ್ರಭುತ್ವವನ್ನು ದೇಶದಲ್ಲಿ ನೋಡಲು ಸಾಧ್ಯವಿಲ್ಲ ಎಂದರು.

**ಕೆಲಸ ಮಾಡಿದವರಿಗೆ ಸದಾ ಕ್ರೆಡಿಟ್ ಸಿಗಬೇಕು:** ನಾವು ಬ್ರಿಟಿಷರಿಂದ ಪ್ರಭಾವಿತರಾದಂತೆ ಕಂಡು ಬರುತ್ತಿದೆ. ಇದರಿಂದ ನಾವು ಇಂದಿಗೂ ಬ್ರಿಟಿಷರಂತೆ ಕೆಲಸ ಮಾಡಿದವರನ್ನು ಬಿಟ್ಟು, ಹಣ ಬಿಡುಗಡೆ ಮಾಡಿದವರ ಹೆಸರನ್ನು ವಿವಿಧ ಯೋಜನೆಗಳು, ಸಂಸ್ಥೆಗಳಿಗೆ ನಾಮಕರಣ ಮಾಡುತ್ತಿದ್ದೇವೆ. ಆದರೆ, ಫ್ರಾನ್ಸ್‌ನಲ್ಲಿ ಸೇತುವೆ ಹಾಗೂ ಕಟ್ಟಡಗಳಿಗೆ ಎಂಜಿನಿಯರುಗಳ ಹೆಸರನ್ನೇ ಇಡುತ್ತಾರೆ. ಜನರ ತೆರಿಗೆಯಲ್ಲಿ ಸೇತುವೆ ನಿರ್ಮಾಣವಾಗಿರಬಹುದು. ಆದರೆ, ನಿರ್ಮಾಣದ ಹಿಂದೆ ಎಂಜಿನಿಯರ್‌ಗಳ ಶ್ರಮವಿರುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮಲ್ಲೂ ಫ್ರಾನ್ಸ್ ಮಾದರಿಯಲ್ಲಿ ಹೆಸರುಗಳನ್ನು ಇಡುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

**ಅಣೆಕಟ್ಟೆ ಬಳಿ ಯಾವುದೇ ಕಾಮಗಾರಿ ನಡೆಸಬಾರದು:** ಸರ್.ಎಂವಿ ಪುಸ್ತಕ ಕುರಿತು ಇತಿಹಾಸ ತಜ್ಞ ಡಾ.ಎನ್.ಎಸ್.ರಂಗರಾಜು ಮಾತನಾಡಿ, ಕನ್ನಂಬಾಡಿ ಅಣೆಕಟ್ಟೆ ಬಳಿ ಡಿಸ್ನಿಲ್ಯಾಂಡ್‌ನಂತಹ ಮನರಂಜನಾ ತಾಣ ಸೇರಿದಂತೆ ಯಾವುದೇ ನಿರ್ಮಾಣ ಮಾಡಬಾರದು. 124 ಅಡಿ ಸಾಮರ್ಥ್ಯದ ಅಣೆಕಟ್ಟೆಗೆ 111 ಅಡಿ ಆಳದವರೆಗೆ ಫೌಂಡೇಷನ್ ಹಾಕಲಾಗಿದೆ. 14.25 ಅಡಿ ಅಗಲದ ಬೇಸ್ಮೆಂಟ್ ಹಾಕಲಾಗಿದೆ. ಇಂದಿಗೂ ಸಣ್ಣ ಸೋರಿಕೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಅಣೆಕಟ್ಟೆಯ ಒಂದು ಕಲ್ಲು ಅಲುಗಾಡಿದರೂ ತೊಂದರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಅಣೆಕಟ್ಟೆ ಬಳಿ ಯಾವುದೇ ಕಾಮಗಾರಿ ನಡೆಸುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟರು.

ಸರ್.ಎಂ.ವಿಶ್ವೇಶ್ವರಯ್ಯ ದಿವಾನರಾಗಿ ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ವಿಶ್ವೇಶ್ವರಯ್ಯ ಅವರ ವ್ಯಕ್ತಿತ್ವಕ್ಕೆ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ. ವಿಶ್ವೇಶ್ವರಯ್ಯ–ನಾಲ್ವಡಿ ಅವರ ಪತ್ರ ವ್ಯವಹಾರ ದಾಖಲೆ ಮಾಡಿದ್ದಾರೆ. ವಿಶ್ವೇಶ್ವರಯ್ಯ ಅವರ ವೈಯಕ್ತಿಕ ಜೀವನವನ್ನು ದಾಖಲಿಸಿದ್ದಾರೆ. ಮೈಸೂರಲ್ಲಿ ಬ್ರಿಟಿಷರ ಆಡಳಿತ ಪ್ರಾರಂಭವಾಗಿದ್ದು 1831ರಿಂದ ಆದರೆ ಕೃತಿಯಲ್ಲಿ 1815 ಎಂದಾಗಿದೆ. ಮೊಘಲರು, ಮರಾಠರು ಮತ್ತು ವಿಜಯನಗರ ಸಾಮ್ರಾಜ್ಯದ ಬಗ್ಗೆ ಚರ್ಚೆ ಅಗತ್ಯ ಇಲ್ಲ. ಮುಂದಿನ ಮುದ್ರಣದಲ್ಲಿ ಬದಲಾವಣೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಡಾ. ದೀಪು.ಆರ್ ವಹಿಸಿದ್ದರು. ಮೈಸೂರು ಅರಮನೆ ಮಂಡಲಿ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಉದ್ಯಮಿ ಎ.ಎಸ್.ಸತೀಶ್, ಲೇಖಕ ಡಾ.ಡಿ.ಎಸ್. ಜಯಪ್ಪಗೌಡ, ಎನ್.ಅಮುದ ಪರಮೇಶ್ವರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಕೃತಿ ಕರ್ತೃ ಡಾ.ಡಿ.ಎಸ್.ಜಯಪ್ಪಗೌಡ, ಅನುವಾದಕ್ಕೆ ಸಹಕರಿಸಿದ ಎನ್.ಅಮುದ ಪರಮೇಶ್ವರ್, ಶುಭ ಹಾಗೂ ಸುಲೋಚನ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

ಒಂದನೇ ಪುಟದಿಂದ

## ಇಬ್ಬರು ಬಲಿ

ರಾಷ್ಟ್ರದ ಕೆಲವು ಭಾಗಗಳಲ್ಲಿ ಹೊಸ ವೈರಾಣು ಕಾಣಿಸಿಕೊಂಡಿದೆ. ಇದೊಂದು ಕೋವಿಡ್–19ರ ರೂಪಾಂತರ, ಭಯ ಬೇಡ. ಆದರೆ, ನಾವು ಎಚ್ಚರಿಕೆ ವಹಿಸಬೇಕಾಗಿದೆ ಎಂದಿದ್ದಾರೆ. ಗೋವಾ ಮತ್ತು ಕೇರಳದಲ್ಲಿ ಪ್ರಕರಣಗಳು ಹೆಚ್ಚು ಕಂಡುಬಂದಿವೆ. ಆದ್ದರಿಂದ ಗಡಿಭಾಗದ ನೀವು, ಮುಂಜಾಗ್ರತಾ ಕ್ರಮ ಕೈಗೊಳ್ಳಿ ಎಂದು ತಿಳಿಸಿದ್ದಾರೆ. ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ 64 ವರ್ಷದ ವೃದ್ಧರೊಬ್ಬರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆಯುತ್ತಿದ್ದಂತೆ ಸರ್ಕಾರ ಎಚ್ಚೆತ್ತು ಹಲವು ಕಠಿಣ ಕ್ರಮಕ್ಕೆ ಮುಂದಾಗಿದೆ. ಕೇಂದ್ರ ಸಚಿವರೊಂದಿಗಿನ ವಿಡಿಯೋ ಸಂವಾದದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ದಿನೇಶ್ ಗುಂಡೂರಾವ್, ಚಾಮರಾಜನಗರ, ಮೈಸೂರು, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚು ಕೋವಿಡ್ ಪರೀಕ್ಷೆ ನಡೆಸುವಂತೆ ಆದೇಶಿಸಲಾಗಿದೆ ಎಂದರು. ಬರುವ ಶನಿವಾರದಿಂದ ಪ್ರತಿನಿತ್ಯ 5,000 ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಕಳೆದ ಭಾರಿ ಸೋಂಕು ಕಂಡಾಗ ಶೇ.90ರಷ್ಟು ಮಂದಿ ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆದುಕೊಂಡರು. ಈ ಬಾರಿ ನಾವು ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿದ್ದೇವೆ. ಸೋಂಕು ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಸಂಬಂಧ ಮುಖ್ಯಮಂತ್ರಿ ಅವರು ನಾಳೆ ಉನ್ನತ ಮಟ್ಟದ ಸಭೆ ಕರೆದಿದ್ದು, ಅದರಲ್ಲಿ ಸಲಹಾ ಸಮಿತಿ ಸದಸ್ಯರು ಇರುತ್ತಾರೆ. ಮುಂದಿನ ಮೂರು ತಿಂಗಳಿಗೆ ಅಗತ್ಯವಿರುವ ಔಷಧ ಮತ್ತು ಆಮ್ಲಜನಕವನ್ನು ಶೇಖರಣೆ ಮಾಡಲಾಗುವುದು, ನಗರದಲ್ಲಿ ಇದಕ್ಕಾಗಿ ಒಂದು ಆಸ್ಪತ್ರೆಯನ್ನು ಮೀಸಲಿಡಲಾಗುವುದು. ರಾಜ್ಯದಲ್ಲಿ ನಿನ್ನೆ ಸೋಂಕಿಗೆ ಮೃತಪಟ್ಟಿರುವ ವ್ಯಕ್ತಿಗೆ ಟಿಬಿ, ಅಸ್ತಮಾ, ಶ್ವಾಸಕೋಶದ ಸಮಸ್ಯೆಗಳಿತ್ತು. ಇದರ ಜೊತೆಗೆ ಸೋಂಕು ತಗುಲಿ ಸಾವನ್ನಪ್ಪಿದ್ದಾರೆ ಎಂದರು.

## ಬಸ್ ಪ್ರಯಾಣಿಕರಿಗೆ ಮಾಸ್ಕ್ ಕಡ್ಡಾಯ

ಸಭೆ ನಡೆದಿದೆ. ಸಭೆಯಲ್ಲಿ ಸಲಹೆ ಪಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಆದೇಶದಂತೆ ಮುಜರಾಯಿ ಇಲಾಖೆ ಹಾಗೂ ಸಾರಿಗೆ ನಿಗಮಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಯಲ್ಲಿ ಪ್ರಯಾಣಿಸುವ ಪ್ರತಿಯೊಬ್ಬ ಪ್ರಯಾಣಿಕರೂ ಮಾಸ್ಕ್ ಧರಿಸಿ ಪ್ರಯಾಣಿಸಿ ಎಂದು ಮನವಿ ಮಾಡಿದರು. ಕೇರಳದಲ್ಲಿ ಕೋವಿಡ್ ಅರ್ಭಟ ಹಿನ್ನೆಲೆ ಕೆಎಸ್‌ಆರ್‌ಟಿಸಿ ಮತ್ತೆ ಅಲರ್ಟ್ ಆಗಿದ್ದು, ಕೇರಳದಿಂದ ಬರುವ ಹಾಗೂ ಹೋಗುವ ಬಸ್ಸುಗಳಿಗೆ ಮುನ್ನೆಚ್ಚರಿಕಾ ಕ್ರಮವಾಗಿ ಸ್ಯಾನಿಟೈಸರ್ ಸಿಂಪಡಿಸಲು ಸಚಿವ ರಾಮಲಿಂಗಾ ರೆಡ್ಡಿ ಸೂಚನೆ ನೀಡಿದ್ದಾರೆ. ಅದರಂತೆ ಅಧಿಕಾರಿಗಳು ಕ್ರಮಕೈಗೊಳ್ಳಲು ಮುಂದಾಗಿದ್ದಾರೆ.

# ತಿದ್ದುಪಡಿ ಮಸೂದೆ ಅಂಗೀಕಾರ

ಪ್ರಯತ್ನವನ್ನು ಉಳಿಸಲು ಮಸೂದೆಗಳನ್ನು ಹಿಂತೆಗೆದುಕೊಳ್ಳಲಾಗಿದೆ ಮತ್ತು ಮತ್ತೆ ಪರಿಚಯಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿವರಿಸಿದರು.

ಭಾರತೀಯ ನ್ಯಾಯ (ಎರಡನೇ) ಸಂಹಿತೆಯು ಈಗ 358 ವಿಭಾಗಗಳನ್ನು ಒಳಗೊಂಡಿದೆ. ಈ ಮಸೂದೆಯ ಮೊದಲ ಆವೃತ್ತಿಯು 356 ಸೆಕ್ಷನ್‌ಗಳನ್ನು ಹೊಂದಿತ್ತು, ಅದರಲ್ಲಿ 175 ಸೆಕ್ಷನ್‌ಗಳು ಭಾರತೀಯ ದಂಡ ಸಂಹಿತೆ (ಐಪಿಸಿ) ಆಧರಿಸಿದ್ದರೆ, 22 ಸೆಕ್ಷನ್‌ಗಳನ್ನು ರದ್ದುಗೊಳಿಸಲು ಪ್ರಸ್ತಾಪಿಸಲಾಗಿತ್ತು ಮತ್ತು 8 ಹೊಸ ಸೆಕ್ಷನ್‌ಗಳನ್ನು ಪರಿಚಯಿಸಲಾಗಿತ್ತು. ಸುಪ್ರೀಂ ಕೋರ್ಟ್ ತಡೆಹಿಡಿದಿದ್ದ 'ದೇಶದ್ರೋಹ' ಅಪರಾಧವನ್ನು ಉಳಿಸಿಕೊಳ್ಳಲಾಗಿಲ್ಲವಾದರೂ, ಪ್ರಸ್ತಾವಿತ ಶಾಸನಕ್ಕೆ ಇದೇ ರೀತಿಯ ನಿಬಂಧನೆಯನ್ನು ಸೇರಿಸಲಾಗಿದೆ. ಸೆಕ್ಷನ್ 152 ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಗೆ ಅಪಾಯವನ್ನುಂಟುಮಾಡುವ ಕೃತ್ಯಗಳನ್ನು ಶಿಕ್ಷಿಸುತ್ತದೆ. ಜಾತಿ, ಭಾಷೆ ಅಥವಾ ವೈಯಕ್ತಿಕ ನಂಬಿಕೆಯ ಆಧಾರದ ಮೇಲೆ ಐದು ಅಥವಾ ಅದಕ್ಕಿಂತ ಹೆಚ್ಚಿನ ಜನರ ಗುಂಪು ಸಂಘಟಿತ ಅಪರಾಧ, ಭಯೋತ್ಪಾದನೆ ಮತ್ತು ಕೊಲೆ ನಡೆಸುವುದನ್ನು ಅಪರಾಧಗಳನ್ನಾಗಿ ಸೇರಿಸಲಾಗಿದೆ.

ಭಾರತೀಯ ನಾಗರಿಕ ಸುರಕ್ಷಾ (ಎರಡನೇ) ಸಂಹಿತಾ ಈಗ 531 ಸೆಕ್ಷನ್‌ಗಳನ್ನು ಹೊಂದಿದೆ. ಮೊದಲ ಮಸೂದೆಯು 533 ಸೆಕ್ಷನ್‌ಗಳನ್ನು ಒಳಗೊಂಡಿತ್ತು, ಅವುಗಳಲ್ಲಿ 150 ಅನ್ನು ಪರಿಷ್ಕರಣೆಯ ನಂತರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯಿಂದ (ಸಿಆರ್‌ಪಿಸಿ) ಪಡೆಯಲಾಯಿತು, ಹಿಂದಿನ ಸಿಆರ್‌ಪಿಸಿಯ 22 ಸೆಕ್ಷನ್‌ಗಳನ್ನು ರದ್ದುಗೊಳಿಸಲು ಪ್ರಸ್ತಾಪಿಸಲಾಯಿತು ಮತ್ತು 9 ಸೆಕ್ಷನ್‌ಗಳನ್ನು ಹೊಸದಾಗಿ ಸೇರಿಸಬೇಕಾಗಿತ್ತು.

ಪ್ರಸ್ತಾವಿತ ಸಂಹಿತೆಯು ಕ್ಷಮಾದಾನ ಅರ್ಜಿಗಳಿಗೆ ಕಾಲಮಿತಿ, ಸಾಕ್ಷಿಗಳ ರಕ್ಷಣೆಗಾಗಿ ಯೋಜನೆ ಮತ್ತು ಹೇಳಿಕೆಗಳನ್ನು ದಾಖಲಿಸಲು ಮತ್ತು ಸಾಕ್ಷ್ಯಗಳನ್ನು ಸಂಗ್ರಹಿಸಲು ಎಲೆಕ್ಟ್ರಾನಿಕ್ ವಿಧಾನಗಳಿಗೆ ಅನುಮತಿ ನೀಡುವಂತಹ ಹೊಸ ಪರಿಕಲ್ಪನೆಗಳಿಗೆ ನಾಂದಿ ಹಾಡಿದೆ. ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಜೈಲು ಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗೆ, ವಿಧಿವಿಜ್ಞಾನ ತನಿಖೆಯನ್ನು ಕಡ್ಡಾಯಗೊಳಿಸಲಾಗಿದೆ. ಮತ್ತೊಂದು ಮಹತ್ವದ ನಿಬಂಧನೆ ಸಾರಾಂಶ ವಿಚಾರಣೆಯ ವ್ಯಾಪ್ತಿಯನ್ನು ವಿಸ್ತರಿಸುತ್ತದೆ, ನಿರ್ದಿಷ್ಟವಾಗಿ ಶಿಕ್ಷೆಯು ಮೂರು ವರ್ಷಗಳನ್ನು ಮೀರದ ಪ್ರಕರಣಗಳಲ್ಲಿ. ಕಾನೂನು ಪ್ರಕ್ರಿಯೆಗಳ ಈ ಸುವ್ಯವಸ್ಥಿತಗೊಳಿಸುವಿಕೆಯು ನ್ಯಾಯವನ್ನು ತ್ವರಿತಗೊಳಿಸುವ ಮತ್ತು ಹೆಚ್ಚು ಪರಿಣಾಮಕಾರಿ ನ್ಯಾಯಾಂಗ ವ್ಯವಸ್ಥೆಯನ್ನು ಖಾತ್ರಿಪಡಿಸುವ ಗುರಿಯನ್ನು ಹೊಂದಿದೆ.

ಇದಲ್ಲದೆ, ಪ್ರಸ್ತಾವಿತ ಕಾನೂನು ವಿವಿಧ ಕಾರ್ಯವಿಧಾನದ ಅಂಶಗಳಿಗೆ ಕಟ್ಟುನಿಟ್ಟಿನ ಸಮಯಮಿತಿಯನ್ನು ಪರಿಚಯಿಸುತ್ತದೆ. ಉದಾಹರಣೆಗೆ, ಮೊದಲ ವಿಚಾರಣೆಯ 7 ದಿನಗಳ ಒಳಗೆ ಪೊಲೀಸರು ತಮ್ಮ ಚಲನ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು ಎಂದು ಆದೇಶಿಸುತ್ತದೆ. ಇದಲ್ಲದೆ, ಆರೋಪಪಟ್ಟಿ ಸಲ್ಲಿಸಿದ 90 ದಿನಗಳಲ್ಲಿ ತನಿಖೆಯನ್ನು ಮುಕ್ತಾಯಗೊಳಿಸಬೇಕು ಎಂದು ಕಾನೂನು ಹೇಳುತ್ತದೆ. ವಿಶೇಷವೆಂದರೆ, ಕಾಯ್ದಿರಿಸಿದ ತೀರ್ಪುಗಳನ್ನು 30 ದಿನಗಳಲ್ಲಿ ಘೋಷಿಸಬೇಕಾಗಿದೆ.

ಭಾರತೀಯ ಸಾಕ್ಷ್ಯ ಮಸೂದೆಯು ಬದಲಾಗದೆ ಉಳಿದಿದೆ ಮತ್ತು 170 ವಿಭಾಗಗಳನ್ನು ಹೊಂದಿದೆ. ಇವುಗಳಲ್ಲಿ, 23 ವಿಭಾಗಗಳನ್ನು ತಿದ್ದುಪಡಿಗಳೊಂದಿಗೆ ಭಾರತೀಯ ಸಾಕ್ಷ್ಯ ಕಾಯಿದೆಯಿಂದ ಪಡೆಯಲಾಗಿದೆ, 1 ವಿಭಾಗವು ಸಂಪೂರ್ಣವಾಗಿ ಹೊಸದು, ಮತ್ತು 5 ವಿಭಾಗಗಳನ್ನು ತೆಗೆದುಹಾಕಲು ಪ್ರಸ್ತಾಪಿಸಲಾಗಿದೆ.

ವಿಶೇಷವೆಂದರೆ, ರಮೇಶ್ ಬಿಧುರಿ ಮತ್ತು ನಿಶಿಕಾಂತ್ ದುಬೆ ಸೇರಿದಂತೆ ಕೆಲವು ಸಂಸದರು ಐಪಿಸಿಯ ಸೆಕ್ಷನ್ 377 ಅನ್ನು ಸುಪ್ರೀಂ ಕೋರ್ಟ್ ತೊಡೆದು ಹಾಕಿದ್ದನ್ನು ಪ್ರಶ್ನಿಸಿದರು ಮತ್ತು ಅದನ್ನು ಮತ್ತೆ ಪರಿಚಯಿಸಲು ಆಗ್ರಹಿಸಿದ್ದರು. ಆದಾಗ್ಯೂ, ಅಂತಹ ಯಾವುದೇ ತಿದ್ದುಪಡಿಯನ್ನು ಗೃಹ ಸಚಿವರು ಸೂಚಿಸಲಿಲ್ಲ.

ಮಸೂದೆಗಳ ಮೊದಲ ಪುನರಾವರ್ತನೆಯನ್ನು ಪರಿಚಯಿಸಿದಾಗ ಲೋಕಸಭೆಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ಮೂರು ಕಾನೂನುಗಳನ್ನು ರೂಪಿಸುವ ಪ್ರಕ್ರಿಯೆಯು 18 ರಾಜ್ಯಗಳು, 7 ಕೇಂದ್ರಾಡಳಿತ ಪ್ರದೇಶಗಳು, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರು, 22 ಕಾನೂನು ವಿಶ್ವವಿದ್ಯಾಲಯಗಳು, 142 ಸಂಸದರು, 270 ಶಾಸಕರು ಮತ್ತು ಹಲವಾರು ಸಾರ್ವಜನಿಕರೊಂದಿಗಿನ ಸಮಾಲೋಚನೆ ಒಳಗೊಂಡಿದೆ ಎಂದು ಹೇಳಿದ್ದರು. ಈ ಪ್ರಯತ್ನವು ನಾಲ್ಕು ವರ್ಷಗಳ ಕಾಲ ನಡೆಯಿತು ಮತ್ತು ಒಟ್ಟು 158 ಸಭೆಗಳನ್ನು ಒಳಗೊಂಡಿತ್ತು.

ಈ ಅಧಿವೇಶನದಲ್ಲಿ ಅಮಾನತುಗೊಂಡ 97 ಸಂಸದರ ಅನುಪಸ್ಥಿತಿಯಲ್ಲಿ ಇಂದು ಮಸೂದೆಗಳನ್ನು ಅಂಗೀಕರಿಸುವ ಮೊದಲು, ಪ್ರಸ್ತಾವಿತ ಕೂಲಂಕಷ ಪರಿಶೀಲನೆಯು ದಂಡನಾತ್ಮಕವಲ್ಲದ. ಆದರೆ, ಎಲ್ಲರಿಗೂ ನ್ಯಾಯವನ್ನು ಖಾತರಿಪಡಿಸುವೆಡೆಗೆ ಗಮನ ಹರಿಸಿದೆ ಎಂದು ಷಾ ಸೆಪ್ಟೆಂಬರ್ ಭಾಷಣದ ವೇಳೆ ಹೇಳಿದ್ದ ತಮ್ಮ ನಿಲುವನ್ನು ಪುನರುಚ್ಚರಿಸಿದರು. ಈ ಮಸೂದೆಗಳು ಭಾರತವನ್ನು ಪೊಲೀಸ್ ರಾಜ್ಯವಾಗಿ ಪರಿವರ್ತಿಸುತ್ತವೆ ಎಂಬ ಕಳವಳಗಳಿಗೆ ಪ್ರತಿಕ್ರಿಯಿಸಿದ ಸಚಿವರು, ಪೊಲೀಸರಿಗೆ ಕೆಲವು ಹೆಚ್ಚುವರಿ ಅಧಿಕಾರಗಳನ್ನು ನೀಡಲಾಗುತ್ತಿದ್ದರೂ, ಅಸ್ತಿತ್ವದಲ್ಲಿರುವ ಕೆಲವು ಅಧಿಕಾರಗಳನ್ನು ಸಹ ನಿರ್ಬಂಧಿಸಲಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದರು. ಪೊಲೀಸ್ ರಾಜ್ಯವಾಗುವುದನ್ನು ತಪ್ಪಿಸಲು ಈ ಕಾನೂನುಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಶಾ ಸಮರ್ಥಿಸಿಕೊಂಡರು.

ಮೈಸೂರು ಮಿತ್ರ



# ಹೆಚ್.ಡಿ.ಕೋಟೆ ತಾಲೂಕು ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್

## ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಘೋಷಣೆ



ಹೆಚ್.ಡಿ.ಕೋಟೆ, ಡಿ.20– ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಅತೀ ಹೆಚ್ಚು ಬಡವರಿದ್ದು, ಇಲ್ಲಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರದಿಂದ ವಿಶೇಷ ಪ್ಯಾಕೇಜ್ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ತಾಲೂಕಿನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಮತ್ತು ಜನತಾ ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ತಾಲೂಕಿನ ಜನರ ಜೀವನ ಸುಧಾರಣೆಗಾಗಿ ಸಮಾಜ ಕಲ್ಯಾಣ ಇಲಾಖೆಯಿಂದಲೂ ಸೌಲಭ್ಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ತಾಲೂಕು ಇದಾಗಿದ್ದು, ಎಲ್ಲಾ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರದಿಂದ ವಿಶೇಷ ಪ್ಯಾಕೇಜ್ ರೀತಿಯಲ್ಲಿ ಅನುದಾನ ಒದಗಿಸುವಂತೆ ಸರ್ಕಾರದ ಗಮನಕ್ಕೆ ತರುತ್ತೇನೆ. ಇಲ್ಲಿನ ರಸ್ತೆ ಅಭಿವೃದ್ಧಿ, ನೀರಾವರಿ ಮುಂತಾದ ಅಭಿವೃದ್ಧಿ ಕೆಲಸಗಳನ್ನು ಶಾಸಕ ಅನಿಲ್ ಚಿಕ್ಕಮಾದು ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾಡಂಚಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಇಲ್ಲಿನ ಜನರು ಅನೇಕ ಮೂಲ ಸೌಕರ್ಯದಿಂದ ವಂಚಿತರಾಗಿದ್ದಾರೆ. ಅನೇಕ ಕಟ್ಟಡ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ ತಾಲೂಕಿನ ಒಟ್ಟಾರೆ ಎಲ್ಲಾ ಸಮಸ್ಯೆಗಳು ನನ್ನ ಗಮನದಲ್ಲಿದೆ. ಕಳೆದ ಬಾರಿಯ ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತಾಲೂಕಿಗೆ ಆಸ್ಪತ್ರೆ ರಸ್ತೆ ಸೇತುವೆ ಸೇರಿದಂತೆ ಅನೇಕ ಸೌಕರ್ಯ ಕಲ್ಪಿಸಲಾಗಿದೆ. ಆದರೂ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಮುಂದುವರಿದ ತಾಲೂಕಾಗಿ ಮಾರ್ಪಾಡು ಮಾಡಲಾಗುವುದು ಎಂದರು.

ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ, ಆಸ್ಪತ್ರೆ ಸೌಲಭ್ಯವಿಲ್ಲ, ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಊಟದ ಸಮಸ್ಯೆ ಕುರಿತಂತೆ ಎಲ್ಲಾ ಸಮಸ್ಯೆಗಳನ್ನು ಕೂಲಂಕಷವಾಗಿ ಅರಿತು ಪರಿಹಾರ ಒದಗಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಸರ್ಕಾರದ ಆಡಳಿತ ನೇರವಾಗಿ ಜನರ ಮನೆಯ ಬಾಗಿಲಿಗೆ ತೆರಳುವ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡು ಜನರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡುತ್ತಿದೆ. ಇಲ್ಲಿ ಅರ್ಜಿ ಸಲ್ಲಿಸಿದ ಎಲ್ಲರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದರು.

ಈ ಭಾಗದಲ್ಲಿ ಮಾನವ–ಪ್ರಾಣಿ ಸಂಘರ್ಷ ಹೆಚ್ಚಾಗಿದ್ದು, ಇದನ್ನು ತಡೆಯಲು ಟಾಸ್ಕ್ ಫೋರ್ಸ್ ರಚನೆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದು, ಸರ್ಕಾರದಿಂದ ಈ ಬಗ್ಗೆ ಹೆಚ್ಚಿನ ಕ್ರಮಕೈಗೊಳ್ಳಲಾಗುವುದು. ಕಂದಾಯ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸಮನ್ವಯತೆಯಿಂದ ಕೆಲಸ ಮಾಡಬೇಕು. ಇಲ್ಲಿನ ರೈತರು ಹಾಗೂ ಆದಿವಾಸಿಗಳ ಸಮಸ್ಯೆಗೆ ತುರ್ತಾಗಿ ಸ್ಪಂದಿಸಬೇಕು ಎಂದು ಸೂಚಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ತಾಲೂಕಿನಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿದ್ದು, ಸರ್ಕಾರದ ಸೌಲಭ್ಯಗಳು ಹೆಚ್ಚು ಅಗತ್ಯವಿದೆ. ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಹಾವಳಿ ಹೆಚ್ಚಾಗಿದ್ದು, ಹೆಚ್ಚು ರೈಲ್ವೆ ಬ್ಯಾರಿಕೇಡ್ ನಿರ್ಮಿಸಬೇಕಿದೆ. ಕಳೆದ ಆರು ತಿಂಗಳಿಂದ ಎಂಟು ಪ್ರಕರಣಗಳು ದಾಖಲಾಗಿದೆ. ಅರಣ್ಯ ಹಾಗೂ ಕಂದಾಯ ಇಲಾಖೆ ಸಮಸ್ಯೆ ಇದೆ. ಈ ಎಲ್ಲವನ್ನು ಸಚಿವರು ಗಮನದಲ್ಲಿರಿಸಿ ಅಭಿವೃದ್ಧಿಗೆ ಅನುದಾನ ಒದಗಿಸಬೇಕು ಎಂದು ಹೇಳಿದರು.

ತಾಲೂಕಿನಲ್ಲಿರುವ ಜಲಾಶಯದಿಂದ ಈ ಭಾಗದ ರೈತರಿಗೆ ನೀರಿನ ಸೌಲಭ್ಯ ಕಲ್ಪಿಸಬೇಕು. ರೈತರಿಗೆ ಸಾಗುವಳಿ ಹಕ್ಕುಪತ್ರ ವಿತರಿಸಬೇಕು. ಅತೀ ಹೆಚ್ಚು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ನೀಡಬೇಕು. ಮಳೆಯಿಂದ ಕುಸಿದ ಮನೆಗಳು, ಸಂಪರ್ಕ ರಸ್ತೆಗಳು, ಕುಡಿಯುವ ನೀರಿನ ಯೋಜನೆಗಳು ಸೇರಿದಂತೆ ಹೆಚ್ಚಿನ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕು ಎಂದು ಸಚಿವರಿಗೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಅರ್ಜಿದಾರರನ್ನು ಕರೆದು ಸಚಿವರು, ಅವರ ಕುಂದು–ಕೊರತೆಯನ್ನು ಆಲಿಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಸ್ಥಳದಲ್ಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಸಿಇಒ ಕೆ.ಎಂ.ಗಾಯಿತ್ರಿ, ಉಪ ವಿಭಾಗಾಧಿಕಾರಿ ರುಚಿ ಬಿಂದಾಲ್, ತಹಸೀಲ್ದಾರ್ ಶ್ರೀನಿವಾಸ್, ತಾಲೂಕು ಪಂಚಾಯತ್ ಇಒ ಧರಣೇಶ್ ಸೇರಿದಂತೆ ಮುಂತಾದ ಅಧಿಕಾರಿಗಳು ಹಾಜರಿದ್ದರು.

## ನಿಮ್ಮ ಜಮೀನಿನಲ್ಲಿ ನೀವೇ ಬೇಸಾಯ ಮಾಡಿ, ಶುಂಠಿ ಬೆಳೆಯಲು ಕೇರಳಿಗರಿಗೆ ಕೊಡಬೇಡಿ



ಹೆಚ್.ಡಿ.ಕೋಟೆ, ಡಿ.20– ಆದಿವಾಸಿಗಳಾದ ನಿಮಗೆ ನಿಮ್ಮ ಹಕ್ಕಿನ ಮೂಲಕ ಪಡೆದ ಜಮೀನನ್ನು ಬೇರೆಯವರಿಗೆ ಗುತ್ತಿಗೆಗಾಗಲಿ ಅಥವಾ ಕೇರಳಿಗರಿಗೆ ಶುಂಠಿ ಬೆಳೆಯಲು ಕೊಡದೆ ನೀವೇ ಉಳುಮೆ ಮಾಡಬೇಕು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ತಾಲೂಕಿನ ಗಡಿ ಭಾಗವಾದ ಡಿ.ಬಿ. ಕುಪ್ಪೆ ಗ್ರಾಮದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಅರಣ್ಯ ಹಕ್ಕು ಕಾಯಿದೆಯಡಿ ಬುಡಕಟ್ಟು ಸಮುದಾಯದವರಿಗೆ ಅರಣ್ಯ ಹಕ್ಕು ಪತ್ರ ವಿತರಿಸಿ ಅವರು ಮಾತನಾಡಿದರು.

ಶಾಸಕ ಅನಿಲ್ ಚಿಕ್ಕಮಾದು ಶ್ರಮದಿಂದ ಇಂದು ಸಾಗುವಳಿ ಪತ್ರವನ್ನು ನೀಡುತ್ತಿದ್ದೇವೆ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಧಿಕಾರವಧಿಯಲ್ಲಿ ಜಾರಿಗೆ ತಂದ ಯೋಜನೆಯಿಂದಾಗಿ ಆದಿವಾಸಿಗಳಿಗೆ ಈಗ ಜಮೀನು ಸಿಕ್ಕಿದೆ ಎಂದರು. ಇದೇ ಸಂದರ್ಭದಲ್ಲಿ 244 ಮಂದಿಗೆ ಅರಣ್ಯ ಹಕ್ಕು ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಪಂ ಸಿಇಒ ಗಾಯಿತ್ರಿ, ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಮುನಿರಾಜು, ತಹಸೀಲ್ದಾರ್ ಶ್ರೀನಿವಾಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ನಾರಾಯಣಸ್ವಾಮಿ, ಮ್ಯಾನೇಜರ್ ನಾಗರಾಜು, ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಒ ಮಧುಕುಮಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಧರಣೇಶ್, ಆರಕ್ಷಕ ನಿರೀಕ್ಷಕ ಲಕ್ಷ್ಮೀಕಾಂತ್, ಉಪ ನಿರೀಕ್ಷಕರಾದ ರವಿಶಂಕರ್, ನಂದೀಶ್, ಷಣ್ಮುಖ ಆರಾಧ್ಯ, ಅಶೋಕ, ಡಿಆರ್‌ಎಫ್‌ಓ ನಾರಾಯಣ್, ಪಿಡಿಓ ದೇವರಾಜ್, ಜಿ.ವಿ. ಶ್ರೀನಿವಾಸ್, ಕ್ಯಾತನಹಳ್ಳಿ ನಾಗರಾಜು, ರಾಜನಾಯಕ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸುಬ್ರಹ್ಮಣ್ಯ, ಆದಿವಾಸಿ ಮುಖಂಡರಾದ ಶೈಲೇಂದ್ರ, ವಿಜಯಕುಮಾರ್, ಕಾವೇರಾ, ದೇವೇಶೆಗೌಡ, ತಿರುಪತಿ, ಆರ್‌ಐ ಗೋವಿಂದರಾಜು ಇದ್ದರು.

## ಕಲ್ಲಿನಿಂದ ಜಜ್ಜಿ ಅಪರಿಚಿತನ ಕಗ್ಗೊಲೆ



**ಹುಣಸೂರು:** ಅಪರಿಚಿತ ವ್ಯಕ್ತಿಯನ್ನು ಕಲ್ಲಿನಿಂದ ಜಜ್ಜಿ ಕೊಲೆ ಮಾಡಿರುವ ಘಟನೆ ನಗರದ ರಾಷ್ಟ್ರೀಯ ಹೆದ್ದಾರಿ 275ರ ಎಪಿಎಂಸಿ ಬಳಿ ಸಂಭವಿಸಿದೆ.

ಮೃತ ವ್ಯಕ್ತಿ 50 ರಿಂದ 55 ವರ್ಷದವನಾಗಿದ್ದು 6.2 ಅಡಿ ಎತ್ತರವಿದ್ದು ಸಾಧಾರಣ ಮೈಕಟ್ಟು ಹೊಂದಿದ್ದಾರೆ. ಎಡ ಬುಜದ ಬಳಿ ಹಳೆ ಗಾಯದ ಗುರುತು ಇದೆ. ಬಲ ಮತ್ತು ಎಡ ಕೈಗಳ ಉಂಗುರ ಬೆರಳಿನಲ್ಲಿ ತಾಮ್ರದ ಉಂಗುರವಿದೆ ನೀಲಿ ಜೀನ್ಸ್ ಪ್ಯಾಂಟ್ ಮತ್ತು ಕಾಫಿ ಬಣ್ಣದ ಟಿ.ಷರ್ಟ್ ಧರಿಸಿದ್ದಾನೆ. ವಾರಸುದಾರರು ನಗರ ಪೊಲೀಸ್ ಇನ್ಸ್‌ಪೆಕ್ಟರ್ ದೇವೇಂದ್ರರವರ ಮೊ.94488 68224 ಕರೆ ಮಾಡಲು ಕೋರಿದ್ದಾರೆ.

ಈತನನ್ನು ಬೇರೆ ಎಲ್ಲಿಂದಲೋ ಕರೆದು ತಂದು ಎಪಿಎಂಸಿ ಬಳಿ ರಾಶಿ ಬಿದ್ದಿರುವ ಸೈಜು ಕಲ್ಲಿನ ಬಳಿ ಜಜ್ಜಿ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿಮಾ ಲಾಟ್ಕರ್, ಅಡಿಷನಲ್ ಎಸ್‌ಪಿ ಡಾ. ನಂದಿನಿ, ಡಿವೈಎಸ್ಪಿ ಗೋಪಾಲಕೃಷ್ಣ ಇನ್ಸ್‌ಪೆಕ್ಟರ್ ದೇವೇಂದ್ರ, ಸಿಬ್ಬಂದಿಗಳಾದ ಪ್ರಭಾಕರ್, ಅನಿಲ್, ಯೋಗೇಶ್, ಬಸವೇಗೌಡ, ತಮ್ಮೇಗೌಡ, ಅರುಣ್, ಮನೋಹರ್, ಬೇಟಿ ನೀಡಿದ್ದರು.

ಶ್ವಾನದಳ, ಬೆರಳಚ್ಚು ವಿಭಾಗದ ಗುರುಪ್ರಸಾದ್ ಮತ್ತು ತಂಡ, ಎಫ್.ಎಸ್.ಎಲ್ ವಿಭಾಗದ ಕೃಷ್ಣಕುಮಾರ್ ಮತ್ತು ತಂಡ ಭೇಟಿ ನೀಡಿ ಮಾಹಿತಿ ಪಡೆದರು.

## ಬೈಕ್‌ಗೆ ಟ್ಯಾಂಕರ್ ಡಿಕ್ಕಿ: ಕುಚುಕುಗಳಿಬ್ಬರ ಸಾವು

### ನಂಜನಗೂಡು ಬಳಿ ಕಾರ್ಖಾನೆಗೆ ತೆರಳುತ್ತಿದ್ದ ವೇಳೆ ದುರಂತ



ನಂಜನಗೂಡು, ಡಿ.20– ಟ್ಯಾಂಕರ್‌ವೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಕಾರ್ಮಿಕರು ಸಾವನ್ನಪ್ಪಿರುವ ಘಟನೆ ತಾಲೂಕಿನ ಮಲ್ಲೂಪುರದ ಬಳಿ ಇಂದು ಬೆಳಗ್ಗೆ ಜರುಗಿದೆ.

ತಗಡೂರು ಗ್ರಾಮದ ಶಿವಮಲ್ಲೆಗೌಡರ ಪುತ್ರ ಮಹೇಶ್(24) ಮತ್ತು ಅದೇ ಗ್ರಾಮದ ನಾಗರಾಜು ಎಂಬುವವರ ಪುತ್ರ ಮಹೇಶ್ (23) ಮೃತ ಯುವ ಕಾರ್ಮಿಕರು. ಸಾವಿನಲ್ಲೂ ಕುಚುಕು ಗೆಳೆಯರು ಒಂದಾಗಿದ್ದಾರೆ.

ತಾಲೂಕಿನ ಅಳಗಂಚಿ ಗ್ರಾಮದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಲ್ಲಿ ದಿನಗೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದ ಈ ಇಬ್ಬರು ಗೆಳೆಯರು ಒಂದೇ ಬೈಕ್‌ನಲ್ಲಿ ಬುಧವಾರ ಬೆಳಿಗ್ಗೆ ಕಾರ್ಖಾನೆ ಕೆಲಸಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಮಲ್ಲೂಪುರ ಗ್ರಾಮದ ಬಳಿ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಬೈಕ್ ಸವಾರ ಮಹೇಶ್ ಸಾವನ್ನಪ್ಪಿದ್ದರು. ಮತ್ತೋರ್ವ ಯುವಕ ಮಹೇಶ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ತೆರಳುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಇವರಿಬ್ಬರು ಪರಸ್ಪರ ಆತ್ಮೀಯ ಗೆಳೆಯರಾಗಿದ್ದು, ಎಲ್ಲಿಗೆ ಹೋದರೂ ಏನೇ ಕೆಲಸ ಮಾಡಿದರು ಒಟ್ಟಿಗೆ ಮಾಡುತ್ತಿದ್ದರು ಎನ್ನಲಾಗಿದೆ. ಕಾರ್ಖಾನೆ ಕೆಲಸಕ್ಕೂ ಇಬ್ಬರು ಒಟ್ಟಿಗೆ ಸೇರಿದ್ದರಂತೆ ಇದೀಗ ಸಾವಿನಲ್ಲೂ ಒಟ್ಟಿಗೆ ಸಾವನ್ನಪ್ಪಿದ್ದು, ಗ್ರಾಮಸ್ಥರಲ್ಲಿ ಶೋಕ ಮಡುಗಟ್ಟಿದೆ.

ಘಟನಾ ಸ್ಥಳಕ್ಕೆ ವರುಣ ಕ್ಷೇತ್ರದ ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿಯ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯ ಭೇಟಿ ನೀಡಿ ನೊಂದ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳಕ್ಕೆ ಬಿಳಿಗೆರೆ ಪೊಲೀಸ್ ಠಾಣೆಯ ಪಿಎಸ್ಐ ಆಕಾಶ್ ಭೇಟಿ ನೀಡಿ, ಟ್ಯಾಂಕರ್ ವಶಕ್ಕೆ ಪಡೆದು ಕೊಂಡು ತನಿಖೆ ಮುಂದುವರೆಸಿದ್ದಾರೆ. ಟ್ಯಾಂಕರ್ ಲಾರಿಯ ಚಾಲಕ ಸ್ಥಳದಿಂದ ನಾಪತ್ತೆಯಾಗಿದ್ದಾನೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬ್ಯಾಡ್ ಮ್ಯಾನರ್ಸ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಮಾಯಾ ನಗರಿ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಎಕ್ಸ್‌ಟ್ರಾ (ತೆ) | 4 ಪ್ರದರ್ಶನಗಳು |
| **ರಾಜಕಮಲ್** | |
| ಅಕ್ವಾ ಮ್ಯಾನ್ ಅಂಡ್ ದ ಲಾಸ್ಟ್ ಕಿಂಗ್‌ಡಮ್(ಇಂ) | 4 ಪ್ರದರ್ಶನಗಳು |
| **ಸಂಗಂ** | |
| ಡಂಕಿ(ಹಿಂ) | 4 ಪ್ರದರ್ಶನಗಳು |
| **ಲಿಡೋ** | |
| ಕೈವಾ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ. |
| ಸ್ಕ್ರೀನ್ 2 | ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ. |
| ಸ್ಕ್ರೀನ್ 3 | ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ. |
| ಸ್ಕ್ರೀನ್ 4 | ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ. |
| ಸ್ಕ್ರೀನ್ 2 | ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 3 | ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 4 | ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ. |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಪಕ್ಷಿ ಬೇಟೆಗಾರರ ಬಂಧನ




**ನಂಜನಗೂಡು:** ತಾಲೂಕಿನ ಹದಿನಾರು ಗ್ರಾಮದ ಕೆರೆ ಹಾಗೂ ಕಾಲುವೆ ಬಳಿ ಪಕ್ಷಿಗಳನ್ನು ಬೇಟೆಯಾಡುತಿದ್ದ ಇಬ್ಬರು ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಅಂಥೋನಿ ಸೇವಿಯರ್ ಹಾಗೂ ರೋಹಿತ್ ಬಂಧಿತ ಆರೋಪಿಗಳಾಗಿದ್ದು, ಬೇಟೆಯಾಡಿದ ಗ್ರೇಟರ್ ಕಾಕಲ್, ರೆಡ್ ನೆಪಿಯರ್ ಐಬಿಸ್ ಹಾಗೂ ಇತರೆ ಒಟ್ಟು ಏಳು ಪಕ್ಷಿಗಳ ಕಳೇಬರ, ಒಂದು ಸ್ಕೂಟರ್, ಒಂದು ಏರ್ ಗನ್ ಅನ್ನು ವಶಕ್ಕೆ ಪಡೆದುಕೊಂಡು ತನಿಖೆ ಕೈಗೊಂಡಿದ್ದಾರೆ.

ಆರೋಪಿಗಳನ್ನು ನಂಜನಗೂಡು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಸ್ಥಳೀಯರು ನೀಡಿದ ಖಚಿತ ಮಾಹಿತಿ ಮೇರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಲಕ್ಷ್ಮೀಕಾಂತ್, ಡಾ.ಬಸವರಾಜು, ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿ ಮದನ್ ಕುಮಾರ್, ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಶರತ್ ಕುಮಾರ್, ವೈಶಾಕ್, ಸುನಿಲ್, ಮಂಜುನಾಥ್, ನಾಗಣ್ಣ ಕಾರ್ಯಾಚರಣೆಯಲ್ಲಿ ಇದ್ದರು.

## ಡಿ.23, ವೈಕುಂಠ ಏಕಾದಶಿ



**ಚುಂಚನಕಟ್ಟೆ:** ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಡಿ.23 ರ ಶನಿವಾರ ವೈಕುಂಠ ಏಕಾದಶಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ

ಅಂದು ಬೆಳಿಗ್ಗೆ 4 ಗಂಟೆಗೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಮತ್ತು ಬೆಳಿಗ್ಗೆ 5.30ಕ್ಕೆ ತೀರ್ಥ ಪ್ರಸಾದ ಮತ್ತು 9 ಗಂಟೆಗೆ ಮಹಾಮಂಗಳಾರತಿ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳು ನಡೆಯಲಿವೆ

ಶಾಸಕ ಡಿ.ರವಿಶಂಕರ್ ಮತ್ತಿತರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕಾಗಿ ದೇವಾಯಲದ ಇಓ ರಘು ಮತ್ತು ದೇವಾಲಯದ ಪ್ರಧಾನ ಅರ್ಚಕ ವಾಸುದೇವನ್ ಕೋರಿದ್ದಾರೆ.

## ಸಂಚಾರಿ ಪೊಲೀಸ್ ಇಲಾಖೆಯ ಮಾಹಿತಿ ಫಲಕಕ್ಕೆ ಬಸ್ ಡಿಕ್ಕಿ

### ಬಸ್ ಜಖಂ, ಹಲವರಿಗೆ ಗಾಯ



**ಹುಣಸೂರು:** ಚಾಲಕನ ನಿಯಂತ್ರಣ ತಪ್ಪಿ ಕೇರಳ ರಾಜ್ಯದ ಸಾರಿಗೆ ಸಂಸ್ಥೆಯ ಬಸ್ ರಸ್ತೆ ಬದಿಯಲ್ಲಿದ್ದ ಪೊಲೀಸ್ ಇಲಾಖೆಯ ಸಂಚಾರಿ ನಿಯಮಗಳ ಮಾಹಿತಿಯ ದೃಶ್ಯ ಪಲಕದ ಸ್ತಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಪ್ರಯಾಣಿಕರು ಸಣ್ಣ ಪುಟ್ಟ ಗಾಯಗಳಿಂದ ಪಾರಾಗಿರುವ ಘಟನೆ ಪಟ್ಟಣದ ರಾಷ್ಟ್ರೀಯ ಹೆದ್ದಾರಿ 275ರ ಎಪಿಎಂಸಿ ಬಳಿ ಸಂಭವಿಸಿದೆ.

ಕೇರಳದ ಸಾರಿಗೆ ಬಸ್ (ಕೆ.ಎಲ್–15 ಎ–0559) ತಲಚೇರಿಯಿಂದ ಬೆಂಗಳೂರಿಗೆ ಹೊರಟಿದ್ದು ರಾತ್ರಿ ಸುಮಾರು 2 ಗಂಟೆ ಸಮಯದಲ್ಲಿ ಚಾಲಕನ ನಿಯಂತ್ರಣ ತಪ್ಪಿ ಈ ಅಪಘಾತ ಸಂಭವಿಸಿದ್ದು, ಬಸ್ಸಿನ ಮುಂಭಾಗ ಜಖಂಗೊಂಡಿದೆ. ಅಪಘಾತದಿಂದ ಚಾಲಕ ಸಾಜು, ಪ್ರಯಾಣಿಕರಾದ ಮಹಮದ್ ಶಖಿಲ್, ಅಫ್ರೀದಾ, ಅಮಲ್, ಕನ್ಗೇಶ್, ಜ್ಯೋತಿಶ್ರೀ, ಮಹಮದ್, ಮಹಮದ್ ಸೊಹೇಲ್ ಹಾಗೂ ಇನ್ನಿತರರಿಗೆ ಸಣ್ಣ ಪುಟ್ಟ ಗಾಯಗಳಾಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಈ ಸಂಬಂಧ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಬಸ್ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ. ಹಾನಿಗೊಳಗಾಗಿರುವ ಪೊಲೀಸ್ ಇಲಾಖೆಯ ಸಂಚಾರಿ ನಿಯಮಗಳ ಮಾಹಿತಿಯ ದೃಶ್ಯ ಪಲಕದ ಸ್ತಂಬ ಸುಮಾರು 4 ಲಕ್ಷದ ವೆಚ್ಚದಲ್ಲಿ ನಿರ್ಮಿಸಲಾಗಿತ್ತು.

ಸ್ಥಳಕ್ಕೆ ಇನ್ಸ್‌ಪೆಕ್ಟರ್ ಧರ್ಮೇಂದ್ರ ಮತ್ತು ಸಿಬ್ಬಂದಿ ಭೇಟಿ ನೀಡಿದ್ದರು.

## ಗಣ್ಯರಿಗೆ 'ಕನ್ನಡ ಸೇವಾ ರತ್ನ ಪ್ರಶಸ್ತಿ' ಪ್ರದಾನ



ಪಿರಿಯಾಪಟ್ಟಣ, ಡಿ.20– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕೊಡಗು ಘಟಕ ಹಾಗೂ ಕುಶಾಲನಗರ ಪ್ರೆಸ್ ಕ್ಲಬ್ ಟ್ರಸ್ಟ್ ವತಿಯಿಂದ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ 68ನೇ ಕನ್ನಡ ರಾಜ್ಯೋತ್ಸವದ 2023ನೇ ಸಾಲಿನ "ಕನ್ನಡ ಸೇವಾ ರತ್ನ ಪ್ರಶಸ್ತಿ" ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಪ್ರದಾನ ಮಾಡಲಾಯಿತು.

ಅದರಲ್ಲಿ ಪಿರಿಯಾಪಟ್ಟಣ ತಾಲೂಕಿನ ಸಮಾಜ ಸೇವಕಿ ಶುಭ ಗೌಡ ಅವರಿಗೆ ಈ ಕನ್ನಡ ಸೇವಾ ರತ್ನ ಪ್ರಶಸ್ತಿಯನ್ನು ಶ್ರೀ ಕ್ಷೇತ್ರ ಕಿರುಗೋಡಿ ಮಠ ಕೊಡಲಿಪೇಟೆ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ರಘುಕೋಟಿ ಸೇರಿದಂತೆ, ಪತ್ರಕರ್ತರ ಸಂಘ ಹಾಗೂ ಕುಶಾಲನಗರ ಪ್ರೆಸ್ ಕ್ಲಬ್ ಟ್ರಸ್ಟ್ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಮಾಜದ ವಿವಿಧ ಗಣ್ಯರು ಭಾಗವಹಿಸಿದ್ದರು.

## ಇಂದು ಚಾ.ನಗರ, ನಾಳಿದ್ದು ಮೈಸೂರಲ್ಲಿ 'ಮಾದಿಗರ ಮುನ್ನಡೆ' ಸಮಾವೇಶ

### ಮಾದಿಗ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮಾಜಿ ಎಂಎಲ್‌ಸಿ ಕರೆ



ತಿ.ನರಸೀಪುರ.ಡಿ.20 – ನಾಳೆ(ಗುರುವಾರ) ಚಾಮರಾಜನಗರ ಮತ್ತು ಡಿ.23 ರಂದು ಮೈಸೂರಿನಲ್ಲಿ 'ಮಾದಿಗರ ಮುನ್ನಡೆ' ಸಮಾವೇಶ ನಡೆಯಲಿದ್ದು, ಮಾದಿಗ ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಒಗ್ಗಟ್ಟು ಪ್ರದರ್ಶನ ಮಾಡುವಂತೆ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಕರೆ ನೀಡಿದ್ದಾರೆ.

ಪಟ್ಟಣ ಸಮೀಪದ ಗೋಪಾಲಪುರ ಗ್ರಾಮದ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಿಗ ಮೀಸಲಾತಿ ವರ್ಗೀಕರಣಕ್ಕೆ ಒತ್ತಾಯಿಸಿ ರಾಜ್ಯದಾದ್ಯಂತ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಸಮುದಾಯ ತನ್ನ ಶಕ್ತಿ ಪ್ರದರ್ಶನ ಮಾಡುವ ಅವಶ್ಯಕತೆ ಇದ್ದು ಎರಡೂ ಜಿಲ್ಲೆಗಳಲ್ಲಿ ನಡೆಯುತ್ತಿರುವ ಮಾದಿಗ ಮುನ್ನಡೆ ಕಾರ್ಯಕ್ರಮಕ್ಕೆ ಅಪಾರ ಸಂಖ್ಯೆಯಲ್ಲಿ ಸಮಾಜದವರು ಭಾಗವಹಿಸಬೇಕು ಎಂದರು.

ಸಮುದಾಯದ ಸ್ವಾಮೀಜಿಗಳಾದ ಮಾದಾರ ಚನ್ನಯ್ಯ ಸ್ವಾಮೀಜಿ, ಷಡಕ್ಷರ ಸ್ವಾಮೀಜಿ ಸೇರಿದಂತೆ ಪ್ರಮುಖ ನಾಲ್ವರು ಸ್ವಾಮೀಜಿಗಳು ಹಾಗೂ ಜನಾಂಗದ ನಾಯಕರೆಲ್ಲಾ ಬೆಂಗಳೂರಿನಲ್ಲಿ ಸಭೆ ಸೇರಿದ ನಂತರ ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶ ಮಾಡಲು ನಿರ್ಧರಿಸಿದ್ದು,ಈಗಲಾದರೂ ಸಮುದಾಯ ಎಚ್ಚೆತ್ತುಕೊಳ್ಳಬೇಕಿದೆ.ಮಾದಿಗ ಸಮಾಜಕ್ಕೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸ್ಥಾನ ಮಾನಗಳು ಜನಸಂಖ್ಯೆಗೆ ಅನುಗುಣವಾಗಿ ತಲುಪುತ್ತಿಲ್ಲವೆಂದು ರಾಜ್ಯ ಮಟ್ಟದ ಹಾಗು ಜಿಲ್ಲಾ ಮಟ್ಟದ ಸಮ್ಮೇಳನಗಳನ್ನು ಮಾಡಿ ಅನೇಕ ಬಗೆಯ ಹೋರಾಟ ಮಾಡಲಾಗಿದೆ ಎಂದು ಅವರು ಹೇಳಿದರು.

ಕಳೆದ 40 ವರ್ಷಗಳ ಹಿಂದೆಯೇ ನಾನು ವಿಧಾನಪರಿಷತ್ ಸದಸ್ಯನಾಗಿದ್ದ ವೇಳೆಯೇ ಮಾದಿಗರ ಮೀಸಲಾತಿ ಹೋರಾಟವನ್ನು ಪ್ರಾರಂಭಿಸಿದ್ದೆ.ಸಮಾಜದಲ್ಲಿ ಒಗ್ಗಟ್ಟು ಇಲ್ಲದ್ದರಿಂದ ಹೋರಾಟ ಯಶಸ್ವಿ ಬಗ್ಗೆ ಅನುಮಾನ ಇತ್ತು. ಆದರೆ ಈಗ ಮೀಸಲಾತಿ ವರ್ಗೀಕರಣದ ಹೋರಾಟದ ವಿಷಯು ಪ್ರಧಾನ ಮಂತ್ರಿವರೆಗೂ ತಲುಪಿದ್ದು ಹೊಸ ಆಶಾಕಿರಣ ಮೂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

**ಆರ್‌ಎಸ್‌ಎಸ್ ಸಂಸ್ಥೆಗೆ ಕೃತಜ್ಞರಾಗಿರಬೇಕು!:** ಎಲ್ಲೋ ಒಂದು ಕಡೆ ಮಾದಿಗ ಮೀಸಲಾತಿ ವರ್ಗೀಕರಣ ಮಾಡುವ ವಿಷಯವನ್ನು ಪ್ರಧಾನ ಮಂತ್ರಿವರೆಗೆ ತಲುಪಿಸಲು ನಾವು ವಿಫಲರಾಗಿದ್ದೆವು.ಆದರೆ ಮಾದಿಗ ಮೀಸಲಾತಿ ಹೋರಾಟದ ಬಗ್ಗೆ ಆಳವಾದ ಅಧ್ಯಯನ ಮಾಡಿದ ಆರೆಸ್ಸೆಸ್ ಸಂಸ್ಥೆ ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದೆ. ಕಳೆದ ತಿಂಗಳು ಆಂಧ್ರಪ್ರದೇಶದಲ್ಲಿ ನಡೆದ ಮಾದಿಗರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಮೀಸಲಾತಿ ವರ್ಗೀಕರಣ ದೊರಕಿಸಿ ಕೊಡುವ ಭರವಸೆ ನೀಡಿದ್ದಾರೆ. ಹಾಗಾಗಿ ಸಮಾಜದ ಎಲ್ಲರೂ ಆರ್‌ಎಸ್‌ಎಸ್ ಸಂಸ್ಥೆಗೆ ಕೃತಜ್ಞರಾಗಿರಬೇಕಿದೆ ಎಂದರು.

**ಮೋದಿಯವರಿಂದ ಅನುಕೂಲ! :** ಎಲ್ಲ ಕ್ಷೇತ್ರಗಳಲ್ಲೂ ಅವಕಾಶ ವಂಚಿತರಾಗಿರುವ ಮಾದಿಗ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡುವ ಸಲುವಾಗಿ ಮೋದಿಜಿಯವರು ಕೇಂದ್ರದ ಅಧಿಕಾರಿಗಳೊಂದಿಗೆ, ನಾಯಕರೊಂದಿಗೆ ಚರ್ಚೆ ಮಾಡುತ್ತಿದ್ದಾರೆ. ಇಂದಲ್ಲ ನಾಳೆ ಪ್ರಧಾನಿಯವರಿಂದ ಸಮಾಜಕ್ಕೆ ಒಳ್ಳೆಯದೇ ಆಗುತ್ತೆ ಎಂದು ರಮೇಶ್ ವಿಶ್ವಾಸ ವ್ಯಕ್ತಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವು, ಸಮಾಜದ ಮುಖಂಡರಾದ ಸಿ.ಡಿ.ವೆಂಕಟೇಶ್, ರಂಗಾಚಾರಿಹುಂಡಿ ಕಿರಣ್ ಇದ್ದರು.

### 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಸ್ಪರ್ಧೆ

# ದೇಶದಾದ್ಯಂತ 179 ತಂಡಗಳು ಬಹುಮಾನಕ್ಕೆ ಭಾಜನ

## ಮೈಸೂರು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಸ್ಪರ್ಧೆಯಲ್ಲಿ ಸದರಿ ಕಾಲೇಜು ತಂಡವೂ ಸೇರಿ ಐದು ತಂಡಗಳಿಗೆ ಬಹುಮಾನ



ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ ಬುಧವಾರ ರಾತ್ರಿ ನಡೆಯಿತು.

ಮೈಸೂರು,ಡಿ.20(ಪಿಎಂ)– ಕೇಂದ್ರ ಶಿಕ್ಷಣ ಸಚಿವಾಲಯದ ಇನ್ನೋವೇಟಿವ್ ಸೆಲ್ (ಆವಿಷ್ಕಾರ ವಿಭಾಗ) ಮತ್ತು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆ (ಎಐಸಿಟಿಇ) ಜಂಟಿ ಆಶ್ರಯದಲ್ಲಿ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ದೇಶದ 36 (ಸಾಫ್ಟ್‌ವೇರ್ ವಿಭಾಗದ) ನೋಡಲ್ ಕೇಂದ್ರಗಳಲ್ಲಿ ನಡೆದ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ (ಎಸ್‌ಐಹೆಚ್)–2023' ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಸ್ಪರ್ಧೆಯಲ್ಲಿ ದೇಶದಾದ್ಯಂತ 179 ತಂಡಗಳು ಬಹುಮಾನಕ್ಕೆ ಭಾಜನಗೊಂಡಿವೆ.

ನೋಡಲ್ ಕೇಂದ್ರಗಳಲ್ಲಿ ಒಂದಾದ ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಸಂವಹನ ಸಚಿವಾಲಯದ (ಅಂಚೆ ಇಲಾಖೆ) ಒಂದು ಸವಾಲು, ಹಿಮಾಚಲ ಪ್ರದೇಶ ಸರ್ಕಾರದ ಎರಡು ಸವಾಲುಗಳು ಹಾಗೂ ಖಾಸಗಿ ವಲಯದ ಎರಡು ಸವಾಲುಗಳಿಗೆ 27 ತಂಡಗಳಿಂದ ಸ್ಪರ್ಧೆ ಏರ್ಪಟ್ಟಿತ್ತು. ಅಂತಿಮವಾಗಿ ಇವುಗಳಿಗೆ ಸೂಕ್ತ ಪರಿಹಾರದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ ಐದು ತಂಡಗಳು ಬಹುಮಾನ ಪಡೆದವು.

ಬಜಾಜ್ ಫಿನ್ ಸರ್ವಿಸ್‌ನ 'ಸಮಾನ ರೂಪದ ದಾಖಲೆ ತುಲನ ಕ್ರಮಾವಳಿ' ಸವಾಲಿಗೆ ಅತ್ಯುತ್ತಮ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಚೆನ್ನೈನ ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ತಂಡ ಬಹುಮಾನಕ್ಕೆ ಭಾಜನವಾಯಿತು. ಅದೇ ರೀತಿ ಅಂಚೆ ಇಲಾಖೆಯ 'ಡಾಕ್ ಘರ್ ನಿರ್ಯಾತ್ ಕೇಂದ್ರ'ದ ಸವಾಲಿಗೆ ಅತ್ಯುತ್ತಮ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಪುಣೆಯ ವಿಶ್ವಕರ್ಮ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆ ತಂಡ, ಹಿಮಾಚಲ ಪ್ರದೇಶ ಸರ್ಕಾರದ ಆರೋಗ್ಯ ಇಲಾಖೆಯ ಸವಾಲಿಗೆ ಅತ್ಯುತ್ತಮ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಜವಾಹರಲಾಲ್ ನೆಹರು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಮುಂಬೈನ ತಡೋಮಲ್ ಶಹಾನಿ ಇಂಜಿನಿಯರಿಂಗ್ ಕಾಲೇಜು ಜಂಟಿಯಾಗಿ ಬಹುಮಾನಕ್ಕೆ ಭಾಜನವಾದವು.

ಅಂತೆಯೇ ಆಟೋ ಡೆಸ್ಕ್ ಕಂಪನಿಯ 'ಸ್ಮಾರ್ಟ್ ಗ್ಲಾಸ್ ಕ್ಲೀನಿಂಗ್ ರೋಬೋಟ್' ಸವಾಲಿಗೆ ಅತ್ಯುತ್ತಮ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ದಯಾನಂದ ಸಾಗರ್ ಯೂನಿವರ್ಸಿಟಿ ಸಂಸ್ಥೆಯ ತಂಡ, ಹಿಮಾಚಲ ಪ್ರದೇಶ ಸರ್ಕಾರದ ಸಾರಿಗೆ ಇಲಾಖೆ ಸವಾಲಿಗೆ ಅತ್ಯುತ್ತಮ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ತಂಡ ಬಹುಮಾನ ಪಡೆದವು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಎಐಸಿಟಿಇ ಉಪ ನಿರ್ದೇಶಕ ಡಾ.ನಿಖಿಲ್‌ಕಾಂತ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಪ್ರತಿ ವಿಜೇತ ತಂಡಕ್ಕೆ 1 ಲಕ್ಷ ರೂ. ನಗದು ಬಹುಮಾನ ನೀಡಲಾಯಿತು. ಫಲಿತಾಂಶವು ಬುಧವಾರ ರಾತ್ರಿ ಪ್ರಕಟಗೊಂಡಿತು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ.ಎಂ.ಆರ್.ಪೂಜಾ, ಪ್ರಾಧ್ಯಾಪಕ ನಿತಿನ್‌ಕುಮಾರ್ ಮತ್ತಿತರರು ಹಾಜರಿದ್ದರು.

# ಸಂಸತ್ ಭದ್ರತಾ ಲೋಪ: ಮತ್ತೊಬ್ಬ ಆರೋಪಿ ಬಂಧಿಸಿದ ದೆಹಲಿ ಪೊಲೀಸರು

ನವದೆಹಲಿ: ಡಿ.13ರಂದು ಇಬ್ಬರು ಯುವಕರು ಲೋಕಸಭೆಯ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದು ಹೊಗೆ ಬಾಂಬ್ ಸಿಡಿಸಿ ಸಂಸತ್ತಿನಲ್ಲಿ ಕೋಲಾಹಲ ಸೃಷ್ಟಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಸೇರಿದಂತೆ ಐವರನ್ನು ದೆಹಲಿ ಪೊಲೀಸರು ಬಂಧಿಸಿದ್ದರು.

ಇದೀಗ ಜಲೌನ್‌ನ ನಿವಾಸಿ ಅತುಲ್ ಕುಲಶ್ರೇಷ್ಠ ಅಲಿಯಾಸ್ ಬಚಾ ಎಂಬಾತನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಓರೈ ತಲುಪಿದ ದೆಹಲಿಯ ವಿಶೇಷ ಸೆಲ್ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗಾಗಿ ದೆಹಲಿಗೆ ಕರೆದೊಯ್ದಿದ್ದಾರೆ. ಈ ಘಟನೆಯ ನಂತರ ಅತುಲ್ ಮನೆಯಲ್ಲಿ ಮೌನ ಆವರಿಸಿದೆ.

ಜಲೌನ್‌ನಲ್ಲಿ ದೆಹಲಿ ಪೊಲೀಸರು ಬಂಧಿಸಿರುವ ಅತುಲ್ ಕುಲಶ್ರೇಷ್ಠ ಬಚ್ಚಾ ಸಂಸತ್ತಿಗೆ ನುಗ್ಗಿದ ಆರೋಪಿಗಳೊಂದಿಗೆ ಫೇಸ್‌ಬುಕ್‌ನಲ್ಲಿ ಚಾಟ್ ಮಾಡಿದ ಭಗತ್ ಸಿಂಗ್ ಫ್ಯಾನ್ಸ್ ಕ್ಲಬ್‌ನೊಂದಿಗೆ ಸಂಬಂಧ ಹೊಂದಿದ್ದಾರೆ. ಅತುಲ್ ಕುಲಶ್ರೇಷ್ಠ ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೂ ಶಹೀದ್ ಆಜಮ್ ಸರ್ದಾರ್ ಭಗತ್ ಸಿಂಗ್ ಅವರ ಸಿದ್ಧಾಂತದೊಂದಿಗೆ ಸಂಬಂಧ ಹೊಂದಿದ್ದಾರೆ. ಆತ ಅನೇಕ ಬಾರಿ ಸೆಮಿನಾರ್‌ಗಳು ಮತ್ತು ಸಭೆಗಳಲ್ಲಿ ಭಾಗವಹಿಸಿದ್ದನು. ಆದರೆ ಆತ ಯಾವುದೇ ಕ್ರಿಮಿನಲ್ ದಾಖಲೆಯನ್ನು ಹೊಂದಿಲ್ಲ. ಯಾವುದೇ



ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿಲ್ಲ.

ಸಂಸತ್ತಿಗೆ ನುಗ್ಗಿದ ಆರೋಪಿಗಳೊಂದಿಗೆ ಚಾಟ್ ಮಾಡಿದ್ದರಿಂದ ದೆಹಲಿ ಪೊಲೀಸರು ಅತುಲ್‌ನನ್ನು ವಶಕ್ಕೆ ಪಡೆದಿದ್ದಾರೆ. ಬಂಧನದಿಂದಾಗಿ ಮನೆ ಮತ್ತು ನೆರೆಹೊರೆಯಲ್ಲಿ ನೀರವ ಮೌನ ಆವರಿಸಿದೆ. ಬಚ್ಚಾ ಕುಲಶ್ರೇಷ್ಠ ಬಂಧನ ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ. ದೆಹಲಿ ಪೊಲೀಸರು ಬಂಧಿಸಿರುವ ವಿಚಾರ ಚರ್ಚೆಗೆ ಗ್ರಾಸವಾಗಿದೆ. ಮಂಗಳವಾರ ಸಂಜೆ ದೆಹಲಿ ಪೊಲೀಸರು ಬಂದಿದ್ದು, ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದಾರೆ ಮತ್ತು ಆತನ ಹೆಸರು ಅತುಲ್ ಕುಲಶ್ರೇಷ್ಠ ಎಂದು ಜಲೌನ್ ಎಸ್ಪಿ ಡಾ. ಇರಾಜ್ ರಾಜಾ ಹೇಳಿದ್ದಾರೆ.



# ಕರ್ನಾಟಕ ಭವನ ಕಟ್ಟಡ ಪುನರ್ ನಿರ್ಮಾಣ: 2024ರ ಜೂನ್ ಒಳಗೆ ಪೂರ್ಣಗೊಳಿಸಿ

**ನವದೆಹಲಿ:** ಇಲ್ಲಿನ ಮುಖ್ಯ ಕರ್ನಾಟಕ ಭವನ ಕಟ್ಟಡದ ಪುನರ್ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ



ಪರಿಶೀಲಿಸಿದ್ದು, ಮುಂದಿನ ವರ್ಷ ಜೂನ್ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ದೆಹಲಿಯ ಚಾಣಕ್ಯಪುರಿ ಪ್ರದೇಶದ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದ ಮುಖ್ಯ ಕಟ್ಟಡದ ಸಿವಿಲ್ ಕಾಮಗಾರಿ ಕೊನೆಯ ಹಂತದಲ್ಲಿದೆ. ಮೂಲಗಳ ಪ್ರಕಾರ, 2024ರ ಜೂನ್ ಒಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಅಂದಾಜು 80–85 ಕೋಟಿ ರೂ. ವೆಚ್ಚದಲ್ಲಿ ಕಟ್ಟಡದ ಪುನರ್ನಿರ್ಮಾಣ ಕಾರ್ಯವು 2020ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯು ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಬೇಕಿತ್ತು. ಆದರೆ, ಕೋವಿಡ್–19 ಸಾಂಕ್ರಾಮಿಕ ಮತ್ತು ದೆಹಲಿ ಸರ್ಕಾರದ ಮಾಲಿನ್ಯ ನಿರ್ಬಂಧಗಳಿಂದಾಗಿ ಕೆಲಸ ವಿಳಂಬವಾಗಿದೆ ಎಂದು ಮೂಲಗಳು ತಿಳಿಸಿವೆ. ಇದರಿಂದಾಗಿ ಯೋಜನೆಯ ವೆಚ್ಚ ಈಗ 120 ಕೋಟಿ ರೂ.ಗೆ ಏರಿಕೆಯಾಗಿದೆ. ಕಾಮಗಾರಿ ಪರಿಶೀಲನೆ ವೇಳೆ ರೆಸಿಡೆಂಟ್ ಕಮಿಷನರ್ ಇಂಕೊಂಗ್ಲಾ ಜಮೀರ್, ಹೆಚ್ಚುವರಿ ರೆಸಿಡೆಂಟ್ ಕಮಿಷನರ್ ಕೃತಿ ಬನ್ಸಾಲ್, ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಿ. ಅನಂತ, ಸಹಾಯಕ ಎಂಜಿನಿಯರ್ ಎನ್‌ಎಲ್ ಶರತ್ ಕುಮಾರ್ ಮತ್ತು ವಾಸ್ತುಶಿಲ್ಪಿ ಉದಯ್ ಭಟ್ ಇದ್ದರು.

# ಅಮಾಯಕರಿಂದ ಲಕ್ಷ... ಲಕ್ಷ... ನುಂಗುತ್ತಿರುವ 'ಬಹುಮಾನ ಭೂತ'

### ಆನ್‌ಲೈನ್ ಮೂಲಕ ಲಕ್ಷಾಂತರ ರೂ. ಬಹುಮಾನ ಆಸೆ ತೋರಿಸಿ ಭಾರೀ ವಂಚನೆ

ಮಳವಳ್ಳಿ, ಡಿ.20–ಮೆಶೋ ಆನ್‌ಲೈನ್ ಕಂಪನಿಯಿಂದ ಬಹುಮಾನ ಬಂದಿದೆ ಎಂದು ನಂಬಿಸಿ ವ್ಯಕ್ತಿಯೊಬ್ಬರಿಗೆ 9.54 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವಂಚಿಸಲಾಗಿದೆ.

ಮಳವಳ್ಳಿ ಟೌನ್ ನಾಗೇಗೌಡ ಬಡಾವಣೆ ನಿವಾಸಿ ಪ್ರಸನ್ನ(30) ವಂಚನೆಗೊಳಗಾದವರಾಗಿದ್ದು, ಇವರಿಗೆ ಸ್ಪೀಡ್ ಪೋಸ್ಟ್‌ನಲ್ಲಿ ಮೆಶೋ ಆನ್‌ಲೈನ್ ಕಂಪನಿ ಹೆಸರಿನಲ್ಲಿ ಬಂದಿದ್ದ ಕವರ್‌ನಲ್ಲಿದ್ದ ಕೂಪನ್ ಅನ್ನು ಸ್ಕ್ರಾಚ್ ಮಾಡಿದಾಗ 15.51 ಲಕ್ಷ ರೂ. ಬಹುಮಾನ ಬಂದಿರುವುದಾಗಿ ನಮೂದಾಗಿತ್ತು. ಕೂಪನ್‌ನಲ್ಲಿದ್ದ ಮೊಬೈಲ್ ಸಂಖ್ಯೆ 7520134474ಗೆ ಕರೆ ಮಾಡಿದಾಗ ಮಾತನಾಡಿದ ವಂಚಕ ತಾವು ಕಳುಹಿಸಿರುವ ಫಾರಂ ಅನ್ನು ಭರ್ತಿ ಮಾಡಿ ಆಧಾರ್ ಕಾರ್ಡ್, ಫೋಟೋ ಇನ್ನಿತರ ದಾಖಲೆಗಳನ್ನು 7439224370ಗೆ ವಾಟ್ಸಾಪ್ ಮಾಡುವಂತೆ ತಿಳಿಸಿದ್ದಾನೆ. ಪ್ರಸನ್ನ ಅವರು ಎಲ್ಲಾ ದಾಖಲೆಗಳನ್ನು ವಾಟ್ಸಾಪ್ ಮಾಡಿದ ನಂತರ ಕರೆ ಮಾಡಿದ ವ್ಯಕ್ತಿಗಳು ವಿವಿಧ ಶುಲ್ಕಗಳು ಎಂದು ತಿಳಿಸಿ, ಸುಮಾರು ಒಂದು ತಿಂಗಳ ಕಾಲ ಹಂತ ಹಂತವಾಗಿ 8 ಮಂದಿಯ ಬ್ಯಾಂಕ್ ಅಕೌಂಟ್‌ಗೆ 9,54,640 ರೂ.ಗಳನ್ನು ವರ್ಗಾಯಿಸಿಕೊಂಡಿದ್ದಾರೆ. ಆನಂತರ ಮತ್ತೆ ಕರೆ ಮಾಡಿದ ವ್ಯಕ್ತಿ ಬಹುಮಾನದ ಹಣ ಮೂರು ಪಟ್ಟು ಹೆಚ್ಚಾಗಿರುವುದರಿಂದ ಇನ್ನೂ 8 ಲಕ್ಷ ರೂ.ಗಳನ್ನು ಪಾವತಿಸಬೇಕು ಎಂದು ತಿಳಿಸಿದಾಗ ಅನುಮಾನಗೊಂಡ ಪ್ರಸನ್ನ ಅವರು ಮಂಡ್ಯ ಜಿಲ್ಲಾ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

**ಮೈಸೂರು ವರದಿ:** ಟಾಸ್ಕ್‌ಗಳನ್ನು ಪೂರೈಸಿದರೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ ಮೈಸೂರಿನ ಬೋಗಾದಿ ನಿವಾಸಿ ಎಂ.ಪಿ. ದಿಲೀಪ (30) ಎಂಬುವರಿಗೆ ಆನ್‌ಲೈನ್ ಮೂಲಕ 17,32,297 ರೂ.ಗಳನ್ನು ವಂಚಿಸಲಾಗಿದ್ದು, ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.













### ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ

# ಸುತ್ತೂರು ಜಾತ್ರೆಯ ವಸ್ತುಪ್ರದರ್ಶನಕ್ಕೆ 32 ಮಾದರಿ ಆಯ್ಕೆ




ಮೈಸೂರು, ಡಿ.20(ಪಿಎಂ)– ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಸರಸ್ವತಿಪುರಂ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ಮತ್ತು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಚಿತ್ರಣ ಅನಾವರಣಗೊಂಡಿತು.

ಸದರಿ ವಸ್ತುಪ್ರದರ್ಶನದಲ್ಲಿದ್ದ ಮಾದರಿಗಳ ಪೈಕಿ 32 ಮಾದರಿಗಳು 2024ರ ಫೆಬ್ರವರಿಯಲ್ಲಿ ನಡೆಯುವ ಸುತ್ತೂರು ಜಾತ್ರೆ ಶೈಕ್ಷಣಿಕ ವಸ್ತು ಪ್ರದರ್ಶನಕ್ಕೆ ಆಯ್ಕೆಯಾದವು. ಆಹಾರ ಮತ್ತು ಪೌಷ್ಟಿಕತೆ, ಸಮಾಜ ವಿಜ್ಞಾನ, ಜೀವಶಾಸ್ತ್ರ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಭಾಷೆಗಳು ಮತ್ತು 2047 ಮಿಷನ್ ಆಫ್ ಇಂಡಿಯಾ ಸೇರಿದಂತೆ ಕ್ರೀಡೆಗಳಿಗೆ ಸಂಬಂಧಿಸಿದ ಹಲವು ಮಾದರಿಗಳು ಇಂದು ಪ್ರದರ್ಶನಗೊಂಡವು.

ಪೋಷಕರು, ಸ್ಥಳೀಯರು ಮತ್ತು ವಿವಿಧ ಶಾಲೆಯ ಮಕ್ಕಳು ಕುತೂಹಲದಿಂದ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಚಂದ್ರಯಾನ–3 ಮಾದರಿಯ ರಾಕೆಟ್ ಉಡಾವಣೆ ಮಾಡುವ ಮೂಲಕ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ಜೆಎಸ್‌ಎಸ್ ಸರಸ್ವತಿಪುರಂ ಕ್ಲಸ್ಟರ್ ವ್ಯಾಪ್ತಿಗೆ ಒಳಪಟ್ಟ 7 ಶಾಲೆಗಳಾದ ಮೇಟಗಳ್ಳಿ, ಸರಸ್ವತಿಪುರಂ, ಶ್ರೀರಾಂಪುರ, ಉದಯಗಿರಿ, ಬನ್ನಿಮಂಟಪ, ನಾಚನಹಳ್ಳಿಪಾಳ್ಯ, ವಿಜಯನಗರ ಶಾಲೆಗಳಲ್ಲಿ ಶಾಲಾ ಹಂತದ ವಸ್ತು ಪ್ರದರ್ಶನ ಏರ್ಪಡಿಸಿ, ಇಲ್ಲಿ ಆಯ್ಕೆಯಾದ ವಿವಿಧ ಒಟ್ಟು 129 ಮಾದರಿಗಳನ್ನು ವೀಕ್ಷಣೆಗೆ ಇಡಲಾಗಿತ್ತು.

ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ.ಟಿ. ಶಿವಲಿಂಗಸ್ವಾಮಿ, ಮಹಾರಾಣಿ ಕಾಲೇಜಿನ ರಸಾಯನಶಾಸ್ತ್ರ ಸಹ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ, ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ.ವಿಜಯ ಗುರು ಮಂಜುನಾಥ್, ಸಸ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಸ್ವಾಮಿ, ನಿವೃತ್ತ ಪ್ರಾಂಶುಪಾಲ ಕೆ.ಎಸ್. ಮರಿಸ್ವಾಮಿ, ನಿವೃತ್ತ ಮುಖ್ಯಶಿಕ್ಷಕರಾದ ನಾಗರಾಜ ಚಾರ್ ರಾಜಪ್ಪ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕರಾದ ಚನ್ನಬಸಪ್ಪ ಉದ್ಘಾಟನಾ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದರು. ಶಾಲೆಯ ಮುಖ್ಯ ಶಿಕ್ಷಕ ಎನ್.ಪಿ. ಸತೀಶ್ ಸೇರಿದಂತೆ ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಸ್ಪರ್ಧೆಗೆ ಅನರ್ಹ

### ಕೊಲೊರಾಡೊ ಕೋರ್ಟ್ ಮಹತ್ವದ ತೀರ್ಪು



ವಾಷಿಂಗ್ಟನ್, ಡಿ.20– ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಮತ್ತೊಂದು ಹಿನ್ನಡೆಯುಂಟಾಗಿದ್ದು, ಅಮೆರಿಕ ಅಧ್ಯಕ್ಷೀಯ ಚುನಾವಣೆ ಸ್ಪರ್ಧೆಗೆ ಡೊನಾಲ್ಡ್ ಟ್ರಂಪ್ ಅನರ್ಹ ಎಂದು ಕೊಲೊರಾಡೊ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಡೊನಾಲ್ಡ್ ಟ್ರಂಪ್ ಬೆಂಬಲಿಗರು ಅಮೆರಿಕದ ಕ್ಯಾಪಿಟೋಲ್ (ಸಂಸತ್ತು) ಕಟ್ಟಡದ ಮೇಲೆ 2021ರಲ್ಲಿ ನಡೆಸಿದ ದಾಳಿ ಪ್ರಕರಣದಲ್ಲಿ ಟ್ರಂಪ್ ವಹಿಸಿದ್ದ ಪಾತ್ರದ ಹಿನ್ನೆಲೆಯಲ್ಲಿ ಅವರನ್ನು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಿ, ಕೊಲೊರಡೊ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನ ಹಿನ್ನೆಲೆಯಲ್ಲಿ ಅಮೆರಿಕದ ಸಂವಿಧಾನದ ತೀರಾ ಅಪರೂಪಕ್ಕೆ ಬಳಸಲಾಗುವ ನಿಬಂಧನೆಯಡಿ ಅನರ್ಹಗೊಂಡ ಮೊದಲ ಅಧ್ಯಕ್ಷೀಯ ಅಭ್ಯರ್ಥಿ ಎಂಬ ಕುಖ್ಯಾತಿಗೆ ಟ್ರಂಪ್ ಪಾತ್ರರಾಗಿದ್ದಾರೆ.

ಈ ನಿಬಂಧನೆಯಡಿ ದಂಗೆ ಅಥವಾ ಬಂಡಾಯ ನಡೆಸುವಲ್ಲಿ ಶಾಮೀಲಾದ ವ್ಯಕ್ತಿಗಳು ದೇಶದ ಅತ್ಯುನ್ನತ ಹುದ್ದೆ ಅಲಂಕರಿಸುವುದನ್ನು ತಡೆಯಲಾಗುತ್ತದೆ. ಅಮೆರಿಕ ಸರ್ಕಾರದ ವಿರುದ್ಧ ಹಿಂಸೆಯನ್ನು ಪ್ರಚೋದಿಸಿದ ಕಾರಣಕ್ಕಾಗಿ 2024ರ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಉಮೇದುವಾರಿಕೆಯ ಮುಂಚೂಣಿಯಲ್ಲಿದ್ದ ಟ್ರಂಪ್ ಅವರನ್ನು ಅಮೆರಿಕದ ಸಂವಿಧಾನ ನಿಷೇಧಿಸುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಸದ್ಯಕ್ಕೆ ಈ ತೀರ್ಪು, ದೇಶದಲ್ಲಿ ಮಾರ್ಚ್ 5ರಂದು ನಡೆಯುವ ರಿಪಬ್ಲಿಕನ್ ಪ್ರಾಥಮಿಕ ಚುನಾವಣೆಗೆ ಮಾತ್ರ ಪರಿಣಾಮ ಬೀರದೆ, ನವೆಂಬರ್ 6ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಯ ಮೇಲೂ ಪರಿಣಾಮ ಬೀರುವ ನಿರೀಕ್ಷೆ ಇದೆ.



ಮೈಸೂರು ನೈಋತ್ಯ ರೈಲ್ವೆ ವಿಭಾಗದ ಸಲಹಾ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ವಕೀಲ ಶಿವರಾಜ್ ಅವರನ್ನು ಶಾಸಕ ಟಿ.ಎಸ್.ಶ್ರೀವತ್ಸ ಅಭಿನಂದಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಜಯರಾಮ್, ಕಿಶೋರ್, ನಿಶಾಂತ್, ಕೀರ್ತಿ ಮತ್ತಿತರರು ಉಪಸ್ಥಿತರಿದ್ದರು.